ಬುಧವಾರ, ಜನವರಿ 29, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಧರಣಿ

ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು

72198 21111 | BAJAJ SECURE • AMC • ROAD SIDE ASSISTANCE

*ಷರತ್ತುಗಳು ಮತ್ತು ನಿಯಮಗಳು ಅನ್ವಯಿಸುತ್ತವೆ. ಎಕ್ಸ್-ಶೋರೂಮ್ ಬೆಲೆ ಉಲ್ಲೇಖಿಸಲಾಗಿದೆ ಎಂಬುದು ನಿರ್ದಿಷ್ಟ ಪಲ್ಸರ್ ಮಾದರಿಯ ಪ್ರಾರಂಭಿಕ ಬೆಲೆ. ಬಜಾಜ್ ಆಟೋ ಯಾವುದೇ ಆಫರ್‌ಗಳು ಮತ್ತು ಬೆಲೆಗಳನ್ನು ಮುನ್ನೋಟ ಇಲ್ಲದೆ ಹಿಂಪಡೆಯಲು/ತಿದ್ದುಪಡಿಸಲು ಹಕ್ಕು ಕಾಯ್ದಿರಿಸುತ್ತದೆ, ಇದು ಮಾದರಿ ಮತ್ತು ರಾಜ್ಯದ ಪ್ರಕಾರ ಬದಲಾಗಬಹುದು. ಎಎಮ್‌ಸಿ ಆಯ್ದ ಮಾದರಿಗಳು ಮತ್ತು ನಿರ್ದಿಷ್ಟ ರಾಜ್ಯಗಳಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಿಮ್ಮ ಹತ್ತಿರದ ಬಜಾಜ್ ಡೀಲರ್ ಅನ್ನು ಸಂಪರ್ಕಿಸಿ. ರೋಡ್‌ಸೈಡ್ ಅಸಿಸ್ಟನ್ಸ್ ತೃತೀಯ ಪಕ್ಷದ ಸೇವಾ ಪೂರೈಕೆದಾರರಿಂದ ಒದಗಿಸಲಾಗುತ್ತದೆ ಮತ್ತು ಅವರ ಷರತ್ತುಗಳು ಮತ್ತು ನಿಯಮಗಳಿಗೆ ಅಧೀನವಾಗಿದೆ. ಇ-ಕಾಮರ್ಸ್ ವೇದಿಕೆಗಳಲ್ಲಿ ಆಫರ್‌ಗಳು ಅವರ ಸ್ವಂತ ಷರತ್ತುಗಳು ಮತ್ತು ನಿಯಮಗಳಿಗೆ ಅಧೀನವಾಗಿರುತ್ತವೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur** : KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, JAGASHREE BAJAJ: 9448634872. • **Chikodi** JAGASHREE BAJAJ: 7349773953 • **Gokak** JAGASHREE BAJAJ: 7349773965 • **Bellary AADI BAJAJ: 9606050246• Raichur SHREE BALAJI AUTOMOBILES: 9880235539• Koppal I A BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.

‘ಬ್ಯಾಂಕ್‌ಗಳಲ್ಲಿ ಕ್ಷೀಣಿಸುತ್ತಿದೆ ಕನ್ನಡಿಗರ ಸಂಖ್ಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್‌ಗಳ ಆಡಳಿತದಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣಿಸುತ್ತಿದ್ದು, ಇದು ಮುಂದಿನ ದಿನಗಳಲ್ಲಿ ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗಲಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿಯ (ಎಸ್‌ಎಲ್‌ಬಿಸಿ) ಅಧಿಕಾರಿಗಳ ಜತೆಗೆ ಪ್ರಾಧಿಕಾರವು ಮಂಗಳವಾರ ಹಮ್ಮಿಕೊಂಡಿದ್ದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಬ್ಯಾಂಕ್‌ಗಳು ಸಾರ್ವಜನಿಕ ಸಂಪರ್ಕ ವಿಭಾಗಗಳಲ್ಲಿ ಸ್ಥಳೀಯ ಭಾಷೆ ಬಲ್ಲವರನ್ನು ನೇಮಿಸಬೇಕಿದೆ. ಇತ್ತೀಚೆಗೆ ಕೇಂದ್ರ ಸಚಿವರನ್ನು ನವದೆಹಲಿಯಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಈ ಬಗ್ಗೆ ಭರವಸೆ ದೊರೆತಿದೆ. ಅದೇ ಪ್ರಕಾರ ಎಸ್‌ಎಲ್‌ಬಿಸಿ ತನ್ನ ಅಧೀನದ ಬ್ಯಾಂಕ್‌ಗಳಿಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದರು.

ಪುರುಷೋತ್ತಮ ಬಿಳಿಮಲೆ

‘ಆಡಳಿತದಲ್ಲಿ ಕನ್ನಡ ಭಾಷೆಗೆ ಆದ್ಯತೆ ನೀಡುವ ಮೂಲಕ, ಬ್ಯಾಂಕ್‌ಗಳು ಜನಸ್ನೇಹಿಯಾಗಬೇಕು. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಬ್ಯಾಂಕ್‌ಗಳ ಪ್ರತಿನಿಧಿಗಳೊಂದಿಗೆ ಶೀಘ್ರದಲ್ಲೆ ಸಭೆ ನಡೆಸಿ, ಸೂಚನೆಗಳನ್ನು ನೀಡಲಾಗುತ್ತದೆ’ ಎಂದು ಹೇಳಿದರು.

‘ಬ್ಯಾಂಕ್‌ಗಳಲ್ಲಿನ ಹೊರ ಗುತ್ತಿಗೆ ನೇಮಕಾತಿಗಳಲ್ಲಿ ಕನ್ನಡಿಗರಿಗೆ ಅವಕಾಶ ಕಲ್ಪಿಸುವುದು ಅತ್ಯಗತ್ಯ. ಈ ಕುರಿತಂತೆ ಟೆಂಡರ್ ನಿಯಮಗಳಲ್ಲಿ ಸ್ಪಷ್ಟವಾಗಿ ಷರತ್ತುಗಳನ್ನು ವಿಧಿಸಬೇಕು. ಹೊಸದಾಗಿ ನೇಮಕವಾಗುವ ಸಿಬ್ಬಂದಿಗೆ ಸ್ಥಳೀಯ ಭಾಷೆಯನ್ನು ಬೋಧಿಸಲು ಬ್ಯಾಂಕ್‌ಗಳ ತರಬೇತಿ ಕೇಂದ್ರಗಳಲ್ಲಿ ಕನ್ನಡ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಕ್ರಮವಹಿಸಬೇಕು’ ಎಂದು ತಿಳಿಸಿದರು.

ಕಿದ್ವಾಯಿ: ಔಷಧ ಕೊರತೆ– 2 ತಿಂಗಳು ಸ್ಥಗಿತಗೊಂಡಿದ್ದ ರೋಗಿಗಳ ನೋಂದಣಿ

ಅಸ್ಥಿಮಜ್ಜೆ ಕಸಿಗೂ ತೊಡಕು

• ವರುಣ ಹೆಗಡೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅಸ್ಥಿಮಜ್ಜೆ ಕಸಿಗೆ (ಬೋನ್ ಮ್ಯಾರೊ) ಅಗತ್ಯವಿರುವ ಔಷಧಗಳ ಖರೀದಿ ಪ್ರಕ್ರಿಯೆ ವಿಳಂಬವಾದ್ದರಿಂದ ರಕ್ತದ ಕ್ಯಾನ್ಸರ್ ಎದುರಿಸುತ್ತಿರುವವರು ಸಮಸ್ಯೆ ಎದುರಿಸಿದ್ದು, ಸುಮಾರು ಎರಡು ತಿಂಗಳ ಬಳಿಕ ಮತ್ತೆ ಹೊಸ ರೋಗಿಗಳ ನೋಂದಣಿಯನ್ನು ಸಂಸ್ಥೆ ಪ್ರಾರಂಭಿಸಿದೆ.

ಮೂಳೆ ಕ್ಯಾನ್ಸರ್, ಥಲಸ್ಸೇಮಿಯಾ ಹಾಗೂ ರಕ್ತದ ಕ್ಯಾನ್ಸರ್ ಎದುರಿಸುತ್ತಿರುವವರಿಗೆ ಅಸ್ಥಿಮಜ್ಜೆ ಕಸಿ ಚೇತರಿಕೆಗೆ ಸಹಕಾರಿಯಾಗಲಿದೆ. ಈ ಕಸಿಗೆ ಒಳಪಡುವವರಿಗೆ ಅಗತ್ಯವಿರುವ ಔಷಧಗಳ ಕೊರತೆ ಸಂಸ್ಥೆಯಲ್ಲಿ ಎದುರಾಗಿದ್ದರಿಂದ ಕೆಲ ದಿನಗಳು ಹೊಸ ರೋಗಿಗಳ ನೋಂದಣಿಯನ್ನು ಸ್ಥಗಿತಗೊಳಿಸಿ, ಕಸಿ ಪ್ರಕ್ರಿಯೆಗೆ ಒಳಪಟ್ಟವರಿಗೆ ಮಾತ್ರ ಚಿಕಿತ್ಸೆ ಮುಂದುವರಿಸಲಾಗಿತ್ತು.

ಇದರಿಂದಾಗಿ ಕಸಿಗೆ ಎದುರು ನೋಡುತ್ತಿರುವವರಿಗೆ ಚಿಕಿತ್ಸೆ ವಿಳಂಬವಾಗಿ, ಕಾಯುವವರ ಸಂಖ್ಯೆಯೂ ಹೆಚ್ಚಾಗಿದೆ. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಥಾಪಿಸಿದ ಮೂಲ ನಿಧಿಯಡಿ (ಕಾರ್ಪಸ್ ಫಂಡ್) ಔಷಧ ಖರೀದಿ ಪ್ರಕ್ರಿಯೆ ನಡೆಸಿ, ಅಸ್ಥಿಮಜ್ಜೆ ಕಸಿಗೆ ನೋಂದಣಿಯನ್ನು ಪುನರಾರಂಭಿಸಲಾಗಿದೆ.

2022ರ ಏಪ್ರಿಲ್‌ನಲ್ಲಿ ಸಂಸ್ಥೆಯಲ್ಲಿ ಬೋನ್ ಮ್ಯಾರೊ ಘಟಕ ಕಾರ್ಯಾರಂಭ ಮಾಡಿದೆ. ರಾಜ್ಯದಲ್ಲಿ ಅಸ್ಥಿಮಜ್ಜೆ ಘಟಕ ಹೊಂದಿರುವ ಏಕೈಕ ಸರ್ಕಾರಿ ಆಸ್ಪತ್ರೆ ಕಿದ್ವಾಯಿ ಗಂಥಿ ಸಂಸ್ಥೆ. ಈ ಘಟಕವನ್ನು ₹10 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, 13 ಸಾವಿರ ಚದರ ಅಡಿ ವಿಸ್ತೀರ್ಣ ಹೊಂದಿದೆ. ಒಂಬತ್ತು ಸಾಮಾನ್ಯ ಹಾಗೂ ಮೂರು ಐಸಿಯು ಹಾಸಿಗೆಗಳನ್ನು ಘಟಕ ಒಳಗೊಂಡಿದೆ. ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ ವಯಸ್ಕರು ಹಾಗೂ ಮಕ್ಕಳಿಗೆ ಇಲ್ಲಿ ಅಸ್ಥಿಮಜ್ಜೆ ಕಸಿ ಮಾಡಲಾಗುತ್ತದೆ. ದಾನಿಗಳ ನೆರವಿನಿಂದ ಬಹುತೇಕ ಉಚಿತವಾಗಿ ನಡೆಸುತ್ತಿದ್ದರಿಂದ ಸಾವಿರಾರು ಮಂದಿ ಈ ಕಸಿಗೆ ಎದುರು ನೋಡುತ್ತಿದ್ದಾರೆ.

ಸದ್ಯ ಮೂವರಿಗೆ ಪ್ರಕ್ರಿಯೆ: ಘಟಕದಲ್ಲಿ ಈವರೆಗೆ 105 ಮಂದಿಗೆ ಅಸ್ಥಿಮಜ್ಜೆ ಕಸಿ ನಡೆಸಲಾಗಿದೆ. ಈ ಕಸಿಗಳಲ್ಲಿ ಯಶಸ್ಸಿನ ಪ್ರಮಾಣ ಶೇ 99ರಷ್ಟಿದೆ. ಮಕ್ಕಳಲ್ಲಿ ರಕ್ತದ ಕ್ಯಾನ್ಸರ್ ಹೆಚ್ಚುತ್ತಿರುವುದರಿಂದ ಮಕ್ಕಳ ಅಸ್ಥಿಮಜ್ಜೆ ಕಸಿಗೂ ಘಟಕದಲ್ಲಿ ಆದ್ಯತೆ ನೀಡಲಾಗುತ್ತಿದೆ. ಸದ್ಯ ಮೂವರು ಕ್ಯಾನ್ಸರ್ ಪೀಡಿತರಿಗೆ ಅಸ್ಥಿಮಜ್ಜೆ ಕಸಿ ಪ್ರಕ್ರಿಯೆ ನಡೆಸಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂಪಾಯಿ ವೆಚ್ಚವಾಗುವುದರಿಂದ ಇಲ್ಲಿ ಈ ಕಸಿಗೆ ಬೇಡಿಕೆ ಹೆಚ್ಚಿದೆ. ಈಗ ಔಷಧ ಹಾಗೂ ಹಾಸಿಗೆ ಲಭ್ಯತೆ ಅನುಸಾರ ರೋಗಿಗಳ ನೋಂದಣಿಗೆ ಸಂಸ್ಥೆ ನಿರ್ಧರಿಸಿದೆ.

‘ಔಷಧ ಪೂರೈಕೆ ಮಾಡುತ್ತಿದ್ದ ಕಂಪನಿಗೆ ಬಾಕಿ ಹಣ ಪಾವತಿಸದಿದ್ದರಿಂದ ಕಂಪನಿಯು ಔಷಧ ಪೂರೈಕೆಯನ್ನು ಸ್ಥಗಿತಗೊಳಿಸಿತ್ತು. ಇದರಿಂದ ಕೆಲ ದಿನಗಳು ಘಟಕದಲ್ಲಿ ಔಷಧದ ಸಮಸ್ಯೆ ಉಂಟಾಗಿ, ಹೊಸ ರೋಗಿಗಳ ನೋಂದಣಿ ಪ್ರಕ್ರಿಯೆ ನಡೆದಿರಲಿಲ್ಲ. ಈಗ ಮತ್ತೆ ನೋಂದಣಿ ಪ್ರಾರಂಭಿಸಲಾಗಿದೆ’ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

‘ರಕ್ತದ ಕ್ಯಾನ್ಸರ್‌ನಿಂದ (ಲ್ಯುಕೇಮಿಯಾ) ಚೇತರಿಸಿಕೊಳ್ಳಲು ಸಹೋದರನಿಗೆ ವೈದ್ಯರು ಅಸ್ಥಿಮಜ್ಜೆ ಕಸಿಗೆ ಶಿಫಾರಸು ಮಾಡಿದ್ದರು. ಸಂಸ್ಥೆಯ ಘಟಕ ಸಂಪರ್ಕಿಸಿದಾಗ ನೋಂದಾಯಿಸಿಕೊಂಡಿಲ್ಲ’ ಎಂದು ತುಮಕೂರಿನ ವ್ಯಕ್ತಿಯೊಬ್ಬರು ತಿಳಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಕಸಿ ದುಬಾರಿ

ಅಸ್ಥಿಮಜ್ಜೆ ಕಸಿಗೆ ಖಾಸಗಿ ಆಸ್ಪತ್ರೆಗಳಲ್ಲಿ ₹40 ಲಕ್ಷದವರೆಗೂ ವೆಚ್ಚವಾಗುತ್ತದೆ. ದಾನಿಗಳ ಹಾಗೂ ವಿವಿಧ ಸರ್ಕಾರಿ ಯೋಜನೆಗಳಡಿ ಬಹುತೇಕ ಉಚಿತವಾಗಿ ಕಿದ್ವಾಯಿ ಗಂಥಿ ಸಂಸ್ಥೆಯ ಬೋನ್ ಮ್ಯಾರೊ ಘಟಕದಲ್ಲಿ ಕಸಿ ನಡೆಸಲಾಗುತ್ತಿದೆ. ರೋಗಿಯೊಬ್ಬರಿಗೆ ಅವರದೇ ದೇಹದ ಆರೋಗ್ಯವಂತ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆದು ನಡೆಸುವ ಕಸಿಗೆ ₹7 ಲಕ್ಷ ವೆಚ್ಚವಾದರೆ, ಕ್ಯಾನ್ಸರ್ ಪೀಡಿತ ವ್ಯಕ್ತಿಯ ದೇಹಕ್ಕೆ ಹೊಂದಿಕೊಳ್ಳುವ ಮಜ್ಜೆಯನ್ನು ಬೇರೆಯವರಿಂದ ಪಡೆದು, ಕಸಿ ಮಾಡಿದಲ್ಲಿ ₹21 ಲಕ್ಷದವರೆಗೆ ಸಂಸ್ಥೆಯ ಘಟಕದಲ್ಲಿ ಚಿಕಿತ್ಸಾ ವೆಚ್ಚವಾಗಲಿದೆ.

ರಾಜ್ಯದಲ್ಲಿ ‘ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ’ (ಎಬಿ–ಎಆರ್‌ಕೆ) ಯೋಜನೆಯಡಿ ಈಗ ಅಸ್ಥಿಮಜ್ಜೆ ಕಸಿಯನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದ್ದು, ಬಿಪಿಎಲ್ ಕುಟುಂಬದ ಸದಸ್ಯರಿಗೆ ಈ ಯೋಜನೆಯಡಿ ಉಚಿತವಾಗಿ ಕಸಿ ಚಿಕಿತ್ಸೆ ದೊರೆಯಲಿದೆ. ಜೀವ ಸಾರ್ಥಕತೆ ಸಂಸ್ಥೆಯಡಿ ಹೆಸರು ನೋಂದಾಯಿಸಿಕೊಂಡವರಿಗೆ ಅಸ್ಥಿಮಜ್ಜೆ ಕಸಿಯನ್ನು ಒದಗಿಸಲಾಗುತ್ತದೆ. ಇದರಿಂದಾಗಿ ಈ ಕಸಿಗೆ ಬೇಡಿಕೆ ಹೆಚ್ಚಿದೆ.

> ಸಂಸ್ಥೆಯಲ್ಲಿರುವ ಬೋನ್ ಮ್ಯಾರೊ ಘಟಕ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಹೊಸ ರೋಗಿಗಳ ನೋಂದಣಿ ನಡೆಯುತ್ತಿದೆ. ವಿವಿಧ ಔಷಧಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
>
> **ಡಾ. ರವಿ ಅರ್ಜುನ್**
> ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸಿಇಟಿ ಅರ್ಜಿ ದೃಢೀಕರಣಕ್ಕೆ ‘ಆಧಾರ್’ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ದೃಢೀಕರಣಕ್ಕಾಗಿ ‘ಆಧಾರ್’ ಬಳಸಲು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಅನುಮತಿ ನೀಡಿದೆ.

‘ಸೀಟ್ ಬ್ಲಾಕಿಂಗ್’ನಂತಹ ದಂಧೆಗೆ ಕಡಿವಾಣ ಹಾಕಲು ಈ ಬಾರಿ ಹಲವು ಸುಧಾರಣಾ ಕ್ರಮ ಕೈಗೊಂಡಿದ್ದ ಪ್ರಾಧಿಕಾರ, ಒಂದು ಮೊಬೈಲ್ ಸಂಖ್ಯೆಯಿಂದ ಒಟಿಪಿ ಬಳಸಿಕೊಂಡು ಒಂದು ಅರ್ಜಿ ಸಲ್ಲಿಸುವುದು ಹಾಗೂ ಮುಖಚಹರೆ ದಾಖಲಿಸುವುದನ್ನು ಕಡ್ಡಾಯಗೊಳಿಸಿತ್ತು. ಈಗ ಅಭ್ಯರ್ಥಿಗಳ ಆಧಾರ್ ದೃಢೀಕರಣಕ್ಕೂ ಅನುಮತಿ ಪಡೆದಿದೆ. ಅರ್ಜಿಯ ಜತೆಗೆ ಆಧಾರ್ ಸಲ್ಲಿಕೆ ಕಡ್ಡಾಯವಲ್ಲ. ಆದರೆ, ಮೊಬೈಲ್ ಸಂಖ್ಯೆ ಇರುವ ಆಧಾರ್ ಸಲ್ಲಿಸಿದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಸೈಬರ್ ಕೇಂದ್ರಗಳ ಮೇಲೆ ವಿದ್ಯಾರ್ಥಿಗಳ ಅವಲಂಬನೆ ಕಡಿಮೆ ಮಾಡಲು ಗ್ರಾಮ ಒನ್ ಕೇಂದ್ರಗಳ ಕಂಪ್ಯೂಟರ್ ನಿರ್ವಾಹಕರಿಗೆ ತರಬೇತಿ ನೀಡಲಾಗಿದೆ. ಜ. 23ರಿಂದ 2025ನೇ ಸಾಲಿನ ಸಿಇಟಿ ಅರ್ಜಿ ಸಲ್ಲಿಕೆ ಆರಂಭವಾಗಿದ್ದು, 42,574 ಅರ್ಜಿಗಳು ಸಲ್ಲಿಕೆಯಾಗಿವೆ.

ಷರತ್ತುಬದ್ಧ ಅನುಮೋದನೆ

‘ಶರಾವತಿ ಪಂಪ್ಡ್ ಸ್ಟೋರೇಜ್’; ಸಿ.ಎಂ ಅಧ್ಯಕ್ಷತೆಯಲ್ಲಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ಅನುಷ್ಠಾನಗೊಳಿಸುತ್ತಿರುವ ₹8,005 ಕೋಟಿ ವೆಚ್ಚದ ‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆಗೆ ರಾಜ್ಯ ವನ್ಯಜೀವಿ ಮಂಡಳಿ ಷರತ್ತು ಬದ್ಧ ಅನುಮೋದನೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗೃಹ ಕಚೇರಿ ಕೃಷ್ಣಾದಲ್ಲಿ ಮಂಡಳಿಯ ಸಭೆ ಮಂಗಳವಾರ ನಡೆಯಿತು.

‘ಯೋಜನೆಗೆ ಸಂಬಂಧಿಸಿದಂತೆ ಇನ್ನಷ್ಟು ವಿವರಣೆ ಪಡೆಯಬೇಕು. ಈಗಿನ ಪ್ರಸ್ತಾವದಲ್ಲಿ, ವಿದ್ಯುತ್ ಮಾರ್ಗ ನಿರ್ಮಾಣದ ಬಗ್ಗೆ ಸ್ಪಷ್ಟ ಚಿತ್ರಣ ಇಲ್ಲ. ಹೀಗಾಗಿ, ಉತ್ಪಾದನೆಯಾಗುವ ವಿದ್ಯುತ್ ಅನ್ನು ಹೇಗೆ ಸರಬರಾಜು ಮಾಡಲಾಗುತ್ತದೆ ಎಂಬ ವಿವರಣೆ ನೀಡಬೇಕು. ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಬೇಕು. ಈಗಿರುವ ಸುರಂಗವನ್ನೇ ಕೊರೆದು ದೊಡ್ಡದು ಮಾಡಿ ಮರಗಳಿಗೆ ಯಾವುದೇ ಆಪತ್ತು ಉಂಟಾಗದಂತೆ ನೋಡಿಕೊಳ್ಳಬೇಕು ಎಂಬ ಷರತ್ತಿನ ಮೇಲೆ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ’ ಎಂದು ಮೂಲಗಳು ಹೇಳಿವೆ.

ಶರಾವತಿ ವನ್ಯಜೀವಿಧಾಮ ವ್ಯಾಪ್ತಿಯ ಶಿವಮೊಗ್ಗ, ಸಾಗರ ಹಾಗೂ ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಡಿಸಿಎಫ್) 134 ಎಕರೆ ಕಾಡು ಬಳಸುವ ಈ ಯೋಜನೆಯ ಸ್ಥಳ ಪರಿಶೀಲನೆ ನಡೆಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ (ಪಿಸಿಸಿಎಫ್) ವಿಸ್ತೃತ ವರದಿ ಸಲ್ಲಿಸಿದ್ದರು.

ಈ ಯೋಜನೆಯ ಯೋಜನೆಯಿಂದ ಪ್ರತಿಕೂಲ ಪರಿಣಾಮಗಳ ಬಗ್ಗೆ ಮೂವರು ಡಿಸಿಎಫ್‌ಗಳು ವಿವರಿಸಿದ್ದರು. ಆದರೂ ಯೋಜನೆಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಆ ನಂತರ ಡಿಸಿಎಫ್‌ಗಳು ಯೋಜನೆಯ ಪರವಾಗಿ ಶಿಫಾರಸು ಮಾಡಿದ್ದಾರೆ. ಜತೆಗೆ, ಯೋಜನೆಯಿಂದ ಪಶ್ಚಿಮ ಘಟ್ಟದ ಮೇಲಾಗುವ ಪರಿಣಾಮಗಳ ಬಗ್ಗೆಯೂ ಸುದೀರ್ಘ ಟಿಪ್ಪಣಿ ಬರೆದಿದ್ದರು.

ಮಂಡಳಿಯ ಉಪಾಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ಸದಸ್ಯರು ಸಭೆಯಲ್ಲಿ ಇದ್ದರು.

ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಬಳಿಯ ಶರಾವತಿ ಕಣಿವೆಯ ದೃಶ್ಯ.

ಹೆಸರಘಟ್ಟ ಸಂರಕ್ಷಿತ ಮೀಸಲು ಪ್ರದೇಶಕ್ಕೂ ಒಪ್ಪಿಗೆ

5,010 ಎಕರೆಯಷ್ಟಿದ್ದ ಹೆಸರಘಟ್ಟ ಹುಲ್ಲುಗಾವಲನ್ನು 5,678 ಎಕರೆ 32 ಗುಂಟೆಗೆ ವಿಸ್ತರಿಸಿ ‘ಸಂರಕ್ಷಿತ ಮೀಸಲು ಪ್ರದೇಶ’ದ ಮಾನ್ಯತೆ ನೀಡುವ ಪ್ರಸ್ತಾವಕ್ಕೂ ಮಂಡಳಿ ಒಪ್ಪಿಗೆ ನೀಡಿದೆ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆ ಕರಡಿಧಾಮದ ಮೂಲಕ ಜೆಎಸ್‌ಡಬ್ಲ್ಯು ರಿನಿವೇಬಲ್ ಎನರ್ಜಿ ಕಂಪನಿಯ 33 ಕೆ.ವಿ ವಿದ್ಯುತ್ ತಂತಿಗಳನ್ನು ಭೂಮಿಯ ಒಳಗಿನಿಂದ ಸಾಗಿಸಿ ಸಂಪರ್ಕಿಸುವ ಕಲ್ಪಿಸುವ ಯೋಜನೆಗೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹೆಗ್ಗಾರ ಮಾಗೋಡ ನಗರಬಸ್ತಿಕೇರಿಯಲ್ಲಿ 32 ಕಿ.ಮೀ ಸಂಪರ್ಕ ಕಲ್ಪಿಸುವ ಕಲ್ಕಡ್ಡೆ ಸೇತುವೆ ನಿರ್ಮಾಣಕ್ಕೆ ಮಂಡಳಿಯು ಅನುಮೋದನೆ ನೀಡಿದೆ.

ಪರಿಮಳದ ಬೀಜ ಹೊತ್ತ ಗಾಳಿ

• ಪಿ.ಚಂದ್ರಿಕಾ

ನುಡಿ ನಮನ

ಆಕೃತಿ ಚಿಕ್ಕದು- ಶಕ್ತಿ ಅಗಾಧ. ಕಣ್ಣು ಚಿಕ್ಕದು. ಆದರೆ, ತೀಕ್ಷ್ಣ-ನೋಟ ಮಾತ್ರ ವಿಶಾಲ. ಉತ್ಸಾಹಕ್ಕೆ ಜೀವ ಮೂಡಿದ ಹಾಗೆ ಸದಾ ಚಟುವಟಿಕೆ. ಕಣ್ಣುಮುಚ್ಚಿ ಮಾತು ಕೇಳಿದರೆ ಬೇಂದ್ರೆಯ ಮಾತುಗಳನ್ನೇ ಕೇಳಿದ ಅನುಭವ. ಹೀಗೆ ಕಾವ್ಯದ-ಗಂಧವನ್ನು ಕನ್ನಡದ ನೆಲದ ತುಂಬಾ ಹರಡಿದವರು ಜಿ. ಕೃಷ್ಣಪ್ಪ– ನಿಜ ಅರ್ಥದ ನಾಡೋಜ. ನಾನು ಕಂಡಂತೆ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಬೇಂದ್ರೆ ಕಾರ್ಯಕ್ರಮಕ್ಕೆ ತಪ್ಪದೆ ಬರುತ್ತಿದ್ದರು. ಅಲ್ಲಿ ಪುಸ್ತಕಗಳನ್ನು ಖರೀದಿಸಿ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ನೀಡುತ್ತಿದ್ದರು. ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಲೇ ನಾಡಿನಾದ್ಯಂತ ಕಾವ್ಯದ ಪರಿಮಳದ ಬೀಜವನ್ನು ಬಿತ್ತುತ್ತಿದ್ದ ಅವರು ಬೇಂದ್ರೆ ಕಾವ್ಯಕ್ಕೆ ಬೆರಗಾಗಿ, ಅದರ ಬೆಡಗಿಗೆ ಪರವಶರಾಗಿದ್ದರು. ಜೀವನದ ಕೊನೆಯವರೆಗೂ ಉಸಿರಾಡಿದ್ದು ಬೇಂದ್ರೆಯವರನ್ನೇ. ಕಾವ್ಯಕಾರಣದ ಈ ಪ್ರೀತಿಗೆ ಸಾರಸ್ವತಲೋಕ ಅವರಿಗೆ ಅನ್ವರ್ಥವಾಗಿಟ್ಟ ಹೆಸರು ಬೇಂದ್ರೆ ಕೃಷ್ಣಪ್ಪ.

ಕೃಷ್ಣಪ್ಪ ಅವರು ಎಲ್ಲೆಲ್ಲಿ ಕೆಲಸ ಮಾಡಿದರೋ ಅಲ್ಲೆಲ್ಲಾ ಬೇಂದ್ರೆ ಹಬ್ಬವನ್ನು ಮಾಡಿದ್ದಾರೆ. ಹೀಗೆ ಧ್ಯಾನಿಸಿ, ಮಾತಾಡುತ್ತಾ, ಬರೆಯುತ್ತಾ, ‘ನಿನ್ನ ಹಾಡಿದೆನಲ್ಲದೆ ಸೈರಿಸಲಾರೆನಯ್ಯಾ’ ಎಂದು ಸಂಭ್ರಮಿಸುತ್ತಾ, ಕವಿಯೊಬ್ಬನನ್ನು ಜನಮಾನಸಕ್ಕೆ ತರುವುದನ್ನು ತಪವನ್ನಾಗಿಸಿಕೊಂಡವರು ಅವರು. ಬೇಂದ್ರೆ ಕಾವ್ಯವನ್ನು ಅರ್ಥ ಮಾಡಿಕೊಳ್ಳಲು ಭಾರತೀಯ ಪರಂಪರೆಯ ಅರಿವು ಅಗತ್ಯ ಎಂದು ನಂಬಿ, ಅದನ್ನು ಅನ್ವಯಿಸಿದವರು.

ಅಕಡೆಮಿಕ್ ಶಿಸ್ತಿಗೆ ಕೃಷ್ಣಪ್ಪನವರ ವಿಮರ್ಶೆ ಯಾವತ್ತೂ ಒಗ್ಗಿಕೊಳ್ಳಲಿಲ್ಲ. ತನ್ನ ಜಾಡಿನಲ್ಲೇ ಹರಿವ ನದಿ ಅದು. ಕಾವ್ಯಕ್ಕೆ ತನ್ನದೇ ಆದ ಮಾನದಂಡಗಳನ್ನು ಬಳಸಿ ಅರ್ಥಕ್ಕೊಗ್ಗುವ ಹಾಗೆ ಮಾಡಿಕೊಂಡರು. ಹಳಗನ್ನಡ-ಹೊಸಗನ್ನಡ ಎರಡೂ ಸಾಹಿತ್ಯದಲ್ಲೂ ಪ್ರವೇಶಿಕೆ ಪಡೆದರು. ಕಾವ್ಯದ ಜೊತೆಗಿನ ಅವರ ಹುಡುಕಾಟವೆಲ್ಲವೂ ಅಂತರಂಗ ಮತ್ತು ಬಹಿರಂಗದ ತೀವ್ರ ಶೋಧಗಳೇ ಹೌದು. ಆದ್ದರಿಂದ ಪದಗಳ ಅರ್ಥಕ್ಕಿಂತ ಸಂದರ್ಭವನ್ನು ಹಿಡಿದು ಹೊರಟುಬಿಡುತ್ತಿದ್ದರು.

ಕವಿ, ಪದಗಳ ಜೊತೆ ಆಡುವ ಆಟವನ್ನು ಲೀಲೆಯಾಗಿ ನೋಡುತ್ತಾ, ಅ ನೂ ಚಾ ನ ವಾ ದ ಅರ್ಥ ಪರಂಪರೆಯನ್ನು ಹುಡುಕಿದ ಪರಿಣಾಮ ಅವರಲ್ಲಿ ವಿನಮ್ರತೆ ಮನೆ ಮಾಡಿತ್ತು. ನಾನು ಅವರೊಂದಿಗೆ ತೀರಾ ವೈಯಕ್ತಿಕವಾಗಿ ಮಾತಾಡಿದ್ದು ಕಡಿಮೆಯೇ. ಅವರ ಮನೆಗೆ ಹೋದಾಗ ಕೂಡಾ ಯಾವುದೋ ಧ್ಯಾನದ ಹಾಗೆ ವಿಚಾರಗಳ ಜೊತೆಗೇ ಇರುತ್ತಿದ್ದರು. ಅದನ್ನೇ ನಮ್ಮೊಂದಿಗೂ ಹಂಚಿಕೊಳ್ಳುತ್ತಿದ್ದರು. ಆದರೆ ವಿಶಿಷ್ಟವಾಗಿ ಯೋಚಿಸುತ್ತಿದ್ದೇನೆ ಎನ್ನುವ ಹಮ್ಮು ಅವರಿಗಿರಲಿಲ್ಲ. ಅವರ ಭಾಷಣ ಕೇಳುವುದೂ ಚಂದವೇ. ಮಾತು, ಹಾಡು ಎರಡನ್ನೂ ಮಿಶ್ರ ಮಾಡುತ್ತಾ ಓದುತ್ತಿದ್ದರೆ ಅಕಾರಣವಾದ ಒಂದು ಲೋಕ ತೆರೆಯುತ್ತಿತ್ತು.

‘ಸರ್ ಇಷ್ಟೆಲ್ಲಾ ಹೇಗೆ ಸಾಧ್ಯವಾಯಿತು?’ ಎಂದರೆ, ‘ನಾನು ಮಾಡುತ್ತಿರುವುದು ಕನ್ನಡಿಯ ಮೇಲಿನ ದೂಳು ತೆಗೆಯುವ ಕೆಲಸ ಮಾತ್ರ’ ಎನ್ನುತ್ತಿದ್ದರು. ಯಾವ ನಿರೀಕ್ಷೆಯೂ ಇಲ್ಲದೆ, ಪ್ರಶಸ್ತಿಯ ಹಪಹಪಿಯೂ ಇಲ್ಲದೆ ಒಮ್ಮನದಿಂದ ಸಾಹಿತ್ಯ ಪರಿಚಾರಿಕೆ ನಡೆಸಿದ ಕೃಷ್ಣಪ್ಪನವರನ್ನು, ‘ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ’, ‘ಸಾಹಿತ್ಯ ಶ್ರೀ ಪ್ರಶಸ್ತಿ’, ‘ಕೆಂಪೇಗೌಡ ಪ್ರಶಸ್ತಿ’, ‘ನಾಡೋಜ’ ಹೀಗೆ ಹತ್ತು ಹಲವು ಪ್ರಶಸ್ತಿಗಳು ಅರಸಿ ಬಂದವು.

ಕೃಷ್ಣಪ್ಪನವರಿಗೆ ಕನ್ನಡ ಕಟ್ಟುವುದೆಂದರೆ ಉತ್ಸಾಹ. ತಾವು ಸಾಹಿತ್ಯದಲ್ಲಿ ಮುಖ್ಯವಾಗಬೇಕೆಂದು ಯಾವತ್ತೂ ಯೋಚಿಸಲಿಲ್ಲ. ಬದಲಿಗೆ ಯಾರು ಬರೆಯಬಲ್ಲ ಶಕ್ತಿ ಹೊಂದಿದ್ದಾರೋ ಅವರನ್ನು ಹುಡುಕಿ ಅವರ ಪುಸ್ತಕವನ್ನು ಹೊರತರುವ ಪ್ರಯತ್ನ ಮಾಡುತ್ತಿದ್ದರು. ಅಂಥ ಒಂದು ಪ್ರಯತ್ನದ ಫಲವಾಗಿ ಕನ್ನಡಕ್ಕೆ ದಕ್ಕಿದವರು ಖ್ಯಾತ ಮನೋವಿಜ್ಞಾನಿ ಎಂ. ಬಸವಣ್ಣ. ಇವರ ‘ಈಡಿಪಸ್ ಕಾಂಪ್ಲೆಕ್ಸ್’ ಕೃತಿ ಕೃಷ್ಣಪ್ಪನವರು ಮುತುವರ್ಜಿ ವಹಿಸದಿದ್ದರೆ ಹೊರಗೆ ಬರುತ್ತಿರಲಿಲ್ಲ. ‘ನನ್ನನ್ನು ಬರಹಗಾರನನ್ನಾಗಿ ಮಾಡಿದ್ದೇ ಅವರು’ ಎಂದು ಬಸವಣ್ಣ ಅವರು ಅತ್ಯಂತ ಕೃತಜ್ಞತಾಪೂರ್ವಕವಾಗಿ ನೆನೆಯುವರು.

ಪ್ರತಿ ಭಾನುವಾರದ ನನ್ನ ಓದು, ಕೃಷ್ಣಪ್ಪ ಅವರ ‘ಕುವೆಂಪು ಅವರ ಪದ ಸೃಷ್ಟಿ’ಯಿಂದಲೇ ಆರಂಭವಾಗುತ್ತಿತ್ತು. ‘ಪ್ರಜಾವಾಣಿ’ಯಲ್ಲಿ ಇನ್ನುಮುಂದೆ ಆ ಅಂಕಣ ಬರುವುದಿಲ್ಲ ಎನ್ನುವುದನ್ನು ಊಹಿಸಲೂ ಸಾಧ್ಯವಾಗುತ್ತಿಲ್ಲ. ಕನ್ನಡ ಇರುವವರೆಗೂ ಬೇಂದ್ರೆ, ಕುವೆಂಪು ಅವರ ಹೆಸರುಗಳು ಇದ್ದೇ ಇರುತ್ತವೆ. ಅವಿರತವಾಗಿ ದಣಿವರಿಯದಂತೆ ಸಂವಾದ ನಡೆಸುತ್ತಲೇ ಬಂದ ಬೇಂದ್ರೆ ಕೃಷ್ಣಪ್ಪನವರ ಹೆಸರನ್ನು, ‘ಹೂತಃದ ಹುಣಸಿ’ ಕಂಡಾಗಲೆಲ್ಲಾ ಕನ್ನಡದ ಸಾರಸ್ವತ ಲೋಕ ನೆನೆಯುತ್ತದೆ.

‘ಬೇಂದ್ರೆ’ ಕೃಷ್ಣಪ್ಪ ನಿಧನ

ಬೆಂಗಳೂರು: ‘ಬೇಂದ್ರೆ’ ಕೃಷ್ಣಪ್ಪ ಎಂದೇ ಪರಿಚಿತರಾಗಿದ್ದ ಜಿ. ಕೃಷ್ಣಪ್ಪ (77) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಮಂಗಳವಾರ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಮಂಗಳವಾರ ಸಂಜೆ 4 ಗಂಟೆಗೆ ಮೇದಿ ಅಗ್ರಹಾರದಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣಪ್ಪ ಅವರು 1948ರಲ್ಲಿ ಬೆಂಗಳೂರಲ್ಲಿ ಜನಿಸಿದರು. ಡಿಪ್ಲೊಮಾ ಓದಿ, ವಾಹನ ನಿರೀಕ್ಷಕರಾಗಿ ವೃತ್ತಿ ಆರಂಭಿಸಿದರು. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿವೃತ್ತಿಯಾದರು. ಉದ್ಯೋಗದ ನಡುವೆ ಬಿ.ಎ, ಎಲ್‌ಎಲ್‌ಬಿ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ‘ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ: ಒಂದು ಅಧ್ಯಯನ’ ಎಂಬ ಮಹಾಪ್ರಬಂಧಕ್ಕೆ ಪಿಎಚ್‌.ಡಿ ಪದವಿ ಪಡೆದರು. ವೃತ್ತಿಯೊಂದಿಗೆ ಅಭಿರುಚಿಯಾಗಿ ಸಾಹಿತ್ಯ ಅಧ್ಯಯನದಲ್ಲಿ ತೊಡಗಿದರು.



ಜಿ. ಕೃಷ್ಣಪ್ಪ

ಪ್ರಕಟಿತ ಕೃತಿಗಳು: ‘ಹಾಡು ಹಕ್ಕಿ ಅಂಬಿಕಾತನಯದತ್ತ’ ಕೃತಿಯಿಂದ ‘ಬೇಂದ್ರೆ ಕಂಡು ಬೆಳಗು’ ಕೃತಿಯವರೆಗೆ 25ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ‘ನಾಕುತಂತಿ ಒಂದು ಟಿಪ್ಪಣಿ’, ‘ಹಸಿರು ಹಚ್ಚಿ ಚುಚ್ಚಿ’, ‘ಬೇಂದ್ರೆ ಕಾವ್ಯ: ಪದನಿರುಕ್ತ’ ಸೇರಿದಂತೆ ಬೇಂದ್ರೆಯ ಕಾವ್ಯ ಕುರಿತ 12 ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ.

ಬುಧವಾರ, ಜನವರಿ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 29 | ಪುಟ 16 • www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಆಗಸದಲ್ಲಿ ನಡೆಯುವ ಅಪರೂಪದ ವಿದ್ಯಮಾನ ಆರು ಗ್ರಹಗಳ ಪಥಕೂಟ!

ಆಳ-ಅಗಲ ಕಿರು ಸಾಲ; ಬೃಹತ್ ಜಾಲ

ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಬಂಧನ 7

ನ್ಯಾ.ದೇಸಾಯಿ ಡಿಬಾರ್ ಆದೇಶಕ್ಕೆ ತಡೆ 5

ಸೆನ್ಸೆಕ್ಸ್	ನಿಫ್ಟಿ	₹/$
75,901 ▲	22,957 ▲	86.57 ▼

ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಿಗೆ ಆಗುತ್ತಿಲ್ಲ ಪೂರೈಕೆ • ಹೊರಗಡೆಯಿಂದ ಖರೀದಿ ಈಗ ಅನಿವಾರ್ಯ

ಉಗ್ರಾಣದಲ್ಲೇ ಔಷಧ ಅಲಭ್ಯ

• ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ರಾಜ್ಯದ ಉಗ್ರಾಣದಲ್ಲಿ ಔಷಧಗಳ ಕೊರತೆ ಉಂಟಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಗೆ ಅಗತ್ಯ ಔಷಧಗಳೇ ಸಿಗುತ್ತಿಲ್ಲ. ಹೀಗಾಗಿ ಹೊರಗಡೆಯೇ ಔಷಧ ಖರೀದಿಸುವಂತೆ ವೈದ್ಯರು ಚೀಟಿ ಬರೆದು ಕೊಡುತ್ತಿದ್ದಾರೆ.

ತೀವ್ರ ಸೋಂಕಿಗೆ ಒಳಗಾದಾಗ ನೀಡುವ 'ಹೈಯರ್ ಆ್ಯಂಟಿಬಯಾಟಿಕ್' ಇಂಜೆಕ್ಷನ್ ಮತ್ತು ಮಾತ್ರೆಗಳು, 'ಆ್ಯಂಟಿ ಹೆಮಾರಾಜಿಕ್', 'ಕಾರ್ಡಿಯೊ ವ್ಯಾಸ್ಕುಲರ್', 'ಆ್ಯಂಟಿಡೋಟ್ಸ್ ಆ್ಯಂಡ್ ವ್ಯಾಕ್ಸಿನ್' ಸೇರಿ ಬಹುತೇಕ ಜೀವರಕ್ಷಕ ಔಷಧಗಳ ಕೊರತೆ ಇದೆ. ಜ್ವರ ನಿಯಂತ್ರಿಸುವ 'ಪ್ಯಾರಾಸಿಟಮೋಲ್'ನಂತಹ ಮಾತ್ರೆಗಳೂ ಬಹುತೇಕ ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಇಲ್ಲ. ಕಳೆದ ವರ್ಷದ ಟೆಂಡರ್‌ನಲ್ಲಿ ಖರೀದಿಸಿದ್ದ ಕೆಲ ಔಷಧಗಳು ರಾಜ್ಯ ಉಗ್ರಾಣದಲ್ಲಿ ಈಗಾಗಲೇ ಖಾಲಿಯಾಗಿವೆ.

ಕಂಪನಿಗಳಿಂದ ಪೂರೈಕೆಯಾಗುವ 800ಕ್ಕೂ ಹೆಚ್ಚು ಬಗೆಯ ಔಷಧಗಳನ್ನು ಪರಿಶೀಲಿಸಿ, ರಾಜ್ಯ ಔಷಧ ಉಗ್ರಾಣವು ವಿವಿಧ ಜಿಲ್ಲೆಗಳ ಔಷಧ ಉಗ್ರಾಣಕ್ಕೆ ಕಳುಹಿಸುತ್ತದೆ. ಅಲ್ಲಿಂದ ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಿಗೆ ಅಲ್ಲದೇ ವಿವಿಧ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಅಗತ್ಯಕ್ಕೆ ಅನುಸಾರ ಔಷಧಗಳು ರವಾನೆಯಾಗುತ್ತವೆ. ಆದರೆ, ಮೂರು ತಿಂಗಳಿನಿಂದ ಆಸ್ಪತ್ರೆಗಳು ವಿವಿಧ ಔಷಧಗಳಿಗೆ ಬೇಡಿಕೆ ಸಲ್ಲಿಸಿದರೂ ಬೇಡಿಕೆಯ ಶೇ 30ರಷ್ಟು ಮಾತ್ರ ಸಿಗುತ್ತಿದೆ.

'ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ವರ್ಷಕ್ಕೆ ಎಷ್ಟು ರೋಗಿಗಳು ಬರುತ್ತಾರೆ ಮತ್ತು ಯಾವೆಲ್ಲ ಔಷಧಗಳು ಅಗತ್ಯ ಇವೆ ಎಂಬ ವಾರ್ಷಿಕ ಲೆಕ್ಕಾಚಾರದ ಆಧಾರದಲ್ಲಿ ಪೂರೈಕೆಗೆ ಸರ್ಕಾರ ಟೆಂಡರ್ ಕರೆಯುತ್ತದೆ. ಪ್ರಸ್ತುತ ವರ್ಷ ಜ್ವರ, ಶೀತದಂತಹ ಅನಾರೋಗ್ಯ ಸಮಸ್ಯೆ ಹೆಚ್ಚಾಗಿದೆ. ನಿಗದಿತ ಅವಧಿಗೂ ಮುನ್ನವೇ ಕೆಲ ಔಷಧಗಳು ಖಾಲಿಯಾಗಿವೆ' ಎಂದು ಧಾರವಾಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶಶಿ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

5ನೇ ಪುಟ ನೋಡಿ

ಕೊರತೆಗೆ ಏನು ಕಾರಣ?

1. ನಾಲ್ಕು ವರ್ಷದಿಂದ ಹೊಸ ಟೆಂಡರ್ ಕರೆದಿಲ್ಲ
2. ಟೆಂಡರ್ ಅನುಸಾರವೇ ಔಷಧಗಳ ಪೂರೈಕೆ
3. ವರ್ಷಗಳು ಕಳೆದಂತೆ ರೋಗಿಗಳ ಸಂಖ್ಯೆ ಹೆಚ್ಚಳ
4. ಬಳ್ಳಾರಿಯಲ್ಲಿ ಬಾಣಂತಿಯರ ಸಾವು ಪ್ರಕರಣದ ನಂತರ ಔಷಧ ವಿತರಣೆ ನಿಧಾನ
5. ಆರೋಗ್ಯ ಇಲಾಖೆಯ ಕಟ್ಟುನಿಟ್ಟಿನ ಸೂಚನೆ

ಔಷಧ ಉಗ್ರಾಣದಲ್ಲಿ ಯಾವ್ಯಾವ ಔಷಧಗಳು ಇಲ್ಲ ಮತ್ತು ಅವು ಎಷ್ಟು ಪ್ರಮಾಣದಲ್ಲಿ ಬೇಕು ಎಂಬ ಬಗ್ಗೆ ಪರಿಶೀಲಿಸಲಾಗುವುದು

ಕನಗವಲ್ಲಿ, ವ್ಯವಸ್ಥಾಪಕ ನಿರ್ದೇಶಕಿ, ರಾಜ್ಯ ಔಷಧ ಉಗ್ರಾಣ

ಪ್ಯಾರಾಸಿಟಮೋಲ್ ಸೇರಿ ಕೆಲ ಅಗತ್ಯ ಔಷಧಗಳ ಕೊರತೆಯಿದ್ದು, ಸ್ಥಳೀಯ ಆಸ್ಪತ್ರೆಗಳ ಆರೋಗ್ಯ ನಿಧಿಯಿಂದ ಖರೀದಿಸಲು ಸೂಚಿಸಲಾಗಿದೆ

ಡಾ. ಶಶಿ ಪಾಟೀಲ

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಧಾರವಾಡ

'ಟೆಂಡರ್‌ಗೆ ಸಿದ್ಧತೆ'

'ರಾಜ್ಯ ಔಷಧ ಉಗ್ರಾಣಕ್ಕೆ ಔಷಧಗಳನ್ನು ಪೂರೈಸಲು ಪ್ರತಿವರ್ಷ ಟೆಂಡರ್ ಕರೆಯಲಾಗುತ್ತದೆ. ಆದರೆ, 2021ರಿಂದ 2024ರವರೆಗೆ ಕೋವಿಡ್ ಕಾರಣದಿಂದ ಟೆಂಡರ್ ಕರೆದಿಲ್ಲ. 2020ರಲ್ಲಿ ಕರೆದ ಟೆಂಡರ್ ಆಧಾರದಲ್ಲಿಯೇ ನಾಲ್ಕು ವರ್ಷ ಔಷಧಗಳನ್ನು ಖರೀದಿಸಲಾಗಿದೆ. ವರ್ಷದಿಂದ ವರ್ಷಕ್ಕೆ ರೋಗಿಗಳ ಹಾಗೂ ರೋಗಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ, ಔಷಧಗಳ ಕೊರತೆ ಹೆಚ್ಚಾಗುತ್ತಿದೆ. ಪ್ರಸ್ತುತ ವರ್ಷದ ಮಾರ್ಚ್‌ನಲ್ಲಿ 1028 ಬಗೆಯ ಔಷಧಗಳ ಪೂರೈಕೆಗೆ ಟೆಂಡರ್ ಕರೆಯಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ರಾಜ್ಯದಲ್ಲಿರುವ ಉಪ ಔಷಧ ಉಗ್ರಾಣಗಳಿಂದ ಔಷಧಗಳ ಪ್ರಮಾಣದ ಪಟ್ಟಿ ಸಲ್ಲಿಕೆಯಾಗಿದೆ' ಎಂದು ಔಷಧ ಉಗ್ರಾಣದ ಅಧಿಕಾರಿಯೊಬ್ಬರು ತಿಳಿಸಿದರು.

ಐ.ವಿ ದ್ರಾವಣ ತೀವ್ರ ಕೊರತೆ

ಬಳ್ಳಾರಿಯಲ್ಲಿ ಈಚೆಗೆ ಬಾಣಂತಿಯರ ಸಾವಿನ ಪ್ರಕರಣದ ನಂತರ ರಾಜ್ಯದಾದ್ಯಂತ ಸರ್ಕಾರಿ ಆಸ್ಪತ್ರೆಯಲ್ಲಿ ಐ.ವಿ ದ್ರಾವಣದ ಕೊರತೆ ತೀವ್ರವಾಗಿದೆ. ಔಷಧ ಉಗ್ರಾಣದಿಂದ ಪೂರೈಕೆಯಾದ ದ್ರಾವಣಗಳನ್ನು ಬಳಸದಂತೆ ಆರೋಗ್ಯ ಇಲಾಖೆ ಎಲ್ಲಾ ಆಸ್ಪತ್ರೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ದ್ರಾವಣ ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಅದರ ವರದಿ ಇನ್ನೂ ಸರ್ಕಾರದ ಕೈ ಸೇರಿಲ್ಲ. ಬಹುತೇಕ ಜಿಲ್ಲಾಸ್ಪತ್ರೆಗಳ ಗೋದಾಮುಗಳಲ್ಲಿ ಐ.ವಿ ದ್ರಾವಣಗಳ ಬಾಟಲ್‌ಗಳು ಮೂಟೆಗಟ್ಟಲೆ ಸಂಗ್ರಹವಾಗಿವೆ. ಇದರಿಂದಾಗಿ ಅನಿವಾರ್ಯವಾಗಿ ಆಸ್ಪತ್ರೆಗಳು ಅಗತ್ಯಕ್ಕೆ ತಕ್ಕಷ್ಟು ಐ.ವಿ ದ್ರಾವಣವನ್ನು ಖಾಸಗಿ ಔಷಧಾಲಯಗಳಿಂದ ಖರೀದಿಸುತ್ತಿವೆ.

ಬೆಂಗಳೂರು: ಸದ್ಯವೇ ನೀರು ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಪೂರೈಸುವ ನೀರಿನ ದರ ಪ್ರತಿ ಲೀಟರ್‌ಗೆ ಒಂದು ಪೈಸೆ ಹೆಚ್ಚಾಗುವ ಸಾಧ್ಯತೆ ಇದೆ.

ಪ್ರತಿ ತಿಂಗಳಿಗೆ ಐದು ಸಾವಿರ ಲೀಟರ್ ಬಳಸುವವರಿಗೆ ₹50 ಹೆಚ್ಚಾಗಲಿದ್ದು, 25 ಸಾವಿರ ಲೀಟರ್ ಬಳಕೆದಾರರಿಗೆ ₹250 ಹೊರೆಯಾಗಲಿದೆ.

ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ಜಲಮಂಡಳಿ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದರು. 'ಕುಡಿಯುವ ನೀರಿನ ದರ ಹೆಚ್ಚಿಸುವ ಬಗ್ಗೆ ನಿರ್ಧರಿಸಲಾಗಿದೆ. ದರ ಹೆಚ್ಚಳ ಪ್ರಮಾಣವನ್ನು ಅಧಿಕಾರಿಗಳು ನೀಡುವ ವರದಿಯ ಆಧಾರದಲ್ಲಿ ತೀರ್ಮಾನಿಸಲಾಗುತ್ತದೆ' ಎಂದು ಸಭೆಯಲ್ಲಿ ಶಿವಕುಮಾರ್ ಹೇಳಿದರು.

ಒಂದು ವರ್ಷದಿಂದ ಕುಡಿಯುವ ನೀರಿನ ದರ ಹೆಚ್ಚಳದ ಬಗ್ಗೆ ಶಿವಕುಮಾರ್ ಹೇಳುತ್ತಲೇ ಬಂದಿದ್ದರು.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್ ಅವರು, 'ಜಲಮಂಡಳಿಗೆ ವರ್ಷಕ್ಕೆ ₹1 ಸಾವಿರ ಕೋಟಿ ನಷ್ಟವಾಗುತ್ತಿದೆ. ಕೊಳೆಗೇರಿ ಹೆಸರಿನಲ್ಲಿ ಉಳ್ಳವರು ನೀರು ಪಡೆಯುತ್ತಿದ್ದಾರೆ. ಯಾರಿಗೂ ಪುಕ್ಕಟೆಯಾಗಿ ಕಾವೇರಿ ನೀರು ಕೊಡಲು ಸಾಧ್ಯವಿಲ್ಲ' ಎಂದೂ ಹೇಳಿದರು.

VICCO® — ವಿಶ್ವಾಸಾರ್ಹ ಆಯುರ್ವೇದ — 1952 ರಿಂದ

ಸಂಪೂರ್ಣ ಸ್ವದೇಶಿ | Go natural ಆಯುರ್ವೇದದ ಔಷಧ

ಹಳದಿ ಮತ್ತು ಚಂದನದ ಅದೇ ನೈಸರ್ಗಿಕ ಗುಣ

ಈಗ ಹೊಸ ಪ್ಯಾಕ್‌ನಲ್ಲಿ

ವೀಕೋ ಟರ್ಮರಿಕ್ ಕ್ರೀಮ್

ಹಳದಿ ಇದ್ದರೆ ಹೆಲ್ದೀ ಆಗಿರುತ್ತೆ

• Follow us on @viccolabs • Like us on /ViccoLabs
• Shop online at https://viccolabs.com • Customer Care No. 0712-2420890
• Stocks also available in old pack.

ಹೆಚ್ಚಿನ ಮಾಹಿತಿಗೆ ಮತ್ತು ಖರೀದಿಗೆ ಇಲ್ಲಿ ಸ್ಕ್ಯಾನ್ ಮಾಡಿ.

ಭಾರತದ ಮೇಲೆ ಹೆಚ್ಚಿನ ಆಮದು ಸುಂಕ: ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಭಾರತ, ಚೀನಾ ಮತ್ತು ಬ್ರೆಜಿಲ್ ದೇಶಗಳು ಅಮೆರಿಕದ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸುತ್ತಿವೆ. ಇದರಿಂದ ಅಮೆರಿಕಕ್ಕೆ ಹಾನಿ ಉಂಟಾಗುತ್ತಿದೆ. ಹಾಗಾಗಿ, ಅಮೆರಿಕ ಕೂಡ ಈ ದೇಶಗಳ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸಲಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಭಾರತ, ಚೀನಾ ಸದಸ್ಯರಾಗಿರುವ ಬ್ರಿಕ್ಸ್ ದೇಶಗಳ ಮೇಲೆ ಶೇ 100ರಷ್ಟು ಆಮದು ಸುಂಕ ವಿಧಿಸುವ ಬಗ್ಗೆ ಟ್ರಂಪ್ ಅವರು ಈ ಹಿಂದೆ ಹಲವು ಬಾರಿ ಹೇಳಿದ್ದರು.

ಫ್ಲಾರಿಡಾದಲ್ಲಿ ಸೋಮವಾರ ನಡೆದ ರಿಪಬ್ಲಿಕನ್ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಅಮೆರಿಕಕ್ಕೆ ಹಾನಿ ಉಂಟು ಮಾಡುತ್ತಿರುವ ಅವರು (ಭಾರತ, ಚೀನಾ ಮತ್ತು ಬ್ರೆಜಿಲ್) ತಮ್ಮ ದೇಶಕ್ಕೆ ಒಳಿತಾಗಲಿ ಎಂದು ಬಯಸುತ್ತಿದ್ದಾರೆ ಅಷ್ಟೇ. ಈ ಕಾರಣಕ್ಕಾಗಿಯೇ ಅವರು ನಮ್ಮ ಮೇಲೆ ಅಧಿಕ ಆಮದು ಸುಂಕ ವಿಧಿಸುತ್ತಿದ್ದಾರೆ' ಎಂದರು.

'ಅಮೆರಿಕವೇ ಮೊದಲು ಎನ್ನುವ ನಮ್ಮ ಆರ್ಥಿಕ ನೀತಿ ಅನ್ವಯ ನಾವು ಬೇರೆ ದೇಶಗಳ ಮೇಲೆ ಹೆಚ್ಚಿನ ಪ್ರಮಾಣದ ಸುಂಕಗಳನ್ನು ವಿಧಿಸುತ್ತೇವೆ. ಅಮೆರಿಕದ ಕಾರ್ಮಿಕರು, ಉದ್ಯಮಿಗಳ ಮೇಲಿನ ತೆರಿಗೆಯನ್ನು ಕಡಿತ ಮಾಡುತ್ತೇವೆ. ಈ ಮೂಲಕ ಭಾರಿ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುತ್ತೇವೆ' ಎಂದರು.

ಇನ್ನೊಂದು ಸುದ್ದಿ 10

'ಜಾತಿ ದೌರ್ಜನ್ಯ: ಶಿಕ್ಷೆ ಪ್ರಮಾಣ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ನ್ಯಾಯಾಲಯಗಳು ನೀಡಿರುವ ತಡೆಯಾಜ್ಞೆ ತೆರವುಗೊಳಿಸಿ, 60 ದಿನಗಳ ಒಳಗೆ ಆರೋಪಪಟ್ಟಿ ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯಮಟ್ಟದ ಜಾಗೃತ ಮತ್ತು ಉಸ್ತುವಾರಿ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಜಾತಿ ದೌರ್ಜನ್ಯ ಪ್ರಕರಣಗಳಲ್ಲಿನ ಶಿಕ್ಷೆ ಪ್ರಮಾಣ 2020ರಲ್ಲಿ ಶೇ 10ರಷ್ಟು ಇತ್ತು. ಈಗ ಅದು ಶೇ 7ಕ್ಕೆ ಇಳಿದಿದೆ. ಆ ಪ್ರಮಾಣ ಶೇ 10ಕ್ಕೆ ಮುಟ್ಟಬೇಕು. ಜಾತಿ ದೌರ್ಜನ್ಯ ಪ್ರಕರಣಗಳ ಶಿಕ್ಷೆಯ ಪ್ರಮಾಣದ ಬಗ್ಗೆ ಸರ್ಕಾರಿ ಅಭಿಯೋಜಕರು ಮತ್ತು ಪೊಲೀಸ್ ಇಲಾಖೆಯವರು ಪರಿಶೀಲನಾ ಸಭೆ ನಡೆಸಬೇಕು. ಶಿಕ್ಷೆಯ ಪ್ರಮಾಣ ಹೆಚ್ಚಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಮೂರು ತಿಂಗಳಿಗೊಮ್ಮೆ ತಪ್ಪದೇ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು. ವಿಳಂಬ ನೀತಿ ಅನುಸರಿಸುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗಿರುವ ಇನ್ನೂ 665 ಪ್ರಕರಣಗಳು ತನಿಖೆಗೆ ಬಾಕಿ ಇದ್ದು, ತ್ವರಿತವಾಗಿ ಪೂರ್ಣಗೊಳಿಸಬೇಕು. ನ್ಯಾಯಾಲಯಗಳಲ್ಲಿ ಶಿಕ್ಷೆ ಪ್ರಮಾಣ ಕಡಿಮೆ ಆಗುವುದನ್ನು ಒಪ್ಪಲು ಸಾಧ್ಯವಿಲ್ಲ. ಇಂತಹ ಪ್ರಕರಣಗಳಲ್ಲಿ ಸರ್ಕಾರಿ ವಕೀಲರು ಸರಿಯಾಗಿ ವಾದಿಸಿ ದೌರ್ಜನ್ಯಕ್ಕೀಡಾದವರಿಗೆ ನ್ಯಾಯ ಒದಗಿಸಬೇಕು. ದೌರ್ಜನ್ಯ ಎಸಗಿದವರಿಗೆ ಸುಲಭವಾಗಿ ಜಾಮೀನು ಸಿಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಸಿ.ಎಂ ಸೂಚನೆ

- ವಿಳಂಬ ನೀತಿ ಅನುಸರಿಸುವ ಅಧಿಕಾರಿಗಳ ವಿರುದ್ಧ ಕ್ರಮ
- ದೌರ್ಜನ್ಯ ಎಸಗಿದವರಿಗೆ ಸುಲಭವಾಗಿ ಜಾಮೀನು ಸಿಗದಂತೆ ಕ್ರಮ ವಹಿಸಬೇಕು
- ಬಾಕಿ ಪ್ರಕರಣಗಳ ತ್ವರಿತ ವಿಚಾರಣೆ ಮಾಡಬೇಕು

5ನೇ ಪುಟ ನೋಡಿ

ಬೂಮ್ರಾ 'ವರ್ಷದ ಶ್ರೇಷ್ಠ ಕ್ರಿಕೆಟಿಗ'

ದುಬೈ (ಪಿಟಿಐ): ಭಾರತ ಅಗ್ರಗಣ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್, ವರ್ಷದ ಶ್ರೇಷ್ಠ ಕ್ರಿಕೆಟಿಗನಿಗೆ ಕೊಡಮಾಡುವ 'ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ವರ್ಷದ ಕ್ರಿಕೆಟಿಗ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

31 ವರ್ಷ ವಯಸ್ಸಿನ ಈ ಬೌಲರ್ ಒಂದು ದಿನ ಹಿಂದೆಯಷ್ಟೇ 'ವರ್ಷದ ಟೆಸ್ಟ್ ಕ್ರಿಕೆಟಿಗ' ಗೌರವಕ್ಕೂ ಭಾಜನರಾಗಿದ್ದರು. ಕಳೆದ ವಾರ ಐಸಿಸಿಯ ವರ್ಷದ ಟೆಸ್ಟ್ ತಂಡದಲ್ಲೂ ಅವರು ಸ್ಥಾನ ಪಡೆದಿದ್ದರು.

2024ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ 15 ವಿಕೆಟ್‌ಗಳನ್ನು ಪಡೆದು ಭಾರತ ತಂಡ ಚಾಂಪಿಯನ್ ಆಗುವಲ್ಲಿ ಅವರ ಪಾತ್ರ ಪ್ರಮುಖ ಆಗಿತ್ತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

MaAx Super Speciality Hospital

RMR Road, Park Extension, Shivamogga, Karnataka-577201

Recruitment Notification

MaAx Super Speciality Hospital, Shivamogga.
Renowned Super Speciality Hospital in Malnad Region,
invites applications for the following Consultants :

DEPARTMENT	QUALIFICATIONS	NO OF POSITIONS	EXPERIENCE
EMERGENCY MEDICINE	MD (EMERGENCY MEDICINE)	4	1-2 YEARS
ANAESTHESIA	MD (ANAESTHESIA)	5	MIN 3 YEARS
PAEDIATRICS	MD (PAEDIATRICS)	4	1-2 YEARS
RADIOLOGY	MD (RADIOLOGY)	3	MIN 3 YEARS
OBG	MD (OBG)	3	MIN 3 YEARS
PULMONOLOGY (TB & CHEST)	MD (TB & CHEST)	2	1-2 YEARS
CARDIOLOGY	DM CARDIOLOGY	3	MIN 3 YEARS
NEPHROLOGY	DM NEPHROLOGY	2	MIN 3 YEARS
ENDOCRINOLOGY	DM ENDOCRINOLOGY	1	MIN 3 YEARS
NEUROLOGY	DM NEUROLOGY	2	MIN 3 YEARS
Mch NEUROSURGERY	Mch NEUROSURGERY	2	MIN 3 YEARS
PAEDIATRICS SURGERY	Mch/ DNB (PEDIATRIC SURGERY)	1	MIN 3 YEARS
MEDICAL ONCOLOGY	DM (ONCOLOGY)	1	MIN 3 YEARS
SURGICAL ONCOLOGY	Mch / DNB (SURGICAL ONCOLOGY)	1	MIN 3 YEARS
MEDICAL GASTROENTEROLOGY	DM GASTROENTEROLOGY	1	MIN 3 YEARS
SURGICAL GASTROENTEROLOGY	Mch / DNB SURGICAL - GASTRO	1	MIN 3 YEARS
PSYCHIATRY	MD (PSYCHIATRY)	2	MIN 3 YEARS
UROLOGY	Mch / DNB (UROLOGY)	2	MIN 3 YEARS
DERMATOLOGY	MD (DERMATOLOGY)	3	MIN 3 YEARS
RHEUMATOLOGY	DM RHEUMATOLOGY	1	1-2 YEARS
PHYSIOTHERAPY	PROFFESOR	1	
	ASSOCIATE PROFFESOR	2	
	ASSISTANT PROFFESOR	3	

Interested candidates are requested to send their updated resumes and a covering letter to maaxhospitalcoo@gmail.com or submit them directly at the hospital's HR department.

Contact : 9900170055, 9741972180, 9821717978
Email: maaxhospitalcoo@gmail.com, maaxoperations@gmail.com

HOSPITAL ADMINISTRATORS	MBA IN HOSPITAL ADMINISTRATION MHA / FINANCE	6	1-2 YEARS
NURSING STAFF WITH MOTHER & CHILD CARE EXPERIENCE	BSC NURSING	30	1-2 YEARS
NURSING STAFF WITH ICU, OT EXPERIENCE	BSC NURSING	30	1-2 YEARS

Get more from your old gold | 100% value. No loss when you exchange
New collections added

PRINCE JEWELLERY

BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999

Certified diamonds | BIS 100% Hallmarked Jewellery

*Terms and conditions apply. www.princejewellery.com. Open on Sundays.

ನಿಧನ ವಾರ್ತೆ

'ಸರಿಗಮಪ' ಮಂಜಮ್ಮ

ಮಧುಗಿರಿ: ಖಾಸಗಿ ವಾಹಿನಿಯಲ್ಲಿ ಪ್ರಸಾರವಾದ 'ಸರಿಗಮಪ' ಕಾರ್ಯಕ್ರಮದಿಂದ ಜನಮನ್ನಣೆ ಗಳಿಸಿದ್ದ ಗಾಯಕಿ 'ಸರಿಗಮಪ ಮಂಜಮ್ಮ' (30) ಅನಾರೋಗ್ಯದಿಂದ ಸೋಮವಾರ ರಾತ್ರಿ ನಿಧನರಾದರು. ದೃಷ್ಟಿದೋಷ ಇದ್ದ ಅವರು ಗಾಯನದ ಮೂಲಕ ಜನಮನ ಗೆದ್ದಿದ್ದರು.

ಕಿಡ್ನಿ ವೈಫಲ್ಯದಿಂದಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದ ಮಂಜಮ್ಮ ಅಂತ್ಯಕ್ರಿಯೆ ಮಂಗಳವಾರ ಡಿ.ವಿ.ಹಳ್ಳಿ ಗ್ರಾಮದಲ್ಲಿ ನಡೆಯಿತು.

ಜಲಮಂಡಳಿಗೆ ₹1 ಸಾವಿರ ಕೋಟಿ ನಷ್ಟ, ನೀರಿನ ದರ ಏರಿಕೆ ಅನಿವಾರ್ಯ: ಡಿಸಿಎಂ

'ಕೊಳೆಗೇರಿ ಹೆಸರಲ್ಲಿ ಉಳ್ಳವರಿಂದ ಬಳಕೆ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನೀರಿನ ಅಕ್ರಮ ಸಂಪರ್ಕಗಳ ಸಕ್ರಮಕ್ಕೆ ಕ್ರಮ
- ನೀರಿನ ಬಿಲ್ ಬಾಕಿ ಪಾವತಿಗೆ ಒಟಿಎಸ್
- ಬೇಸಿಗೆಯಲ್ಲಿ ನೀರಿಗೆ ಅಭಾವವಾಗದಂತೆ ಮುಂಜಾಗ್ರತೆ

ಬೆಂಗಳೂರು: 'ಬಡವರಿಗೆ ನೀರು ಪೂರೈಸುತ್ತಿದ್ದರೂ ಅದು ಲೆಕ್ಕಕ್ಕೆ ಸಿಗಬೇಕು. ನೀರು ಪಡೆಯುವವರು ಒಂದು ಪೈಸೆ ಹಣ ನೀಡಿಯಾದರೂ ಸಂಪರ್ಕ ಪಡೆಯಬೇಕು. ಕೊಳೆಗೇರಿ ಹೆಸರಿನಲ್ಲಿ ಉಳ್ಳವರು ಕಾವೇರಿ ನೀರು ಪಡೆಯುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು ಜಲಮಂಡಳಿ, ಬಿಎಂಆರ್‌ಡಿಎ, ಬಿಡಿಎ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'2014ರಿಂದ ಕುಡಿಯುವ ನೀರಿನ ದರ ಹೆಚ್ಚಿಸಿಲ್ಲ. ಇದರಿಂದ ಜಲಮಂಡಳಿಗೆ ವರ್ಷಕ್ಕೆ ₹1,000 ಕೋಟಿ ನಷ್ಟವಾಗುತ್ತಿದೆ. ವಿದ್ಯುತ್ ಬಿಲ್ ಈ ಹಿಂದೆ ₹35 ಕೋಟಿಯಾಗುತ್ತಿತ್ತು, ಈಗ ₹75 ಕೋಟಿಯಾಗಿದೆ. ಮಾನವ ಸಂಪನ್ಮೂಲ ವೆಚ್ಚ ಸೇರಿದಂತೆ ಇತರೆ ಸೇವೆಗಳಿಂದ ತಿಂಗಳಿಗೆ ₹85 ಕೋಟಿ ನಷ್ಟವಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಕೊಳೆಗೇರಿ ಹಾಗೂ ಬಡವರಿಗೆ ನೀರು ಪೂರೈಸಲು ಸರ್ಕಾರ ₹20 ಕೋಟಿ ಹಣ ಮೀಸಲಿಟ್ಟಿತ್ತು. ಬಿಜೆಪಿ ಸರ್ಕಾರ ಈ ಸಹಾಯಧನವನ್ನು ನಿಲ್ಲಿಸಿತ್ತು. ಇದನ್ನು ಮುಂದುವರೆಸಲಾಗುವುದು. ಬಡವರಿಗೆ ನೀರು ಪೂರೈಸುವ ನೀರಿನ ಲೆಕ್ಕವೂ ಸಿಗಬೇಕು' ಎಂದರು.

'ನೀರಿನ ಬಿಲ್ ಹೆಚ್ಚಳ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ. ಆದ್ದರಿಂದಲೇ, ನಗರದ ಎಲ್ಲ ಶಾಸಕರೊಂದಿಗೆ ಜಲಮಂಡಳಿ ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ. ನೀರಿನ ಜಾಲ ವಿಸ್ತರಿಸಲು ಹಣವಿಲ್ಲ. ಜಲಮಂಡಳಿ ನಷ್ಟದಲ್ಲಿ ಇರುವುದರಿಂದ ಬ್ಯಾಂಕ್‌ಗಳು ಸಾಲ ನೀಡುವುದಿಲ್ಲ ಎನ್ನುತ್ತಿವೆ. ಜೈಕಾ ಸೇರಿದಂತೆ ಹಲವು ಆರ್ಥಿಕ ಸಂಸ್ಥೆಗಳು ಹಣ ವಾಪಸಾತಿಯ ಬಗ್ಗೆ ಖಾತರಿ ಕೇಳುತ್ತಿವೆ' ಎಂದು ಶಿವಕುಮಾರ್ ಹೇಳಿದರು.

'ಕುಡಿಯುವ ನೀರಿನ ದರ ಹೆಚ್ಚಳದ ಬಗ್ಗೆ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ವರದಿ ನೀಡಿದ ತಕ್ಷಣ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಬಿಬಿಎಂಪಿ ವ್ಯಾಪ್ತಿಯಲ್ಲಿ ತೆರಿಗೆ ಪಾವತಿಗೆ ರೂಪಿಸಲಾಗಿರುವ ಮಾದರಿಯಲ್ಲಿ ನೀರಿನ ಸಂಪರ್ಕ, ಬಳಕೆಯಾಗುವ ನೀರಿನ ಬಗ್ಗೆ ನಿಖರ ಮಾಹಿತಿ ಪಡೆಯಲು ಯೋಜನೆ ರೂಪಿಸಲಾಗಿದೆ. ಬಡವರು, ಶ್ರೀಮಂತರು, ವಸತಿ ಸಮುಚ್ಚಯಗಳಲ್ಲಿರುವವರು ಸೇರಿದಂತೆ ಎಲ್ಲರೂ ಬಳಸುವ ನೀರಿನ ಲೆಕ್ಕ ಸಿಗಬೇಕು. ಅಕ್ರಮವಾಗಿ ಸಂಪರ್ಕ ಪಡೆದಿರುವವರು ಸಕ್ರಮ ಮಾಡಿಕೊಳ್ಳಬೇಕು. ಜಲಮಂಡಳಿಯ ಉಳಿವಿಗೆ ಮತ್ತು ಎಲ್ಲರಿಗೂ ನೀರು ಕೊಡಲು ಎಲ್ಲರೂ ಪ್ರಯತ್ನಿಸಬೇಕಿದೆ' ಎಂದು ಅವರು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ, ಬೆಂಗಳೂರು ಜಲಮಂಡಳಿ, ಬಿಎಂಆರ್‌ಡಿಎ, ಬಿಡಿಎ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದರು

15 ಸಾವಿರ ಹೊಸ ಸಂಪರ್ಕ

'ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯಡಿ ಸುಮಾರು 15 ಸಾವಿರ ಹೊಸ ಸಂಪರ್ಕಗಳನ್ನು ನೀಡಲಾಗಿದೆ. ಇನ್ನೂ 20 ಸಾವಿರ ಸಂಪರ್ಕಗಳನ್ನು ನೀಡಬೇಕಾಗಿದೆ. ವಸತಿ ಸಮುಚ್ಚಯಗಳು ನೀರಿನ ಸಂಪರ್ಕಗಳನ್ನು ತೆಗೆದುಕೊಳ್ಳುತ್ತಿಲ್ಲ. ಅವರೆಲ್ಲ ಕಡ್ಡಾಯವಾಗಿ ಸಂಪರ್ಕ ತೆಗೆದುಕೊಳ್ಳಬೇಕು ಎಂದು ಸೂಚಿಸಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ವಿದ್ಯುತ್ ದರ ಕಡಿಮೆ ಮಾಡಿದೆ. ಪೆಟ್ರೋಲ್, ಡಿಸೇಲ್ ದರ ಏರಿಕೆಯಿಂದ ಬೇರೆ ಸೌಲಭ್ಯಗಳ ಬೆಲೆ ಏರಿಕೆಯಾಗುತ್ತದೆ. ನೌಕರರಿಗೆ ಶೇ 10ರಷ್ಟು ಸಂಬಳ, ತುಟ್ಟಿಭತ್ಯೆ ಏರಿಸಲಾಗುತ್ತದೆ ಅಲ್ಲವೇ? ದರ ಹೆಚ್ಚಿಸದೆ ಇವೆಲ್ಲವನ್ನೂ ಹೇಗೆ ನೀಡುವುದು' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಮರು ಪ್ರಶ್ನಿಸಿದರು.

ಸುರಂಗ: ಫೆಬ್ರುವರಿ ಅಂತ್ಯಕ್ಕೆ ಟೆಂಡರ್

'ನಗರದಲ್ಲಿ ಸಂಚಾರ ಸುಗಮಗೊಳಿಸಲು ಸುರಂಗ ರಸ್ತೆ ನಿರ್ಮಾಣಕ್ಕೆ ₹17,780 ಕೋಟಿ ವೆಚ್ಚದ ಕಾಮಗಾರಿಗೆ ಫೆಬ್ರುವರಿ ಅಂತ್ಯಕ್ಕೆ ಟೆಂಡರ್ ಆಹ್ವಾನಿಸಲು ಸೂಚಿಸಲಾಗಿದೆ. ಮೂರು ವರ್ಷದಲ್ಲಿ ಕಾಮಗಾರಿ ಮುಗಿಯಬೇಕು ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಹೇಳಲಾಗಿದೆ. ಯೋಜನೆಗೆ ಬಿಬಿಎಂಪಿ, ಸರ್ಕಾರದಿಂದ ಅನುದಾನ ನೀಡಲಾಗುತ್ತದೆ. ಪವರ್ ಫೈನಾನ್ಸ್ ಕಾರ್ಪೋರೇಷನ್, ಹುಡ್ಕೊ ಸಾಲ ನೀಡಲು ಮುಂದೆ ಬಂದಿವೆ. ಯಾರು ಕಡಿಮೆ ಬಡ್ಡಿಗೆ ಹಣ ನೀಡುತ್ತಾರೋ ಅವರಿಗೆ ಹರಾಜಿನ ಮೂಲಕ ಅವಕಾಶ ನೀಡಲಾಗುತ್ತದೆ' ಎಂದು ಶಿವಕುಮಾರ್ ತಿಳಿಸಿದರು.

'ಸುರಂಗ ರಸ್ತೆ ಬೇಡ' ಎಂದು ಸಂಸದ ಪಿ.ಸಿ.ಮೋಹನ್ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿ, 'ಸುರಂಗ ರಸ್ತೆಗೆ ಯಾರ ಜಮೀನೂ ಹೋಗುವುದಿಲ್ಲ. ಭೂಮಿಯ ಕೆಳಗೆ ರಸ್ತೆ ಹೋಗುತ್ತದೆ' ಎಂದರು.

ಸುದ್ದಿ 2 ನಿಮಿಷ

ಜೋಧಪುರ–ಬೆಂಗಳೂರು ವಿಮಾನ: ಪ್ಯಾನಿಕ್ ಬಟನ್ ಒತ್ತಿದ ಪ್ರಯಾಣಿಕ

ಜೋಧಪುರ (ಪಿಟಿಐ): ಜೋಧಪುರದಿಂದ ಬೆಂಗಳೂರಿಗೆ ಮಂಗಳವಾರ ಬೆಳಿಗ್ಗೆ ಹೊರಡಲಿದ್ದ ವಿಮಾನದಲ್ಲಿದ್ದ ಪ್ರಯಾಣಿಕರೊಬ್ಬರು ಆಕಸ್ಮಿಕವಾಗಿ ಪ್ಯಾನಿಕ್ ಬಟನ್ (ಅಪಾಯ ಸೂಚನಾ ಒತ್ತುಗುಂಡಿ) ಒತ್ತಿದ್ದು ಕೆಲ ಕಾಲ ಗೊಂದಲ, ಆತಂಕಕ್ಕೆ ಕಾರಣವಾಗಿತ್ತು.

ವಿಮಾನವು (6ಇ-603) ರನ್‌ವೇಗೆ ಸಾಗಿ, ಬೆಳಿಗ್ಗೆ 10.05ಕ್ಕೆ ಟೇಕಾಫ್ ಆಗಬೇಕಿತ್ತು.

ಈ ಬೆಳವಣಿಗೆ ಬೆನ್ನಲ್ಲೇ, ಸ್ಥಳಕ್ಕೆ ದೌಡಾಯಿಸಿದ ವಿಮಾನನಿಲ್ದಾಣ ಸಿಬ್ಬಂದಿ, ಪ್ಯಾನಿಕ್ ಬಟನ್ ಒತ್ತಿದ್ದ ಪ್ರಯಾಣಿಕ ಸಿರಾಜ್ ಕಿದ್ವಾಯಿ ಅವರನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಿದರು.

'ಸಿರಾಜ್ ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು. ಅವರ ಈ ಕೃತ್ಯದಲ್ಲಿ ಯಾವುದೇ ಅನುಮಾನ ಕಂಡುಬರದ ಕಾರಣ ಅವರನ್ನು ಬಿಟ್ಟು ಕಳಿಸಲಾಯಿತು. ವಿಮಾನವು 20 ನಿಮಿಷ ತಡವಾಗಿ ಪ್ರಯಾಣ ಬೆಳೆಸಿತು' ಎಂದು ವಿಮಾನನಿಲ್ದಾಣ ಠಾಣೆ ಪೊಲೀಸ್ ಅಧಿಕಾರಿ ಸುರೇಶ್ ಚೌಧರಿ ತಿಳಿಸಿದ್ದಾರೆ.

ಸಿರಾಜ್, ಬ್ಯಾಂಕ್ ಅಧಿಕಾರಿ. ತಾವು ಕುಳಿತಿದ್ದ ಸೀಟಿನ ಬಳಿಯೇ ಇದ್ದ ಪ್ಯಾನಿಕ್ ಬಟನ್ ಅನ್ನು ಆಕಸ್ಮಿಕವಾಗಿ ಅವರು ಒತ್ತಿದ್ದಾರೆ ಎಂದೂ ತಿಳಿಸಿದ್ದಾರೆ. ಆದರೆ, ಸಿರಾಜ್ ಈ ವಿಮಾನ ತಪ್ಪಿಸಿಕೊಂಡರು.

ಅಶ್ಲೀಲ ವಿಡಿಯೊ ತೋರಿಸಿ ಕಿರುಕುಳ

ಬೆಂಗಳೂರು: ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೊ ತೋರಿಸಿ ಕಿರುಕುಳ ನೀಡುತ್ತಿದ್ದ ನರ್ಸಿಂಗ್ ವಿದ್ಯಾರ್ಥಿಯನ್ನು ವಿದ್ಯಾರ್ಥಿನಿಯರ ಪೋಷಕರೇ ಹಿಡಿದು ಕೆ.ಪಿ.ಅಗ್ರಹಾರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಪಶ್ಚಿಮ ಬಂಗಾಳದ ಬಿಕಾಸ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ನಗರದ ಕಾಲೇಜೊಂದರಲ್ಲಿ ನರ್ಸಿಂಗ್ ವ್ಯಾಸಂಗ ಮಾಡುತ್ತಿರುವ ಬಿಕಾಸ್, ಇತ್ತೀಚೆಗೆ ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೊ ತೋರಿಸುವ ಮೂಲಕ ಲೈಂಗಿಕ ಕಿರುಕುಳ ಕೊಡುತ್ತಿದ್ದ ಎನ್ನಲಾಗಿದೆ. ವಿದ್ಯಾರ್ಥಿನಿಯರು ತಮ್ಮ ಪೋಷಕರಿಗೆ ಮಾಹಿತಿ ನೀಡಿದ್ದರು.

ಇದೀಗ ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಬಳಿಕ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗುವುದು ಎಂದು ಪೊಲೀಸ್ ಮೂಲಗಳು ಹೇಳಿವೆ.

PUBLIC NOTICE

This is to inform that, my client is intending to purchase the Schedule Property from Sri. Prakash B. Patil, S/o. B.B. Patil Kulkarni, who is the absolute owner in possession of the same. Whereas, the present public notice has been issued calling upon the general public that, if any person/s have any right in respect of the Schedule Property then, they shall notify us within **seven days** in writing from the date of publication of this notice, with respect to their right, title and interest over the same, along with documents. Further, any claim which is not received within **seven days** then, it is presumed that, no such claim is there over the Schedule Property.

SCHEDULE PROPERTY

All that piece and parcel of vacant land bearing Sy. No. 19/4, Old Sy. No. 19/* & 19/1, measuring 25 Guntas, including 2 ½ Guntas of Kharab, situated at Agrahara Village, Yelahanka Hobli, Bengaluru North Taluk, which is bounded on;

EAST BY : Land bearing Sy. No. 20;
WEST BY : Road;
NORTH BY : Land bearing Sy. No. 19/2; and
SOUTH BY : Remaining land in Sy.No.19.

T. SESHAGIRI RAO, Advocate
No. 230, 2nd Main, 2nd Cross, Mahalakshmi Layout,
Bengaluru - 560 086. M: 96328 00363
Email Id: tsraoofficefiling@gmail.com

ಹೆಜ್ಜೇನು ದಾಳಿ: ವಿದ್ಯಾರ್ಥಿಗಳಿಗೆ ಗಾಯ

ಉಡುಪಿ: ವಳಕಾಡು ಶಾಲೆಯಲ್ಲಿ ಹೆಜ್ಜೇನು ಕಡಿತದಿಂದಾಗಿ 40ಕ್ಕೂ ಅಧಿಕ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಶಾಲೆಯ ಆವರಣದಲ್ಲಿ ಆಡುತ್ತಿದ್ದ ಒಬ್ಬ ವಿದ್ಯಾರ್ಥಿ ಕಟ್ಟಡದಲ್ಲಿದ್ದ ಜೇನುಗೂಡಿಗೆ ಕಲ್ಲು ಎಸೆದಿದ್ದ ಎನ್ನಲಾಗಿದೆ. ಇದರಿಂದ ಜೇನು ನೊಣಗಳು ಮಕ್ಕಳ ಮೇಲೆ ದಾಳಿ ನಡೆಸಿವೆ. ಶಿಕ್ಷಕರು, ಪೋಷಕರು ಗಾಯಗೊಂಡ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ದರು.

ಫೆ.1ರಿಂದ ರಾಜ್ಯದ ಕೆಲವೆಡೆ ಮಳೆಯ ಮುನ್ಸೂಚನೆ

ಬೆಂಗಳೂರು: ರಾಜ್ಯದ ಕೆಲವೆಡೆ ಫೆ.1ರಿಂದ ಮೂರು ದಿನ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಚಾಮರಾಜನಗರ, ಮೈಸೂರು, ಹಾಸನ, ಕೊಡಗು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಒಂದೆರಡು ಕಡೆ ಫೆ.1ರಂದು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ಧಾರವಾಡ, ಗದಗ ಮತ್ತು ಹಾವೇರಿಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಈ ಜಿಲ್ಲೆಗಳ ಕೆಲವೆಡೆ ಫೆ.2, ಫೆ.3ರಂದೂ ಮಳೆಯಾಗುವ ಸಂಭವ ಇದೆ. ಬೆಂಗಳೂರಿನಲ್ಲಿ ಒಣಹವೆ ಇರುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕಡಿಮೆ ಬಾಡಿಗೆ: ಲೆಕ್ಕಪತ್ರ ಸಮಿತಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಬೆಂಗಳೂರು ಗಾಲ್ಫ್ ಕ್ಲಬ್‌ಗೆ ಗುತ್ತಿಗೆ ಆಧಾರದಲ್ಲಿ 124 ಎಕರೆ ಜಮೀನನ್ನು ವರ್ಷಕ್ಕೆ ₹1 ಕೋಟಿಯಂತೆ ಬಾಡಿಗೆ ನಿಗದಿ ಮಾಡಿರುವ ಕ್ರಮದ ಬಗ್ಗೆ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

ಸಿ.ಸಿ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಮಿತಿ ಸಭೆಯಲ್ಲಿ, 'ಇಂದಿನ ದಿನಮಾನಕ್ಕೆ ಅನುಗುಣವಾಗಿ ಬಾಡಿಗೆ ಮೊತ್ತವನ್ನು ಪರಿಷ್ಕರಿಸಬೇಕು. ಸರ್ಕಾರಕ್ಕೆ ಹೆಚ್ಚಿನ ಆದಾಯವೂ ಬರುತ್ತದೆ' ಎಂದು ಸಮಿತಿ ಸದಸ್ಯರು ಸಲಹೆ ನೀಡಿದರು.

ದೊಮ್ಮಲೂರು ಬಳಿ 1990ರಿಂದ ಗಾಲ್ಫ್ ಕ್ಲಬ್‌ಗೆ 124 ಎಕರೆ ಜಾಗವನ್ನು ಗುತ್ತಿಗೆ ಆಧಾರದಲ್ಲಿ ನೀಡಲಾಗಿದೆ. ಪ್ರತಿ 10 ವರ್ಷಕ್ಕೊಮ್ಮೆ ಗುತ್ತಿಗೆ ಪರಿಷ್ಕರಿಸಲಾಗುತ್ತದೆ. ನಗರದ ಪ್ರಮುಖ ಭಾಗದಲ್ಲಿರುವ ಈ ಜಾಗಕ್ಕೆ ಅತ್ಯಂತ ಕಡಿಮೆ ಬಾಡಿಗೆ ನಿಗದಿ ಮಾಡಲಾಗಿದೆ ಎಂದು ಸಮಿತಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ನಗರದಲ್ಲಿ ಈಗಾಗಲೇ ಒಂದು ದೊಡ್ಡ ಗಾಲ್ಫ್ ಕ್ಲಬ್ ಇದೆ. ಆದ್ದರಿಂದ ಎಚ್‌ಎಎಲ್ ರಸ್ತೆಯಲ್ಲಿರುವ ಗಾಲ್ಫ್ ಕ್ಲಬ್‌ಗೆ 124 ಎಕರೆ ಪ್ರದೇಶದ ಅಗತ್ಯವಿಲ್ಲ. ಗಾಲ್ಫ್‌ಗೆ ಅಗತ್ಯವಿರುವಷ್ಟು ಜಾಗ ನೀಡಿ, ಉಳಿದ ಭೂಮಿಯನ್ನು ಸರ್ಕಾರ ಹಿಂದಕ್ಕೆ ಪಡೆಯಬಹುದು. ಗುತ್ತಿಗೆ ನವೀಕರಣದ ಸಂದರ್ಭದಲ್ಲಿ ಹೆಚ್ಚು ಬಾಡಿಗೆ ನಿಗದಿ ಮಾಡಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರಲಿದೆ ಎಂಬ ಸಲಹೆ ಬಂದಿತು.

ಅಲ್ಲದೇ, ಈ ಜಾಗದಲ್ಲಿರುವ ಖಾಸಗಿ ಐಷಾರಾಮಿ ಹೋಟೆಲ್‌ನಿಂದ ಬರುವ ಬಾಡಿಗೆಯೂ ಅತಿ ಕಡಿಮೆ ಇದೆ. ಅಕ್ಕಪಕ್ಕದಲ್ಲಿ ಭೂ ಒತ್ತುವರಿಯೂ ಆಗಿದೆ. ಈ ಜಾಗವನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ಅರ್ಹ ಬಾಡಿಗೆ ನೀಡುವ ಸಂಸ್ಥೆಗೆ ಹಸ್ತಾಂತರಿಸಬಹುದು ಎಂಬ ವಿಚಾರವೂ ಚರ್ಚೆ ಆಯಿತು ಎಂದು ಮೂಲಗಳು ತಿಳಿಸಿವೆ.

ಮುಂದಿನ ವಾರ ಸಮಿತಿ ಸಭೆ ನಡೆದ ಬಳಿಕ ಗಾಲ್ಫ್ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲು ತೀರ್ಮಾನಿಸಲಾಯಿತು. ಈ ಕ್ಲಬ್ ವಿಚಾರದಲ್ಲಿ ಐಎಎಸ್ ಅಧಿಕಾರಿಗಳ ಲಾಬಿ ತೀವ್ರವಾಗಿದೆ. ಸರ್ಕಾರ ಯಾವುದೇ ಪ್ರಭಾವಕ್ಕೂ ಮಣಿಯಬಾರದು ಎಂಬ ಚರ್ಚೆ ನಡೆಯಿತು.

ನಗರದಲ್ಲಿ ಇಂದು

ಪುರಂದರದಾಸರ ಆರಾಧನಾ ಸಂಗೀತೋತ್ಸವ: ಪುರಂದರದಾಸರ ಬೃಹತ್ ಶಿಲಾವಿಗ್ರಹಕ್ಕೆ ವಿಶೇಷ ಅಭಿಷೇಕ, ಪುರಂದರದಾಸರ ಕೃತಿಗಳ ಗೋಷ್ಠಿಗಾಯನ: ಶುಭಾ ಸಂತೋಷ್, ಪುರಂದರದಾಸರ ಕೃತಿಗಳ ಕುರಿತು ಚಿಂತನೆ: ಕಲ್ಲಾಪುರ ಪವಮಾನಾಚಾರ್ಯ, ಭಜನೆ: ಅನುಪಮಾರಾವ್, ನಾಮಸಂಕೀರ್ತನೆ: ಲಕ್ಷ್ಮೀರಾಜ್ ಮತ್ತು ತಂಡ, ದಾಸವಾಣಿ: ಚಿಂತನಪಲ್ಲಿ ಶ್ರೀನಿವಾಸ್, ಪುರಂದರದಾಸರ ನವರತ್ನಮಾಲಿಕೆ ಕೃತಿಗಳ ಗೋಷ್ಠಿಗಾಯನ: ಶೃಂಗೇರಿ ಎಚ್.ಎಸ್. ನಾಗರಾಜ್, ಜೆ.ಎಸ್. ಕಂಠಭಟ್ ಹಾಗೂ ತಂಡ, ಗಾಯತ್ರಿ ಮಯ್ಯ ಮತ್ತು ತಂಡ, ಸಭಾ ಕಾರ್ಯಕ್ರಮ: ಸಾನ್ನಿಧ್ಯ: ಸುವಿದ್ಯೇಂದ್ರತೀರ್ಥ ಶ್ರೀಪಾದ ಸ್ವಾಮೀಜಿ, 'ಮಧ್ವ ಪುರಂದರ' ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಅನಂತಪದ್ಮನಾಭ ರಾವ್, ಅತಿಥಿಗಳು: ವಿ. ಶ್ರೀಶಾನಂದ, ಗುತ್ತಲ್ ರಂಗಚಾರ್, ಸತ್ಯಧ್ಯಾನಾಚಾರ್ ಕಟ್ಟಿ, ವಿದ್ಯಾಧೀಶಾಚಾರ್ಯ ಗುತ್ತಲ್, ಎಂ.ಆರ್.ವಿ. ಪ್ರಸಾದ್, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ಪುರಂದರದಾಸರ ಬೃಹತ್ ಶಿಲಾವಿಗ್ರಹ ಸನ್ನಿದಾನ, ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನ ಆವರಣ, ಉತ್ತರಾದಿಮಠ, ಪಂಪಮಹಾಕವಿ ರಸ್ತೆ, ಬಸವನಗುಡಿ, ಬೆಳಿಗ್ಗೆ 9ರಿಂದ

ಭಾರತ ಗಣರಾಜ್ಯೋತ್ಸವದ ದಿನಾಚರಣೆ, ಕೆ. ಸುಭಾಷ್ ಆಳ್ವ ಸ್ಮಾರಕ ದತ್ತಿನಿಧಿ ಸ್ಪರ್ಧೆಗಳು–2025: ಉದ್ಘಾಟನೆ: ಕೆ.ಪಿ. ಪುತ್ತೂರಾಯ, ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಅತಿಥಿ: ಆರ್. ಲಕ್ಷ್ಮೀರಾಯಣ, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಮಕ್ಕಳ ಕೂಟದ ಆವರಣ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಳಿಗ್ಗೆ 10.30



ಕೆ.ಪಿ. ಪುತ್ತೂರಾಯ

'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ: ಆಯೋಜನೆ: ಭಾಗ್ಯಶ್ರೀ ಕಲಾವೃಂದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ಉದ್ಘಾಟನೆ, 1924 ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಆಚರಣೆ: ಅತಿಥಿ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11.30

ರಂಗಕರ್ಮಿ ಟೆಲಿಕಾಂ ದತ್ತಾತ್ರೇಯ ನೆನಪು, ಗಾಯನ, ರಂಗ ಗೌರವ, ನಾಟಕ ಪ್ರದರ್ಶನ: ಉದ್ಘಾಟನೆ: ಬಲವಂತರಾವ್ ಪಾಟೀಲ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ಜಿ. ಬಾಬು, ಎನ್.ಆರ್. ಹೆಗಡೆ, ಆರ್.ಕೆ. ಹೆಗಡೆ, ರಂಗ ಗೌರವ: ಬೈರಮಂಗಲ ರಾಮೇಗೌಡ, ರಾಜು ಮಳವಳ್ಳಿ, ಕೆ.ಎಸ್. ಗಣೇಶ್, ವೆಂಕಟಾಚಲ, ಕೆ.ಆರ್. ಲಕ್ಷ್ಮೀನಾರಾಯಣ, ಸುರೇಶ್ ಬಾಬು, 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ಪ್ರಸ್ತುತಿ: ಸಮನ್ವಯ ಬೆಂಗಳೂರು, ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ವೆಂಕಟಾಚಲ, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4ರಿಂದ

ಆರಾಧನಾ ಸಂಗೀತೋತ್ಸವದ ಉದ್ಘಾಟನೆ: ಜಯಂತಿ ಕುಮರೇಶ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ದಿ ಬ್ಲೈಂಡ್, ಜೆ.ಪಿ. ನಗರ, ಸಂಜೆ 5

ಗೌರಿ ದಿನ: 'ಸೈಕಲ್' ಚಿತ್ರದ ಪ್ರದರ್ಶನ ಮತ್ತು ಸಂವಾದ: ಭಾಗವಹಿಸುವವರು: ಸುಹೇಲ್ ಬ್ಯಾನರ್ಜಿ, ನಿರ್ಮಾಣ: ತೀಸ್ತಾ ಸೆಟಲ್‌ವಾಡ್, ಆಯೋಜನೆ: ಗೌರಿ ಸ್ಮಾರಕ ಟ್ರಸ್ಟ್, ಸ್ಥಳ: ಡಾ. ಅಂಬರೀಶ್ ಸಭಾಂಗಣ, ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 5.30

ದಿ ಅಕೌಂಟೆಂಟ್ ಜನರಲ್ಸ್ ಆಫೀಸ್ ಎಂಪ್ಲಾಯೀಸ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್, ಪಾರ್ಕ್ ಹೌಸ್ ರೋಡ್, ಬೆಂಗಳೂರು-560001.

ಚುನಾವಣೆ ವೇಳಾಪಟ್ಟಿ ಪ್ರಕಟಣೆ

ಮಾನ್ಯ ಸದಸ್ಯರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ಸಹಕಾರ ಸಂಘದ 05 ವರ್ಷಗಳ ಅವಧಿಯ ಆಡಳಿತ ಮಂಡಳಿಗೆ ದಿನಾಂಕ:-14-02-2025 ರಂದು ಶ್ರೀ ಓಣಿ ಆಂಜನೇಯಸ್ವಾಮಿ ದೇವಾಲಯ ಟ್ರಸ್ಟ್ "ಸಮಾಜ ಸೇವಾ ಧುರೀಣ" ವೈ.ಹೆಚ್.ವೆಂಕಟರಮಣಪ್ಪ ಕಲ್ಯಾಣ ಮಂದಿರ, ನಂ.36, ಅರಮನೆ ರಸ್ತೆ, ಗಾಂಧಿನಗರ, ಬೆಂಗಳೂರು- 560009 ಇಲ್ಲಿ ಸಂಘದ ಚುನಾವಣೆಯನ್ನು ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಇದರನ್ವಯ ದಿನಾಂಕ:-06-02-2025 ರಂದು ನಾಮಪತ್ರಗಳನ್ನು ಸಲ್ಲಿಸಲು ಕೊನೆ ದಿನಾಂಕವಾಗಿರುತ್ತದೆ. ದಿನಾಂಕ:-07-02-2025 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ದಿನಾಂಕ:-08-02-2025 ರಂದು ಮಧ್ಯಾಹ್ನ 3-00 ಗಂಟೆಯ ಒಳಗೆ ನಾಮಪತ್ರಗಳನ್ನು ವಾಪಸ್ಸು ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘವನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- (**ಗಂಗಾಂಬಿಕೆ**) ರಿಟರ್ನಿಂಗ್ ಅಧಿಕಾರಿ
ದಿ ಅಕೌಂಟೆಂಟ್ ಜನರಲ್ಸ್ ಆಫೀಸ್ ಎಂಪ್ಲಾಯೀಸ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್, ಪಾರ್ಕ್ ಹೌಸ್ ರೋಡ್, ಬೆಂಗಳೂರು-560001.

ಪುರಸಭೆ ಕಾರ್ಯಾಲಯ, ಬಿಡದಿ

ಬಿಡದಿ ಮುಖ್ಯರಸ್ತೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. www.bidaditown.mrc.gov.in
email:itstaff_ulb_bidadi@yahoo.com / tmcbidadi@gmail.com

ಸಂಖ್ಯೆ:ಪು.ಕಾ.ಬಿ/ತಾ.ವಿ/ಟೆಂಡರ್/ಸಿಆರ್/19/2024–25 ದಿನಾಂಕ:12.01.2025

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಬಿಡದಿ ಪುರಸಭಾ ವ್ಯಾಪ್ತಿಯಲ್ಲಿ 2018–19ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ & 2024–25ನೇ ಸಾಲಿನ ಪುರಸಭಾ ನಿಧಿಯಡಿ ಒಟ್ಟು ಮೊತ್ತ ರೂ. 155 ಲಕ್ಷಗಳ (ಕನಿಷ್ಠ ಮೊತ್ತ ರೂ. 25 ಲಕ್ಷಗಳು ಗರಿಷ್ಠ ಮೊತ್ತ ರೂ. 50 ಲಕ್ಷಗಳ) ವೆಚ್ಚದಲ್ಲಿ ಒಟ್ಟು 04 ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆಡಬ್ಲ್ಯೂ–1 ಮತ್ತು 2ರ ನಿಯಮಾವಳಿಗಳಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. KPPP Portal E-Procurement Portal ನಲ್ಲಿ ಟೆಂಡರ್‌ನ್ನು ದಿನಾಂಕ:12.01.2025 ರಿಂದ ದಿನಾಂಕ: 05.02.2025 ರ ಸಂಜೆ 5:30 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕ: 10.02.2025ರಂದು ಬೆಳಿಗ್ಗೆ 11:00 ಘಂಟೆ, ಹೆಚ್ಚಿನ ಮಾಹಿತಿಗಾಗಿ www.bidaditown.mrc.gov.in Or https://kppp.karnataka.gov.in ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬಿಡದಿ.
ಸಹಿ/– ಹರಿಪ್ರಸಾದ್ ಎಂ.ಎನ್. ಅಧ್ಯಕ್ಷರು, ಪುರಸಭೆ, ಬಿಡದಿ,

ನೈಋತ್ಯ ರೈಲ್ವೆ

ಇ-ಟೆಂಡರ್ ಸೂಚನೆ ನಂ. 38 UBL 2024-25 ದಿನಾಂಕ: 20.01.2025

[illegible]

1	[illegible]	ರೂ. 5,60,05,390.00
2	[illegible]	ರೂ. 1,15,62,513.00
3	[illegible]	ರೂ. 2,04,53,321.00
4	[illegible]	ರೂ. 5,81,14,729.00
5	[illegible] ... ಅಪ್ರೋಚ್‌ಗಳ ಮೇಲೆ ಭೂಕುಸಿತ / ಗುಡ್ಡಗಳ ಬೀಳುವಿಕೆಯನ್ನು ತಡೆಯುವುದು (16 ನಂ. ಅಪ್ರೋಚ್ ಸುರಂಗಗಳು).	ರೂ. 22,58,96,534.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.02.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಹುಬ್ಬಳ್ಳಿ
PUB/729/AAMO/PRB/SWR/2024-25
South Western Railway - SWR | @SWRRLY | SWRRLY

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1.	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/3769/2024–25 ದಿನಾಂಕ: 27.01.2025 (2ನೇ ಕರೆ)	₹ 54,66,167/- / ₹ 1,09,400/-	04.02.2025ರ ಸಂಜೆ 4:00 ಗಂಟೆಯವರೆಗೆ	06.02.2025ರ ಸಂಜೆ 5:00 ಗಂಟೆಯ ನಂತರ
2.		ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/3769/2024–25 ದಿನಾಂಕ: 27.01.2025 (3ನೇ ಕರೆ)	₹ 66,58,681/- / ₹ 1,33,200/-		
3.		ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/3771/2024–25 ದಿ:27.01.2025 (2ನೇ ಕರೆ) (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	₹ 25,19,303/- / ₹ 25,193/-		
4.		ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/3773/2024–25 ದಿನಾಂಕ: 27.01.2025 (3ನೇ ಕರೆ)	1. ₹ 76,20,587/- / ₹ 1,52,500/-		
5.			2. ₹ 77,14,568/- / ₹ 1,54,300/-		

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
6.	ಪೂರ್ವ–2	ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1483/6ನೇ ಕರೆ	₹ 77,14,000/- / ₹ 1,54,300/-	05.02.2025ರ ಸಂಜೆ 4:00 ಗಂಟೆಯವರೆಗೆ	06.02.2025ರ ಸಂಜೆ 4:00 ಗಂಟೆಗೆ
7.		ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1480/6ನೇ ಕರೆ	₹ 75,38,000/- / ₹ 1,50,800/-		
8.		ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1454/4ನೇ ಕರೆ	₹ 65,53,000/- / ₹ 1,31,100/-		
9.		ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1485/4ನೇ ಕರೆ	₹ 69,39,000/- / ₹ 1,38,780/-		
10.		ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1453/7ನೇ ಕರೆ	₹ 65,53,000/- / ₹ 1,31,100/-		
11.		ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1892/4ನೇ ಕರೆ	₹ 89,18,100/- / ₹ 1,78,400/-		
12.		ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2073	₹ 18,02,500/- / ₹ 45,100/-		

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಡಿ.ಐ.ಪಿ.ಆರ್/ಸ್ಐ/4620/2024–25

ಸಾರ್ವಜನಿಕ ಸೂಚನೆ

ನಮ್ಮ ಕಕ್ಷಿದಾರರು, 10.8.2021 ರಂದು ನಡೆದ ಜಯನಗರ (ಕೆಂಗೇರಿ) ಹಿರಿಯ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟ ವಿಭಜನಾ ಪತ್ರ ದಾಖಲೆ ಸಂಖ್ಯೆ KEN-1-02730-2021-22, ಸಂಗ್ರಹಿಸಿಟ್ಟಿರುವ ಸಿಡಿ ಸಂಖ್ಯೆ KEND 1351 ದಿನಾಂಕ 10.8.2021 ಅಡಿಯಲ್ಲಿ ಸಂಪೂರ್ಣ ಮಾಲೀಕತ್ವದ ಹಕ್ಕುಗಳನ್ನು ಪಡೆದಿರುವೆಂದು ಹೇಳಿರುವ ಆಯಾಯಾ ಮಾಲೀಕರಿಂದ ಸರ್ವೆ ನಂ.29 OB ಚೂಡಹಳ್ಳಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ನಲ್ಲಿರುವ ಒಟ್ಟು 3 ಎಕರೆ ಕೃಷಿ ಭೂಮಿಯಲ್ಲಿ 0-28 ಗುಂಟೆ ಕೃಷಿ ಭೂಮಿಯನ್ನು (ಇಲ್ಲಿ ಕೆಳಗೆ ನೀಡಿರುವ ಶೆಡ್ಯೂಲ್‌ನಲ್ಲಿ ಬ್ಲಾಕ್ ಸಂಖ್ಯೆಗಳು I, II ಮತ್ತು III ಎಂದು ಗುರುತಿಸಲಾಗಿದೆ ಮತ್ತು ನಿಖರವಾಗಿ ವಿವರಿಸಲಾಗಿದೆ) (**ಒಟ್ಟಾಗಿ ಶೆಡ್ಯೂಲ್ ಆಸ್ತಿ ಎನ್ನಲಾಗಿದೆ**) ಖರೀದಿಸಲು ಮಾತುಕತೆ ನಡೆಸುತ್ತಿದ್ದಾರೆ. ಪ್ರತಿಯೊಂದು ಆಸ್ತಿಯ (ಅಂದರೆ ಬ್ಲಾಕ್‌ಗಳು I, II ಮತ್ತು III) ಮಾಲೀಕರೂ **ಶೆಡ್ಯೂಲ್ ಆಸ್ತಿಯು** ತಮ್ಮದೇ ಸಂಪೂರ್ಣ ಆಸ್ತಿಯಾಗಿದೆ; ಸಂಪೂರ್ಣ **ಶೆಡ್ಯೂಲ್ ಆಸ್ತಿಯು** ಯಾವುದೇ ರೀತಿಯ ಹೊರೆಗಳಿಂದ ಮುಕ್ತವಾಗಿದೆ, ಮತ್ತು **ಶೆಡ್ಯೂಲ್ ಆಸ್ತಿಯ** ಪ್ರತಿಯೊಬ್ಬ ಮಾಲೀಕರೂ **ಶೆಡ್ಯೂಲ್ ಆಸ್ತಿಯನ್ನು** ನಮ್ಮ ಕಕ್ಷಿದಾರರಿಗೆ ಮಾರಾಟ ಮಾಡಲು ಸ್ವತಂತ್ರರು ಮತ್ತು ಸಮರ್ಥರು ಎಂದು ಪ್ರತಿಪಾದಿಸುತ್ತಿದ್ದಾರೆ ಮತ್ತು ಪ್ರತಿನಿಧಿಸುತ್ತಿದ್ದಾರೆ. **ಈ ಶೆಡ್ಯೂಲ್ ಆಸ್ತಿಯಲ್ಲಿ** ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನಾತ್ಮಕ ಹಕ್ಕು, ಸ್ವಾಮ್ಯ ಅಥವಾ ಆಸಕ್ತಿ ಅಥವಾ ಯಾವುದೇ ಪರಭಾರೆ, ಚಾರ್ಜ್ ಅಥವಾ ಜಾರಿಗೊಳಿಸಬಹುದಾದ ಹಕ್ಕು ಇದೆ ಎಂದು ಕ್ಲೈಮ್ ಮಾಡುವ ಯಾವುದೇ ವ್ಯಕ್ತಿ ಮತ್ತು/ಅಥವಾ ಯಾವುದೇ ಸ್ವರೂಪದ, ಯಾವುದೇ ಕ್ಲೈಮ್ ಹೊಂದಿರುವ, ಮತ್ತು/ಅಥವಾ ಪ್ರಸ್ತಾವಿತ ವಹಿವಾಟಿಗೆ ಯಾವುದೇ ರೀತಿಯ ಆಕ್ಷೇಪಣೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿ ಅಂತಹ ಕ್ಲೈಮ್ ಮತ್ತು/ಅಥವಾ ಆಕ್ಷೇಪಣೆಗಳನ್ನು ಲಿಖಿತವಾಗಿ ಈ ದಿನಾಂಕದಿಂದ **ಏಳು ದಿನಗಳ ಒಳಗೆ**, ಇಲ್ಲಿ ಕೆಳಗೆ ಸಹಿ ಮಾಡಿರುವವರಿಗೆ, ಪೂರಕ ದಾಖಲೆಗಳೊಂದಿಗೆ ಸಲ್ಲಿಸಬೇಕು ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುತ್ತಿದ್ದೇವೆ. ಹಾಗೆ ಯಾವುದೇ ಕ್ಲೈಮುಗಳು ಬರದಿದ್ದಲ್ಲಿ ಯಾವುದೇ ಮಾನನೀಯ ಕ್ಲೈಮ್‌ಗಳು ಅಥವಾ ಆಕ್ಷೇಪಣೆಗಳು ಇಲ್ಲ ಎಂದು ಭಾವಿಸಲಾಗುತ್ತದೆ ಮತ್ತು ನಮ್ಮ ಗ್ರಾಹಕರು ಏಕೈಕ ಮತ್ತು ನಿರ್ವಿವಾದಿತ ಸ್ವಾಮ್ಯ, ಮತ್ತು ಇತರ ಶಾಸನಬದ್ಧ ಔಪಚಾರಿಕತೆಗಳ ಅನುಸರಣೆಗೆ ಒಳಪಟ್ಟು ವಹಿವಾಟನ್ನು ಪೂರ್ಣಗೊಳಿಸಲು ಮುಂದುವರಿಯುತ್ತಾರೆ.

ಶೆಡ್ಯೂಲ್ ಆಸ್ತಿ

ಬ್ಲಾಕ್ I : ವಿಸ್ತಾರ: 0-12 ಗುಂಟೆಗಳು. **ಮಾಲೀಕತ್ವವನ್ನು ಕ್ಲೈಮ್ ಮಾಡಿರುವವರು:** ರಾಜಮ್ಮ, ನಾಗಮ್ಮ ಮತ್ತು ಲಕ್ಷ್ಮಮ್ಮ ಹೆಚ್. ಎಲ್ಲರೂ ಹನುಮಪ್ಪ ಅವರ ಹೆಣ್ಣುಮಕ್ಕಳು; 10.8.2021 ದಿನಾಂಕದ ವಿಭಜನಾ ಪತ್ರದಲ್ಲಿ ಒಟ್ಟಾಗಿ ಮೊದಲ ಪಕ್ಷವಾಗಿದ್ದಾರೆ.

ಬ್ಲಾಕ್ II : ವಿಸ್ತಾರ: 0-6 ಗುಂಟೆಗಳು. **ಮಾಲೀಕತ್ವವನ್ನು ಕ್ಲೈಮ್ ಮಾಡಿರುವವರು:** 10.8.2021 ದಿನಾಂಕದ ವಿಭಜನಾ ಪತ್ರದಲ್ಲಿ ಎರಡನೇ ಪಕ್ಷವಾಗಿರುವ ದಿವಂಗತ ಸಂಜಪ್ಪ ಅವರ ಪುತ್ರ ಹನುಮಪ್ಪ.

ಬ್ಲಾಕ್ III : ವಿಸ್ತಾರ: 1 ಎಕರೆ 10 ಗುಂಟೆಗಳಲ್ಲಿ 0-10 ಗುಂಟೆಗಳು. **ಮಾಲೀಕತ್ವವನ್ನು ಕ್ಲೈಮ್ ಮಾಡಿರುವವರು:** ಹನುಮಪ್ಪ ಅವರ ಮಗನಾದ ಎಚ್. ಕುಮಾರ್ ಅವರ ಎಚ್.ಯು.ಎಫ್. (ಇದರಲ್ಲಿರುವವರು: ಎಚ್. ಕುಮಾರ್; ಎಚ್. ಕುಮಾರ್ ಅವರ ಪುತ್ರಿ ಕುಮಾರಿ ಅಂಕಿತಾ ಸಿ. ಕೆ. ; ಎಚ್. ಕುಮಾರ್ ಅವರ ಅಪ್ರಾಪ್ತ ವಯಸ್ಸಿನ ಪುತ್ರಿ ಸಿ. ಕೆ. ಶರಣ್ಯ; ಎಚ್. ಕುಮಾರ್ ಅವರ ಪುತ್ರ ಅಪ್ರಾಪ್ತ ವಯಸ್ಸಿನ ಧ್ರುವಿಕ್ ಕುಮಾರ್ ಸಿ.ಕೆ.; ಅಪ್ರಾಪ್ತರ ಪ್ರತಿನಿಧಿ: ಅವರ ಸಹಜ ಪಾಲಕರು ಮತ್ತು ಎಚ್. ಯು. ಎಫ್. ಕರ್ತಾ ಆಗಿರುವ ಎಚ್. ಕುಮಾರ್), ಒಟ್ಟಾರೆಯಾಗಿ 10.8.2021 ದಿನಾಂಕದ ವಿಭಜನಾ ಪತ್ರದಲ್ಲಿ ಮೂರನೇ ಪಕ್ಷ ಎಂದು ಉಲ್ಲೇಖಿಸಲಾಗಿದೆ.

ಸಹಿ/-, **ಮೂರ್ತಿ ಅಂಡ್ ಕುಮಾರ್, ನ್ಯಾಯವಾದಿಗಳು**
ದಿನಾಂಕ: 28-01-2025 | 1/ಎ, 2ನೇ ಮುಖ್ಯರಸ್ತೆ, 36ನೇ ಅಡ್ಡ ರಸ್ತೆ, 8ನೇ ಬ್ಲಾಕ್, ಜಯನಗರ,
ಸ್ಥಳ: ಬೆಂಗಳೂರು | ಬೆಂಗಳೂರು-560082. Email: shiv@mklaw.in

ಸ್ವರ್ಣಭಾರತಿ ಸಹಕಾರ ಬ್ಯಾಂಕ್ ನಿ.,

ನಂ. 2229, 23ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು–560070, ದೂ: 080–26762629/30, 41122816

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ

ಸೆಕ್ಯುರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ 2002ರಲ್ಲಿರುವಂತೆ ಸೆಕ್ಯುರಿಟಿ ಎನ್‌ಫೋರ್ಸ್‌ಮೆಂಟ್‌ನ ಪ್ರಕಾರ ಸ್ಥಿರಾಸ್ತಿ ಸ್ವತ್ತನ್ನು ಹರಾಜು ಮಾಡಲಾಗುವುದು.

ಆದಾಗ್ಯೂ, ಶ್ರೀ **ನಂಜುಂಡಸ್ವಾಮಿ ಎ.ಹೆಚ್**, ನಂ.1668, 1ನೇ ಮುಖ್ಯರಸ್ತೆ, ಸರ್ ಎಂ.ವಿ. ಲೇಔಟ್, 9ನೇ ಮುಖ್ಯರಸ್ತೆ, ಉಲ್ಲಾಳ್ ಮುಖ್ಯ ರಸ್ತೆ, ನಾಗರಭಾವಿ, ಬೆಂಗಳೂರು–560056, ಇವರು **ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ, ಬನಶಂಕರಿ 2ನೇ ಹಂತ, ಬೆಂಗಳೂರು** ರವರಿಂದ ಪಡೆದ ಸಾಲವನ್ನು ಮರುಪಾವತಿಸಲು ವಿಫಲವಾಗಿರಾಗಿದ್ದಾರೆ ಒಪ್ಪಿದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಪಾವತಿಸಬೇಕಾದ ಒಟ್ಟು ಮೊತ್ತ **ರೂ. 84,49,793/–** (ರೂಪಾಯಿ ಎಂಭತ್ತನಾಲ್ಕು ಲಕ್ಷದ ನಲವತ್ತೊಂಭತ್ತು ಸಾವಿರದ ಏಳುನೂರ ತೊಂಭತ್ತಮೂರು ಮಾತ್ರ) **ದಿನಾಂಕ: 28.01.2025** ರಂದು ಇದ್ದಂತೆ ಅನ್ವಯವಾಗುವ ದರ ಮತ್ತು ಬಡ್ಡಿ ವೆಚ್ಚಗಳು ಪಾವತಿಸಲು ಋಣಬಾಧ್ಯವಾಗಿರುತ್ತದೆ. ಈ ಮೂಲಕ ತಿಳಿಸುವುದೇನೆಂದರೆ, ಬ್ಯಾಂಕ್‌ನ ಸರ್ಫೇಸಿ ಕಾಯ್ದೆ, 2002ರ ಸೆಕ್ಷನ್ 13(2)ರ ಅಡಿಯಲ್ಲಿ ಮತ್ತು ಇದಕ್ಕೆ ಅನುಸಾರವಾಗಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಈ ಸೂಚನೆ ನೀಡಲಾಗುತ್ತಿದ್ದು, ಅಧಿಕೃತ ಅಧಿಕಾರಿ, **ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ** ರವರು ಕೆಳಗೆ ವಿವರವಾಗಿ ವಿವರಿಸಿರುವ ಸ್ವತ್ತುಗಳನ್ನು ಒಳಗೊಂಡಂತೆ ಅಡಮಾನು ಆದ ಸ್ಥಿರಾಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಕೆಳಗೆ ವಿವರಿಸಿರುವ ಆಸ್ತಿಯನ್ನು ಸರ್ಫೇಸಿ ಕಾಯ್ದೆ ಮತ್ತು ಅದಕ್ಕೆ ಸಂಬಂಧಪಟ್ಟ ಸೆಕ್ಯೂರಿಟಿ ಇಂಟರೆಸ್ಟ್(ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮಗಳ ಅಡಿಯಲ್ಲಿ ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿರುತ್ತಾರೆ.

ಆಸ್ತಿಯ ವಿವರ: ಷೆಡ್ಯೂಲ್ ಎ: ನಂಜುಂಡಸ್ವಾಮಿ ಎ ಎಚ್ ರವರ ಸ್ವಾಧೀನದಲ್ಲಿರುವ ದಕ್ಷಿಣ ಭಾಗದ ಆಸ್ತಿ ನಂ. 1/ಇ (ಒಂದು ಬಾರ್ ಇ) ಈ ಆಸ್ತಿಯು ಮಲಗಾಲು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದ್ದು, ಈಗ ಬಿಬಿಎಂಪಿ ವಾರ್ಡ್ ನಂ.127, (ಮುಡಲಪಾಳ್ಯ) ಬೆಂಗಳೂರಿನ ನ್ಯಾಯವ್ಯಾಪ್ತಿಯಲ್ಲಿ ಬರುತ್ತದೆ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಅದೇ ಆಸ್ತಿಯ ಉಳಿದ ಉತ್ತರ ಭಾಗ, ದಕ್ಷಿಣಕ್ಕೆ: ರಸ್ತೆ. ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 52–0 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 46 ½ (ನಲವತ್ತಾರು ಮತ್ತು ಅರ್ಧ) ಅಡಿ, ಒಟ್ಟು ವಿಸ್ತೀರ್ಣ 2423.80 ಚದರ ಅಡಿ.

ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ & ಸ್ಥಳ	ಮೀಸಲು ಬೆಲೆ	ಇಎಂಡಿ ಮೊತ್ತ
28.02.2025 ಮಧ್ಯಾಹ್ನ 12.30ಕ್ಕೆ ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ, ನಂ.2229, 23ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು–560070	ರೂ.1,69,66,600/– (ರೂಪಾಯಿ ಒಂದು ಕೋಟಿ ಅರವತ್ತೊಂಭತ್ತು ಲಕ್ಷದ ಅರವತ್ತಾರು ಸಾವಿರದ ಆರು ನೂರು ಮಾತ್ರ)	ಇಎಂಡಿ : ಮೀಸಲು ಬೆಲೆಯ 10% ರೂ. 16,96,660/– (ರೂಪಾಯಿ ಹದಿನಾರು ಲಕ್ಷದ ತೊಂಭತ್ತಾರು ಸಾವಿರದ ಆರು ನೂರ ಅರವತ್ತು ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:– (1) ಟೆಂಡರ್ ಫಾರಂಗಳನ್ನು **ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ, ಬನಶಂಕರಿ 2ನೇ ಹಂತ, ನಂ.2229, 23ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು–560070. (ದೂ.ಸಂಖ್ಯೆ: 080–26762629,26762630)**. ಇವರಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ, ವ್ಯವಹಾರದ ಸಮಯದಲ್ಲಿ ಪಡೆದುಕೊಳ್ಳಬಹುದಾಗಿದೆ. (2) ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು,** ಇವರಿಗೆ ದಿನಾಂಕ **27.02.2025 ಸಂಜೆ 5.00** ಗಂಟೆಯೊಳಗಾಗಿ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ **28.02.2025 ರಂದು ಮಧ್ಯಾಹ್ನ 12.30** ಗಂಟೆಗೆ ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್ಡಾದರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ಈ ಮಾರಾಟವು ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00ರವರೆಗೆ,** ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸ ಬಹುದಾಗಿದೆ. (14) ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬಹುದು. (15) ಡಿಆರ್‌ಟಿ/ಡಿಆರ್‌ಎಟಿ/ಹೈಕೋರ್ಟ್ ಅಥವಾ ಯಾವುದೇ ಇತರ ನ್ಯಾಯಾಲಯದ ಮುಂದಿನ ಪ್ರಕ್ರಿಯೆಗಳ ತಡೆ ಸಂದರ್ಭದಲ್ಲಿ, ಹರಾಜನ್ನು ಮುಂದೂಡಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಮಾರಾಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಅಂತಹ ಮುಂದೂಡಿಕೆಗಾಗಿ ಹಾನಿ, ಪರಿಹಾರ ಅಥವಾ ವೆಚ್ಚವನ್ನು ಕ್ಲೈಮ್ ಮಾಡುವ ಹಕ್ಕನ್ನು ಹೊಂದಿರುವುದಿಲ್ಲ. (16) (ಸಾಲಗಾರರು / ಜಾಮೀನುದಾರರು / ಅಡಮಾನದಾರರು) ಅವರ ಬಾಕಿ ಮೊತ್ತವನ್ನು ಪೂರ್ಣವಾಗಿ ಮರುಪಾವತಿ ಮಾಡದಿದ್ದರೆ, ಕಾಯಿದೆಯ ಪ್ರಕಾರ ಅನ್ವಯವಾಗುವ ಇತರ ನಿಯಮಗಳು ಮತ್ತು ಷರತ್ತುಗಳನ್ನು ಮೇಲೆ ತಿಳಿಸಿದ ದಿನಾಂಕದಂದು ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ಇದು ಸೂಚನೆಯಾಗಿದೆ.

ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್ದಾರರು ಅಧಿಕೃತ ಅಧಿಕಾರಿಗಳು, ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ, ಬನಶಂಕರಿ 2ನೇ ಹಂತ, ನಂ. 2229, 23ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು–560070. ಆಸ್ತಿಯ ವಿವರಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಆಸ್ತಿಯ ಪರಿಶೀಲನೆಗಾಗಿ ಸಂಪರ್ಕಿಸಿ **(ದೂ.ಸಂಖ್ಯೆ: 080–26762629, 26762630)** ಇ–ಮೇಲ್: **swarnabharathisahakarabank688@yahoo.co.in**

ದಿನಾಂಕ : 28.01.2025 | ಸಹಿ/– ಅಧಿಕೃತ ಅಧಿಕಾರಿ
ಸ್ಥಳ : ಬೆಂಗಳೂರು | ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ

110 ಹಳ್ಳಿಗಳಲ್ಲಿ ಪ್ರಕ್ರಿಯೆ ಆರಂಭಿಸಲು ಮುಖ್ಯ ಆಯುಕ್ತರ ಸೂಚನೆ

ಕೊಳವೆಬಾವಿಗಳು ಜಲಮಂಡಳಿಗೆ

ಪ್ರಜಾವಾಣಿ ವಾರ್ತೆ

ಪ್ರಾತಿನಿಧಿಕ ಚಿತ್ರ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಲ್ಲಿರುವ ಕೊಳವೆಬಾವಿಗಳನ್ನು ಜಲಮಂಡಳಿಗೆ ಹಸ್ತಾಂತರಿಸಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ 'ಥಣಿಸಂದ್ರದಲ್ಲಿ ನೀರಿನ ಸಮಸ್ಯೆ ಪರಿಹರಿಸಬೇಕು' ಎಂದು ಸಾರ್ವಜನಿಕರು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ನಗರದಲ್ಲಿ ಜಲಮಂಡಳಿ ವತಿಯಿಂದ ಕಾವೇರಿ 5ನೇ ಹಂತದ ಕಾಮಗಾರಿ ಪೂರ್ಣಗೊಂಡಿದೆ. ಬಹುತೇಕ ಕಡೆ ಕಾವೇರಿ ನೀರಿನ ಸಂಪರ್ಕ ನೀಡಲಾಗಿದೆ. ಆದ್ದರಿಂದ, ಪಾಲಿಕೆ ಸುಪರ್ದಿಯಲ್ಲಿರುವ ಕೊಳವೆಬಾವಿಗಳನ್ನು ಜಲಮಂಡಳಿಗೆ ಹಸ್ತಾಂತರಿಸಿ' ಎಂದು ಅಧಿಕಾರಿಗಳಿಗೆ ಆದೇಶಿಸಿದರು.

ಥಣಿಸಂದ್ರ ಹಾಗೂ ಹೆಗ್ಗಡೆ ನಗರಕ್ಕೆ ಫೆಬ್ರುವರಿ ಅಂತ್ಯದೊಳಗೆ ಕಾವೇರಿ ನೀರು ಸಂಪರ್ಕ ನೀಡಬೇಕು. ನಗರದ ಎಲ್ಲ ಪ್ರದೇಶಗಳಿಗೂ ವೇಳಾಪಟ್ಟಿ ಸಿದ್ಧಪಡಿಸಿ ಕಾವೇರಿ ನೀರು ಸಂಪರ್ಕ ಒದಗಿಸಿ, ನೀರು ಸರಬರಾಜು ಮಾಡಬೇಕು ಎಂದರು.

ನೋಟಿಸ್ ನೀಡಲು ಸೂಚನೆ: ಟೆಲಿಕಾಂ ಲೇಔಟ್ ಬಳಿ ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ಎಸೆಯುವುದನ್ನು ನಿಯಂತ್ರಿಸಬೇಕು ಎಂಬ ನಾಗರಿಕರ ಮನವಿಗೆ ಸ್ಪಂದಿಸಿದ ಗಿರಿನಾಥ್, 'ಖಾಲಿ ನಿವೇಶನಗಳ ಮಾಲೀಕರಿಗೆ ನೋಟಿಸ್ ನೀಡಿ ದಂಡ ವಿಧಿಸಿ' ಎಂದರು.

ದೊಡ್ಡಬೆಟ್ಟಹಳ್ಳಿ ವ್ಯಾಪ್ತಿಯಲ್ಲಿ ವಸತಿ ಯೋಜನೆಯಡಿ 30 ಮಂದಿಗೆ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ವಲಯ ಆಯುಕ್ತ ಕರೀಗೌಡ, ವಲಯ ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್, ಉಪ ಆಯುಕ್ತೆ ಮಮತಾ, ಮುಖ್ಯ ಎಂಜಿನಿಯರ್ ರಂಗನಾಥ್ ಇದ್ದರು.

ಕರಿಯಮ್ಮದೇವಿಯ ಅದ್ದೂರಿ ಜಾತ್ರೆ

ರಾಜರಾಜೇಶ್ವರಿನಗರ: ನಾಗದೇವನಹಳ್ಳಿಯಲ್ಲಿ ಕರಿಯಮ್ಮದೇವಿಯ ಜಾತ್ರಾ ಮಹೋತ್ಸವ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು.

ಎಲ್ಲೆಡೆ ವಿದ್ಯುತ್ ದೀಪಾಲಂಕಾರ, ಬಣ್ಣ ಬಣ್ಣದ ತೋರಣ ಹಾಕಲಾಗಿತ್ತು. ನಾಗದೇವನಹಳ್ಳಿ, ದೊಡ್ಡಗೊಲ್ಲರ ಹಟ್ಟಿ ಸೇರಿದಂತೆ ಸುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು.

ಭೂತಪ್ಪಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿವಿಧ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ನೆರೆದಿದ್ದ ಭಕ್ತರ ಜಯಘೋಷ ಮುಗಿಲು ಮುಟ್ಟಿತ್ತು. ಜನರು ರಸ್ತೆಯ ಬದಿಯಲ್ಲಿ ನಿಂತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿದರು.

ಶ್ರೀಕರಿಯಮ್ಮದೇವಿಯು, ನಾಗದೇವನಹಳ್ಳಿ ಶ್ರೀ ಭೂತಪ್ಪಸ್ವಾಮಿ ದೇವರ ಮುತ್ತಿನ ಪಲ್ಲಕ್ಕಿಯಲ್ಲಿ ವಿವಿಧ ದೇವರ ಉತ್ಸವ ನಡೆಯಿತು. ಪೂಜಾಕುಣಿತ, ಯಕ್ಷಗಾನ, ಚಂಡೆವಾದ್ಯ, ಗೊಂಬೆಕುಣಿತ, ಡೊಳ್ಳುಕುಣಿತ ಸೇರಿದಂತೆ ವಿವಿಧ ನೃತ್ಯಗಳು ಉತ್ಸವಕ್ಕೆ ವಿಶೇಷ ಮೆರುಗು ನೀಡಿದವು.

ಕರಪತ್ರ ಚಳವಳಿ: ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಕರಪತ್ರ ಚಳವಳಿಜಾಗೃತಿ ಅಭಿಯಾನಕ್ಕೆ ರಾಜ್ಯಘಟಕದ ಅಧ್ಯಕ್ಷ ಮುನಿಆಂಜಿನಪ್ಪ ಚಾಲನೆನೀಡಿ ಮಾತನಾಡಿದರು. ದಸಂಸ ಭೀಮಶಕ್ತಿ ರಾಜ್ಯಘಟಕದ ಅಧ್ಯಕ್ಷ ಹೆಬ್ಬಾಳ ವೆಂಕಟೇಶ್, ಮುಖಂಡರಾದ ಅಯೂಬ್‌ಖಾನ್, ವಸೀಂಬೇಗ್, ಕಾಂತರಾಜು, ಥಣಿಸಂದ್ರ ಚಂದ್ರು, ಎಂ.ಅಭಿಲಾಶ್, ಮುನಿಲಕ್ಷ್ಮಮ್ಮ ಇತರರು ಇದ್ದರು.

ಯಲಹಂಕ: 'ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಅಂಬೇಡ್ಕರ್ ಅವರ ಆಶಯಗಳನ್ನು ಯಥಾವತ್ತಾಗಿ ಜಾರಿಗೊಳಿಸದ್ದರಿಂದ ದೇಶದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಶೋಷಣೆಯಂತಹ ಗಂಭೀರ ಸಮಸ್ಯೆಗಳು ಇಂದಿಗೂ ಮುಂದುವರಿಯಲು ಕಾರಣವಾಗಿದೆ' ಎಂದು ಪ್ರಜಾವಿಮೋಚನಾ ಚಳವಳಿಯ (ಸ್ವಾಭಿಮಾನ) ರಾಜ್ಯಘಟಕದ ಅಧ್ಯಕ್ಷ ಮುನಿಆಂಜಿನಪ್ಪ ಆರೋಪಿಸಿದರು.

ಭಾರತ ಸಂವಿಧಾನದ ಅಮೃತಮಹೋತ್ಸವದ ನೆನಪಿಗಾಗಿ 'ದೇಶ ನಮ್ಮದು, ಸಂವಿಧಾನ ನಮ್ಮದು' ಘೋಷವಾಕ್ಯದಡಿಯಲ್ಲಿ ಆಯೋಜಿಸಿರುವ ಕರಪತ್ರ ಚಳವಳಿ-ಜಾಗೃತಿ ಅಭಿಯಾನಕ್ಕೆ ಉಪನಗರದ ಅಂಬೇಡ್ಕರ್ ಭವನದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

'ಎಲ್ಲ ರಾಜಕೀಯ ಪಕ್ಷಗಳ ನಾಯಕರು ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ, ಮತನೀಡಿದ ಜನತೆಗೆ ಸುಳ್ಳು ಆಶ್ವಾಸನೆಗಳನ್ನು ನೀಡುವ ಮೂಲಕ ಸ್ವಾರ್ಥ ರಾಜಕಾರಣ ಮಾಡುವುದನ್ನು ರೂಢಿಗತ ಮಾಡಿಕೊಂಡಿದ್ದಾರೆ' ಎಂದರು.

ದಲಿತ ಸಂಘರ್ಷ ಸಮಿತಿಯ ಭೀಮಶಕ್ತಿ ರಾಜ್ಯಘಟಕದ ಅಧ್ಯಕ್ಷ ಹೆಬ್ಬಾಳ ವೆಂಕಟೇಶ್ ಮಾತನಾಡಿದರು. ಪ್ರಜಾವಿಮೋಚನಾ ಚಳವಳಿಯ ಮುಖಂಡರಾದ ಅಯೂಬ್‌ಖಾನ್, ವಸೀಂಬೇಗ್, ಕಾಂತರಾಜು, ಥಣಿಸಂದ್ರ ಚಂದ್ರು, ಎಂ.ಅಭಿಲಾಶ್, ಮುನಿಲಕ್ಷ್ಮಮ್ಮ ಮತ್ತಿತರರು ಉಪಸ್ಥಿತರಿದ್ದರು.

ಸುಧಾ ಓದಿ

ಅಕ್ರಮ ಆಸ್ತಿ: ಬಿಲ್ ಕಲೆಕ್ಟರ್‌ಗೆ ಮೂರು ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹಲವು ಪಟ್ಟು ಹೆಚ್ಚು ಆಸ್ತಿ ಹೊಂದಿದ್ದ ಪ್ರಕರಣದಲ್ಲಿ ಚಿಕ್ಕಜಾಲ ಬಿಲ್ ಕಲೆಕ್ಟರ್ ಒಬ್ಬರಿಗೆ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯವು ಮೂರು ವರ್ಷ ಜೈಲು ಶಿಕ್ಷೆ ಮತ್ತು ₹50.20 ಲಕ್ಷ ದಂಡ ವಿಧಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚಿಕ್ಕಜಾಲದ ಬಿಲ್ ಕಲೆಕ್ಟರ್ ಕೃಷ್ಣಪ್ಪ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲಾ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಎಂ.ಜೆ. ದಯಾನಂದ್ ಅವರು ದೂರು ದಾಖಲಿಸಿಕೊಂಡಿದ್ದರು. ಲೋಕಾಯುಕ್ತ ಎಸ್‌ಪಿ ವಿಜಯ್ ಕುಮಾರ್ ಅವರ ತಂಡವು ಪ್ರಕರಣ ದಾಖಲಿಸಿಕೊಂಡು, ಶೋಧ ಕಾರ್ಯ ನಡೆಸಿತ್ತು.

ಶೋಧ ಕಾರ್ಯದ ವೇಳೆ ಕೃಷ್ಣಪ್ಪ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿತ್ತು. ಅವರ ಘೋಷಿತ ಆದಾಯಕ್ಕಿಂತ ಶೇಕಡ 400ರಷ್ಟು ಹೆಚ್ಚು ಆಸ್ತಿ ಇದ್ದು, ಈ ಸಂಬಂಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಕೃಷ್ಣಪ್ಪ ವಿರುದ್ಧದ ಆರೋಪಗಳು ವಿಚಾರಣೆಯ ವೇಳೆ ಸಾಬೀತಾದ ಕಾರಣ ನ್ಯಾಯಾಲಯವು ಅವರನ್ನು ದೋಷಿ ಎಂದು ತೀರ್ಪು ನೀಡಿತ್ತು. ಇದೇ 27ರಂದು ಶಿಕ್ಷೆ ಪ್ರಕಟಿಸಿದ್ದು, ಅವರಿಗೆ 3 ವರ್ಷಗಳ ಸಾದಾ ಜೈಲುವಾಸ ವಿಧಿಸಿದೆ. ಆದಾಯಕ್ಕಿಂತ ₹63.66 ಲಕ್ಷದಷ್ಟು ಹೆಚ್ಚು ಆಸ್ತಿ ಹೊಂದಿದ ಸಂಬಂಧ ₹50.20 ಲಕ್ಷ ದಂಡವನ್ನೂ ವಿಧಿಸಿದೆ. ದಂಡ ಕಟ್ಟದಿದ್ದಲ್ಲಿ ಹೆಚ್ಚುವರಿಯಾಗಿ ಅವರು 6 ತಿಂಗಳು ಜೈಲುಶಿಕ್ಷೆ ಅನುಭವಿಸಬೇಕಿದೆ.

ವರಿಷ್ಠರ ಭೇಟಿ ಶೀಘ್ರ: ಶ್ರೀರಾಮುಲು

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಕೇಂದ್ರದ ಪ್ರಮುಖ ನಾಯಕರು ಕರೆ ಮಾಡಿ ಮಾತನಾಡಿ, ದೆಹಲಿಗೆ ಬರಲು ತಿಳಿಸಿದ್ದಾರೆ. ಸಮಯ ನೋಡಿ, ದೆಹಲಿಗೆ ತೆರಳುವೆ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಮಂಗಳವಾರ ಹೇಳಿದರು.

'ನ್ಯಾಯಾಲಯದ ವಿಚಾರಣೆಯೊಂದಕ್ಕೆ ಬೆಂಗಳೂರಿಗೆ ತೆರಳಿದ್ದೆ. ಯಾವುದೇ ನಾಯಕರನ್ನು ಭೇಟಿ ಆಗಿಲ್ಲ. ಕೇಂದ್ರದ ನಾಯಕರು ನನ್ನೊಂದಿಗೆ ಮಾತನಾಡಿದ್ದು ನಿಜ. ಎಲ್ಲರೂ ನನ್ನೊಂದಿಗೆ ನಿಲ್ಲುವುದಾಗಿ ಹೇಳಿದ್ದಾರೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗ್ರೆಸ್ ನಾಯಕರ ಆಹ್ವಾನದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾನು ಪ್ರಾಮಾಣಿಕ ಆಗಿರುವ ಕಾರಣಕ್ಕೇ ಅವರು ನನ್ನನ್ನು ಪಕ್ಷಕ್ಕೆ ಆಹ್ವಾನಿಸಿದ್ದಾರೆ. ನನ್ನ ಬಗ್ಗೆ ಕಾಂಗ್ರೆಸ್‌ನ ಹಲವು ನಾಯಕರೂ ಸದಭಿಪ್ರಾಯ ನೀಡಿರುವುದು ಗೊತ್ತಾಗಿದೆ. ಆದರೆ, ಪಕ್ಷ ಬಿಡುವ ಆಲೋಚನೆ ಇಲ್ಲ' ಎಂದರು.

'ಕೂಡ್ಲಿಗಿಯಿಂದ ಸ್ಪರ್ಧಿಸಬಾರದು' ಎಂದು ಸ್ಥಳೀಯ ನಾಯಕರು ಹೇಳಿರುವ ಕುರಿತು ಮಾತನಾಡಿದ ಅವರು, 'ಬಳ್ಳಾರಿ ಗ್ರಾಮಾಂತರದ ಮತಗಳು ಧ್ರುವೀಕರಣಗೊಂಡಿವೆ. ಹೀಗಾಗಿ ನನಗೆ ಕೂಡ್ಲಿಗಿಯಿಂದ ಸ್ಪರ್ಧಿಸುವ ಇಚ್ಛೆಯಿದೆ. ಕೂಡ್ಲಿಗಿಯೂ ಅಖಂಡ ಬಳ್ಳಾರಿಯ ಭಾಗವಾಗಿದೆ. ನನ್ನ ಮೇಲಿನ ಪ್ರೀತಿಯಿಂದ ಕೆಲವರು ಗ್ರಾಮಾಂತರ ಕ್ಷೇತ್ರದಲ್ಲೇ ಸ್ಪರ್ಧಿಸುವಂತೆ ಆಗ್ರಹಿಸುತ್ತಿರಬಹುದು. ಆ ಆಗ್ರಹವನ್ನು ನಾನು ಗೌರವಿಸುವೆ' ಎಂದು ಅವರು ಹೇಳಿದರು.

'ಕಾಡಾನೆಗೆ ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡಿ'

ಚನ್ನಪಟ್ಟಣ: 'ಕಾಡಾನೆ ಹಾವಳಿ ಹೆಚ್ಚಳಕ್ಕೆ ಮಿತಿಮೀರಿದ ಆನೆ ಸಂತತಿಯೂ ಕಾರಣ. ಕಾಡಾನೆಗಳ ಸಂತಾನ ಶಕ್ತಿ ಹರಣ ಚಿಕಿತ್ಸೆ ನಡೆಸಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ, ರೈತರೊಂದಿಗೆ ನಡೆಸಿದ ಸಂವಾದದಲ್ಲಿ ಒತ್ತಾಯಿಸಲಾಯಿತು.

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಈಮೇಲ್: comp.secy@astrazeneca.com, ವೆಬ್: www.astrazeneca.com/india

ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಕಂಪನಿಯ, ಈ ಕೆಳಗೆ ತಿಳಿಸಿರುವ ಷೇರು ಸರ್ಟಿಫಿಕೇಟ್ ಕಳೆದುಹೋಗಿರುವುದರಿಂದ ಇನ್ವೆಸ್ಟರ್ ಎಜುಕೇಷನ್ ಮತ್ತು ಪ್ರೊಟೆಕ್ಷನ್ ಫಂಡ್ ಪ್ರಾಧಿಕಾರದಿಂದ ಷೇರುಗಳನ್ನು ಕ್ಲೇಮ್ ಮಾಡುವುದಕ್ಕಾಗಿ ಹಕ್ಕು ಪತ್ರವನ್ನು ನೀಡಿ ಎಂದು ಷೇರುದಾರರ ಕಾನೂನು ಪ್ರತಿನಿಧಿಯು ಅರ್ಹತಾ ಪ್ರಮಾಣಪತ್ರವನ್ನು ನೀಡುವಂತೆ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
K000812	25	14353	1921376 - 1921400	ಕರ್ತಾರ್ ಸಿಂಗ್ ಸಾಹ್ನಿ (ಮೃತ)
	20	39627	2870324 - 2870343	
	5	39628	2870344 - 2870348	

ಈ ಸೂಚನೆ ಪ್ರಕಟವಾದ ದಿನದಿಂದ 15 ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪ ಬರದಿದ್ದರೆ: ಕಂಪನಿಯು, ಇನ್ವೆಸ್ಟರ್ ಎಜುಕೇಷನ್ ಮತ್ತು ಪ್ರೊಟೆಕ್ಷನ್ ಫಂಡ್ ಪ್ರಾಧಿಕಾರದಿಂದ ಷೇರುಗಳನ್ನು ಕ್ಲೇಮ್ ಮಾಡುವುದಕ್ಕಾಗಿ ಸದರಿ ಹಕ್ಕುದಾರರಿಗೆ ಅರ್ಹತಾ ಪತ್ರವನ್ನು ನೀಡುವ ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 28.01.2025

ಮಾನಸ. ಆರ್
ಕಂಪನಿ ಸೆಕ್ರಟರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)ರವರ ಕಛೇರಿ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002

ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/ಪಿ–155/2024–25 ದಿನಾಂಕ: 24.01.2025

ಸಾರ್ವಜನಿಕ ಪ್ರಕಟಣೆ

2025-26ನೇ ಸಾಲಿನ ಉದ್ದಿಮೆ ಪರವಾನಿಗೆಯ ನವೀಕರಣ ಕುರಿತು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ 2025–26ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣ ಕಾರ್ಯವನ್ನು ಈ ಕೆಳಕಂಡಂತೆ ಹಮ್ಮಿಕೊಳ್ಳಲಾಗಿದೆ.

1. ಉದ್ದಿಮೆದಾರರ ಅನುಕೂಲಕ್ಕೆ ತಕ್ಕಂತೆ 1 ರಿಂದ 5 ಆರ್ಥಿಕ ವರ್ಷಗಳ ಅವಧಿಗೆ (ಏಪ್ರಿಲ್‌ನಿಂದ ಮಾರ್ಚ್) ನವೀಕರಣ ಮಾಡಲು ಅವಕಾಶಕಲ್ಪಿಸಿದೆ.
2. ನವೀಕರಣ ಶುಲ್ಕವನ್ನು ಉದ್ದಿಮೆದಾರರು ಕೋರುವ ಆರ್ಥಿಕ ವರ್ಷಕ್ಕೆ ಮಿತಿಗೊಳಿಸಿ ಪಾವತಿಸಿಕೊಳ್ಳುವುದು.
3. ಕಳೆದ ಸಾಲಿನಂತೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಆನ್‌ಲೈನ್ ಮುಖಾಂತರ ಹಾಗೂ ಬ್ಯಾಂಕ್ ಚಲನ್ ಮೂಲಕ ಕೆನರಾ ಬ್ಯಾಂಕಿನಲ್ಲಿ ಪಾವತಿಸುವುದು.
4. ದಿನಾಂಕ: 01.02.2025 ರಿಂದ 28.02.2025ರ ವರೆಗೆ ದಂಡವಿಲ್ಲದೇ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ.
5. ದಿನಾಂಕ: 01.03.2025 ರಿಂದ 31.03.2025ರ ವರೆಗೆ ಪರವಾನಿಗೆ ನವೀಕರಣ ಶುಲ್ಕದ ಶೇಕಡಾ 25% ರಷ್ಟು ದಂಡ ಮೊತ್ತದೊಂದಿಗೆ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ.
6. ದಿನಾಂಕ: 01.04.2025 ರಿಂದ ಪರವಾನಿಗೆ ಶುಲ್ಕದ ಶೇಕಡಾ 100% ರಷ್ಟು ದಂಡ ಮೊತ್ತದೊಂದಿಗೆ ಪರವಾನಿಗೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ.
7. ಪರವಾನಿಗೆ ನವೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರವೇ ಮಾಡಲು ಅವಕಾಶ ಕಲ್ಪಿಸಿದೆ.

ಹೆಚ್ಚಿನ ಮಾಹಿತಿಗಾಗಿ ಪಾಲಿಕೆ ವೆಬ್‌ಸೈಟ್ www.bbmp.gov.in ನಲ್ಲಿ ವಿವರ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



PARAS

ಬೆಂಗಳೂರು: ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ. • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು. • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3ನೇ ಹಂತ. • ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೇಗೂರ್ – ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್‌ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. ವಿದ್ಯಾರಣ್ಯಪುರ • ವಿಜ್ಞಾನನಗರ್ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ ಹಳ್ಳಿ, ವಿಜ್ಞಾನನಗರ್ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, ಕೆ ಆರ್ ಪುರಂ • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ : ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್ : ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ. • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ. ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.

ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ

SMART BAZAAR

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು 29 ಜನವರಿ 2025. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷನ್ಯಾಯವ್ಯಾಪ್ತಿಗೆಒಳಪಟ್ಟಿರುತ್ತವೆ.

ದಂಪತಿ ವಿರುದ್ಧ ಸಾರ್ವಜನಿಕರಿಗೆ ವಂಚನೆ ಆರೋಪ • 14 ದಿನ ನ್ಯಾಯಾಂಗ ಬಂಧನಕ್ಕೆ ಆರೋಪಿಗಳು

2 ವರ್ಷದಲ್ಲಿ ₹24 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ರೇಖಾ

ಮಂಜು ನಾಥಾಚಾರಿ

ಚೇತನ್

ಬೆಂಗಳೂರು: ಸಾರ್ವಜನಿಕರಿಗೆ ವಂಚಿಸಿದ ಆರೋಪದ ಮೇಲೆ ಬಂಧಿತರಾಗಿರುವ ರೇಖಾ ದಂಪತಿ ಎರಡು ವರ್ಷದಲ್ಲಿ ₹24 ಕೋಟಿ ಮೊತ್ತದ ವಹಿವಾಟು ನಡೆಸಿರುವುದು ಸಿಸಿಬಿ ಆರ್ಥಿಕ ಅಪರಾಧ ದಳದ ತನಿಖೆ ವೇಳೆ ಗೊತ್ತಾಗಿದೆ.

ಎಚ್‌ಡಿಎಫ್‌ಸಿ ಮತ್ತು ಬ್ಯಾಂಕ್ ಆಫ್ ಬರೋಡಾದಲ್ಲಿ ಎರಡು ಖಾತೆಗಳನ್ನು ಹೊಂದಿದ್ದು, ಇದರಲ್ಲಿ 2002ರಿಂದ 2024ರ ಅವಧಿಯಲ್ಲಿ ₹24 ಕೋಟಿ ವ್ಯವಹಾರ ನಡೆಸಿದ್ದಾರೆ. ಅಲ್ಲದೇ ಕರ್ನಾಟಕ ಬ್ಯಾಂಕ್ ಹಾಗೂ ಎಸ್‌ಬಿಐನಲ್ಲೂ ಖಾತೆ ಹೊಂದಿದ್ದು, ಹಣದ ವಹಿವಾಟುಗಳ ಕುರಿತು ತನಿಖೆ ಮುಂದುವರಿದಿದೆ ಎಂದು ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ರಿಯಲ್ ಎಸ್ಟೇಟ್ ಉದ್ಯಮಿ ನಿಸಾರ್ ಅಹ್ಮದ್ ಅವರಿಗೆ ₹6 ಕೋಟಿ ವಂಚಿಸಿದ ಆರೋಪದಡಿ ರೇಖಾ (38), ಆಕೆಯ ಪತಿ ಮಂಜುನಾಥಾಚಾರಿ (40) ಮತ್ತು ಸ್ನೇಹಿತ ಚೇತನ್ (35) ಅವರನ್ನು ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದರು.

'ಮೂವರೂ ಸೇರಿ ಉದ್ಯಮಿಗೆ ವಂಚಿಸಿರುವುದಾಗಿ ವಿಚಾರಣೆ ವೇಳೆ ರೇಖಾ ತಿಳಿಸಿದ್ದಾಳೆ. ಸಾಲ ಕೊಡಿಸುವುದಾಗಿ ಹಲವರಿಂದ ಲಕ್ಷಾಂತರ ರೂಪಾಯಿ ಪಡೆದು ಮೋಸ ಮಾಡಿರುವುದಲ್ಲದೇ, 'ಶೇರ್‌ಚಾಟ್' ಆ್ಯಪ್‌ನಲ್ಲಿ ವ್ಯಕ್ತಿಯೊಬ್ಬರಿಗೆ ವಿಡಿಯೊ ಕರೆ ಮಾಡಿ, ₹31 ಲಕ್ಷ ಪಡೆದು ವಂಚಿಸಿದ್ದಾಳೆ. ಅಲ್ಲದೇ ಈಕೆ ವಿರುದ್ಧ ಹಲವು ಚೆಕ್ ಬೌನ್ಸ್ ಪ್ರಕರಣಗಳು ದಾಖಲಾಗಿದ್ದು, ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿರುವುದು ತನಿಖೆ ವೇಳೆ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಕೋರ್ಟ್ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಿಬಿಐ ಅಧಿಕಾರಿ ಸೋಗಿನಲ್ಲಿ ಕರೆ: ₹7 ಲಕ್ಷ ವಂಚನೆ

ಬೆಂಗಳೂರು: ಸಿಬಿಐ ಅಧಿಕಾರಿ ಸೋಗಿನಲ್ಲಿ ಕರೆ ಮಾಡಿದ ವ್ಯಕ್ತಿಯೊಬ್ಬ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ವೃದ್ಧರೊಬ್ಬರಿಗೆ ₹6.98 ಲಕ್ಷ ವಂಚಿಸಿರುವ ಘಟನೆ ನಡೆದಿದೆ.

ಮತ್ತಿಕೆರೆ ನಿವಾಸಿ 73 ವರ್ಷದ ಡಾ.ಎ.ಬೋಸ್ ಅವರ ದೂರು ಆಧರಿಸಿ ನಗರ ಕೇಂದ್ರ ವಿಭಾಗದ ಸಿಇಎನ್ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಬೋಸ್ ಅವರಿಗೆ ಕರೆ ಮಾಡಿದ್ದ ಸೈಬರ್ ವಂಚಕರು ಮುಂಬೈ ಪೊಲೀಸರು ಎಂದು ಪರಿಚಯಿಸಿಕೊಂಡು, 'ನೀವು ಅಕ್ರಮವಾಗಿ ₹2 ಕೋಟಿ ವರ್ಗಾವಣೆ ಮಾಡಿದ್ದು, ಈ ಬಗ್ಗೆ ಮುಂಬೈನಲ್ಲಿ ನರೇಶ್ ಗೋಯಲ್ ಅವರ ಮನೆಯಲ್ಲಿ ನಿಮಗೆ ಸೇರಿದ ಕೆನರಾ ಬ್ಯಾಂಕ್ ಎಟಿಎಂ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ಗಳು ಸಿಕ್ಕಿವೆ. ಹೀಗಾಗಿ, ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡುತ್ತಿದ್ದೇವೆ' ಎಂದು ಅವರ ವಾಟ್ಸ್‌ಆ್ಯಪ್ ನಂಬರ್‌ಗೆ ಅರೆಸ್ಟ್ ವಾರಂಟ್ ಕಳುಹಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಕೆಲ ದಿನದ ಬಳಿಕ ಮತ್ತೆ ವಾಟ್ಸ್‌ಆ್ಯಪ್ ವಿಡಿಯೊ ಕರೆ ಮಾಡಿದ ವಂಚಕರು, 'ನಿಮ್ಮ ಬ್ಯಾಂಕ್ ಖಾತೆ ಹಾಗೂ ಆಸ್ತಿ ಜಪ್ತಿ ಮಾಡುವುದಾಗಿ ಬೆದರಿಸಿದ್ದಾರೆ. ನರೇಶ್ ಗೋಯಲ್ ಅವರನ್ನು ಇ.ಡಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದು, ಬಂಧಿಸದಿರಲು ಹಣಕ್ಕೆ ಬೇಡಿಕೆಯಿಟ್ಟು ವಿವಿಧ ಬ್ಯಾಂಕ್ ಖಾತೆಗಳ ಸಂಖ್ಯೆ ಕಳುಹಿಸಿದ್ದಾರೆ. ಆತಂಕಗೊಂಡ ಬೋಸ್, ಆರೋಪಿಯ ಸೂಚನೆಯಂತೆ ಗೂಗಲ್ ಪೇ ಸೇರಿ ಆನ್‌ಲೈನ್ ಮೂಲಕ ಹಂತ ಹಂತವಾಗಿ ₹6.98 ಲಕ್ಷ ವರ್ಗಾಯಿಸಿದ್ದಾರೆ' ಎಂದು ಹೇಳಿದರು.

ಬಾಡಿಗೆ ಕಾರು: ₹20 ಲಕ್ಷ ಕಳೆದುಕೊಂಡ ಮಹಿಳೆ

ಬೆಂಗಳೂರು: ಆನ್‌ಲೈನ್ ಮೂಲಕ ಬಾಡಿಗೆ ಕಾರು ಬುಕ್ ಮಾಡಿದ ಮಹಿಳೆಯೊಬ್ಬರಿಗೆ ಸೈಬರ್ ವಂಚಕರು ₹20 ಲಕ್ಷ ಹಣವನ್ನು ವಂಚಿಸಿದ್ದಾರೆ. ಇಂದಿರಾನಗರ ನಿವಾಸಿ ಕೆ. ಸುಮನಾ ಪ್ರಸಾದ್ ಅವರ ದೂರಿನ ಮೇರೆಗೆ ನಗರದ ಪೂರ್ವ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

'ಖಾಸಗಿ ಕಂಪನಿ ಉದ್ಯೋಗಿ ಸುಮನಾ ಅವರು ಕೆಲಸದ ನಿಮಿತ್ತ ಹೊರ ಹೋಗಲು ಜನವರಿ 23ರಂದು ಕಾರು ಬಾಡಿಗೆ ಪಡೆಯಲು ಗೂಗಲ್‌ನಲ್ಲಿ ಹುಡುಕಾಟ ನಡೆಸಿದ್ದರು. ಈ ವೇಳೆ ಸ್ಪೇನಿ ಕಾರ್ ಎಂಬ ವೆಬ್‌ಸೈಟ್‌ನಲ್ಲಿ ಕಾರು ಬುಕ್ ಮಾಡಿ ಕ್ಯೂಆರ್ ಕೋಡ್ ಮೂಲಕ ₹10 ಸಾವಿರ ಪಾವತಿಸಿದ್ದರು. ಬಳಿಕ ಬುಕಿಂಗ್ ರದ್ದು ಮಾಡಿದ್ದರು. ಕಸ್ಟಮರ್ ಕೇರ್ ನಂಬರ್ ಪಡೆದು ಹಣ ವಾಪಸ್ ನೀಡುವಂತೆ ಮನವಿ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಳಿಕ ವಂಚಕರು ವಾಟ್ಸ್‌ಆ್ಯಪ್ ಕರೆ ಮಾಡಿ, ಶೇರ್ ದಿ ಸ್ಕ್ರೀನ್ ಲಿಂಕ್ ಅನ್ನು ಕ್ಲಿಕ್ ಮಾಡಿ ನೀಡಲಾಗುವ ಸೂಚನೆ ಪಾಲಿಸುವಂತೆ ಹೇಳಿದ್ದರು. ದೂರುದಾರರಿಗೆ ಬ್ಯಾಂಕ್‌ಗೆ ಸಂಬಂಧಿಸಿದ ಕಸ್ಟಮರ್ ಐಡಿ ಕಳುಹಿಸಿದ್ದರು. ಐಡಿ ಶೇರ್ ಮಾಡುತ್ತಿದ್ದಂತೆ ದೂರುದಾರರ ಖಾತೆಯಲ್ಲಿದ್ದ ₹20 ಲಕ್ಷ ಹಣ ಲಪಟಾಯಿಸಿದ್ದಾರೆ' ಎಂದು ಹೇಳಿದರು.

ಸರ ಕಳ್ಳತನ: ಮಹಿಳೆ ಬಂಧನ

ಬೆಂಗಳೂರು: ಜನಸಂದಣಿ ಪ್ರದೇಶದಲ್ಲಿ ಮಹಿಳೆಯರ ಸರ ಕಸಿದು ಪರಾರಿ ಆಗುತ್ತಿದ್ದ ತಮಿಳುನಾಡಿನ ಮಹಿಳೆಯನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಈಳಬಾಕಂ ನಿವಾಸಿ ಸುಭದ್ರಾ (27) ಬಂಧಿತ ಮಹಿಳೆ.

ಆರೋಪಿಯಿಂದ ₹9 ಲಕ್ಷ ಮೌಲ್ಯದ 125 ಗ್ರಾಂ ತೂಕದ ಚಿನ್ನದ ಸರ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು. ಕೃತ್ಯದಲ್ಲಿ ಈಕೆಯೊಂದಿಗೆ ಶಾಮೀಲಾಗಿರುವ ವೃದ್ಧೆ ಸೇರಿದಂತೆ ನಾಲ್ವರು ಮಹಿಳೆಯರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಪೊಲೀಸರು ಶೋಧ ಮುಂದುವರೆಸಿದ್ದಾರೆ.

'ಆರೋಪಿಗಳು, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಜಾತ್ರೆ, ಉತ್ಸವ, ಸಮಾರಂಭಗಳಲ್ಲಿ ಜನಸಂದಣಿ ಇರುವ ಸ್ಥಳಕ್ಕೆ ತೆರಳುತ್ತಿದ್ದರು. ಜಾತ್ರೆಯಲ್ಲಿ ತೇರು ಎಳೆಯುವ ವೇಳೆ, ನೂಕುನುಗ್ಗಲಿನ ಸಂದರ್ಭದಲ್ಲಿ ಮಹಿಳೆಯರ ಚಿನ್ನದ ಸರವನ್ನು ಕೈಯಲ್ಲೇ ತುಂಡರಿಸಿ ಕ್ಷಣಮಾತ್ರದಲ್ಲಿ ಪರಾರಿ ಆಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು. ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಗತಿಪುರ ಬಡಾವಣೆಯಲ್ಲಿ ವಾಸವಿದ್ದ ಮಹಿಳೆಯೊಬ್ಬರು ಜ.13ರಂದು ಬನಶಂಕರಿ ದೇವಸ್ಥಾನ ದಲ್ಲಿ ದೇವರಿಗೆ ನಮಸ್ಕಾರ ಮಾಡಿ, ಎದ್ದು ನೋಡುವಷ್ಟರಲ್ಲಿ ಕತ್ತಿನಲ್ಲಿದ್ದ 70 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಅಪರಿಚಿತರು ಅಪಹರಣ ಮಾಡಿಕೊಂಡು ಹೋಗಿರುವುದು ಗಮನಕ್ಕೆ ಬಂದಿತ್ತು. ಅವರು ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

'ಕೃತ್ಯ ನಡೆದ ಸ್ಥಳದ ಆಸುಪಾಸಿನಲ್ಲಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಸುಭದ್ರಾಳ ಮುಖಚಹರೆ ಪತ್ತೆಯಾಗಿತ್ತು. ಕೂಡಲೇ ತಾಂತ್ರಿಕ ಸಾಕ್ಷ್ಯಗಳ ಆಧಾರದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಇರಾನಿ ಗ್ಯಾಂಗ್' ಬಂಧನ

ಬಂಧಿತರಿಂದ ₹28.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಅಬ್ಬಾಸ್ ಅಲಿ

ತಬ್ರೇಜ್ ಅಲಿ

ಅಲಿ ಸಿರಾಜ್

ಮಾದು ಶಾ

ಸಾದಿಕ್ ರಫೀಕ್ ಖಾನ್

ಅಭೂತರಾಬ್

ಅಪರಾಧ ಸುದ್ದಿ

ಬೆಂಗಳೂರು: ಮನೆಗಳಿಗೆ ನುಗ್ಗಿ ಚಿನ್ನಾಭರಣ, ನಗದು ಕಳ್ಳತನ ಹಾಗೂ ರಸ್ತೆಯಲ್ಲಿ ನಡೆದು ತೆರಳುವ ಮಹಿಳೆಯರ ಸರ ಕಸಿದು ಪರಾರಿ ಆಗುತ್ತಿದ್ದ 'ಇರಾನಿ ಗ್ಯಾಂಗ್'ನ ಆರು ಮಂದಿಯನ್ನು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತಬ್ರೇಜ್ ಅಲಿ, ಮಾದು ಶಾ, ಅಲಿ ಸಿರಾಜ್, ಸಾದಿಕ್ ರಫೀಕ್ ಖಾನ್, ಅಬ್ಬಾಸ್ ಅಲಿ, ಅಭೂತರಾಬ್ ಬಂಧಿತರು.

ಬಂಧಿತರಿಂದ ₹28.50 ಲಕ್ಷ ಮೌಲ್ಯದ 450 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕೊಡಿಗೇಹಳ್ಳಿ ಮುಖ್ಯರಸ್ತೆಯ ನಿವಾಸಿಯೊಬ್ಬರ ಮನೆಯ ಬಾಗಿಲು ಒಡೆದು 30 ಗ್ರಾಂ ಚಿನ್ನಾಭರಣ ಹಾಗೂ ದೇವರ ಮನೆಯಲ್ಲಿದ್ದ ಬೆಳ್ಳಿಯ ಎರಡು ದೀಪಗಳನ್ನು ಆರೋಪಿಗಳು ಕಳ್ಳತನ ಮಾಡಿದ್ದರು. ಸಹಕಾರ ನಗರದ ಮಹಿಳೆಯೊಬ್ಬರು ದೇವಸ್ಥಾನಕ್ಕೆ ತೆರಳಿ ಮನೆಗೆ ವಾಪಸ್ ಬರುತ್ತಿರುವಾಗ, ಅವರ ಮಾಂಗಲ್ಯದ ಸರವನ್ನು ಆರೋಪಿಗಳು ಕಸಿದು ಪರಾರಿ ಆಗಿದ್ದರು. ಎರಡೂ ಪ್ರಕರಣಗಳನ್ನು ದಾಖಲಿಸಿಕೊಂಡು ಪೊಲೀಸರು ಕಾರ್ಯಾಚರಣೆ ನಡೆಸಿದಾಗ 'ಇರಾನಿ ಗ್ಯಾಂಗ್' ಕೃತ್ಯ ಎಸಗಿರುವುದು ಬಯಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಕಾರ್ಯಾಚರಣೆ ವೇಳೆ ಕೋಲಾರದ ಚಿಂತಾಮಣಿ ವೃತ್ತದ ಬಳಿ ಒಬ್ಬ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಐವರ ಜತೆಗೆ ಸೇರಿಕೊಂಡು ಸರ ಹಾಗೂ ಮನೆ ಕಳ್ಳತನ ಮಾಡುತ್ತಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದ. ಆರೋಪಿ ನೀಡಿದ ಸುಳಿವು ಆಧರಿಸಿ ಮತ್ತೆ ಐವರನ್ನು ವಿವಿಧ ಸ್ಥಳಗಳಲ್ಲಿ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಆಂಧ್ರಪ್ರದೇಶದ ಅನ್ನಮಯಿ ಜಿಲ್ಲೆಯ ಕಲ್‌ಕಿರಿ ಮಂಡಲದಲ್ಲಿನ ಚಿನ್ನಾಭರಣ ಅಂಗಡಿಗೆ ಆರೋಪಿಗಳು ಮಾರಾಟ ಮಾಡಿದ್ದ 145 ಗ್ರಾಂ ಚಿನ್ನಾಭರಣ ಹಾಗೂ ಮದನಪಲ್ಲಿಯ ಚಿನ್ನಾಭರಣ ಅಂಗಡಿಗೆ ಮಾರಾಟ ಮಾಡಿದ್ದ 127 ಗ್ರಾಂ ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೇಶದ ವಿವಿಧ ಭಾಗಗಳಲ್ಲಿ 'ಇರಾನಿ ಗ್ಯಾಂಗ್' ಕಳ್ಳತನ ಪ್ರಕರಣಗಳಲ್ಲಿ ಸಕ್ರಿಯವಾಗಿದೆ. ಅದೇ ಗ್ಯಾಂಗ್‌ನಲ್ಲಿ ಬಂಧಿತರು ಗುರುತಿಸಿಕೊಂಡಿದ್ದರು. ಹಿಂದೂಪುರ, ಮದನಪಲ್ಲಿ, ಕಲ್‌ಕಿರಿಯಲ್ಲಿ ನೆಲಸಿದ್ದರು. ಅಲ್ಲಿಂದ ಬೈಕ್‌ನಲ್ಲಿ ನಗರಕ್ಕೆ ಬರುತ್ತಿದ್ದರು. ಎರಡರಿಂದ ಮೂರು ದಿನ ನಗರದಲ್ಲೇ ವಾಸ್ತವ್ಯ ಮಾಡುತ್ತಿದ್ದರು. ರಾತ್ರಿ ವೇಳೆ ಸರ ಹಾಗೂ ಮನೆ ಕಳ್ಳತನ ಮಾಡಿ ಆಂಧ್ರಪ್ರದೇಶಕ್ಕೆ ಪರಾರಿ ಆಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

₹56 ಲಕ್ಷ ಮೌಲ್ಯದ 60 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ಕಳ್ಳರ ವಿರುದ್ಧ ವಿವಿಧ ಠಾಣೆಗಳ ಪೊಲೀಸರು ಕಾರ್ಯಾಚರಣೆ ನಡೆಸಿ ₹56 ಲಕ್ಷ ಮೌಲ್ಯದ 60 ವಾಹನಗಳನ್ನು ಜಪ್ತಿ ಮಾಡಿದ್ದಾರೆ. ಕೃತ್ಯದಲ್ಲಿ ಭಾಗಿಯಾದ ಆರೋಪದಡಿ ಆರು ಮಂದಿಯನ್ನು ಬಂಧಿಸಿದ್ದಾರೆ.

ವರ್ತೂರು, ವಿಲ್ಸನ್ ಗಾರ್ಡನ್, ಯಲಹಂಕ, ಬಾಗಲಗುಂಟೆ, ಪುಟ್ಟೇನಹಳ್ಳಿ ಠಾಣಾ ವ್ಯಾಪ್ತಿಯ ಮನೆಗಳ ಎದುರು ಹಾಗೂ ರಸ್ತೆಗಳ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನ, ಆಟೊಗಳನ್ನು ಆರೋಪಿಗಳು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದರು. ವಾಹನ ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. 56 ದ್ವಿಚಕ್ರ ವಾಹನ, ನಾಲ್ಕು ಆಟೊ, ನಾಲ್ಕು ಬ್ಯಾಟರಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಫೈನಾನ್ಸ್ ಕಂಪನಿಗಳಿಂದ ಕಿರುಕುಳ: ದೂರು ಬಂದರೆ ಕ್ರಮ

ಪ್ರಜಾವಾಣಿ ವಾರ್ತೆ


ಬಿ.ದಯಾನಂದ್

ಬೆಂಗಳೂರು: 'ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಕಿರುಕುಳದ ಪ್ರಕರಣಗಳು ನಗರದಲ್ಲಿ ಇದುವರೆಗೂ ವರದಿಯಾಗಿಲ್ಲ. ಅಂತಹ ಪ್ರಕರಣಗಳು ವರದಿಯಾದರೆ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಕಿರುಕುಳದ ಪ್ರಕರಣಗಳು ರಾಜ್ಯದ ವಿವಿಧೆಡೆ ವರದಿಯಾಗಿವೆ. ಆದ್ದರಿಂದ ಕೆಲವು ಮಾರ್ಗಸೂಚಿ ಜಾರಿಗೊಳಿಸುವುದರ ಕುರಿತು ಸರ್ಕಾರದ ಮಟ್ಟದಲ್ಲಿ ಸಭೆಗಳು ನಡೆದಿವೆ. ಅವುಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ ಎಂದು ಹೇಳಿದರು.

ಮೈಕ್ರೊ ಫೈನಾನ್ಸ್ ಸಿಬ್ಬಂದಿ ಕಿರುಕುಳ ನೀಡಿದರೆ ತಕ್ಷಣ ಸಹಾಯವಾಣಿ ಸಂಖ್ಯೆ 112ಕ್ಕೆ ಕರೆ ಮಾಡಬಹುದು ಅಥವಾ ಸಮೀಪದ ಪೊಲೀಸ್ ಠಾಣೆಗೆ ದೂರು ನೀಡಿದರೆ ಕ್ರಮ ಕೈಗೊಳ್ಳುತ್ತಾರೆ ಎಂದರು.

ಮೀಟರ್ ಬಡ್ಡಿ ದಂಧೆಯ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಬುದ್ಧಿವಾದ ಹೇಳಿದ ಯುವಕರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತನ ಸಹೋದರನಿಗೆ ಬುದ್ಧಿವಾದ ಹೇಳಿದ ಯುವಕ ಹಾಗೂ ಆತನ ಜೊತೆಗಿದ್ದವರ ಮೇಲೆ ಹಲ್ಲೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಏಳು ಜನರ ವಿರುದ್ಧ ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಬುದ್ಧ ಅವರು ನೀಡಿದ ದೂರಿನ ಮೇರೆಗೆ ಅಪ್ಪು, ಮಂದ, ಮದನ್, ಸೂರ್ಯ, ಸಂದೀಪ್, ಮನೋಜ್ ಹಾಗೂ ವಿಶಾಲ್ ವಿರುದ್ಧ ಪ್ರಕರಣ ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳು ಜನವರಿ 26ರ ರಾತ್ರಿ ನಾಯಂಡಹಳ್ಳಿಯ ಸೊಲ್ಲಾಪುರದಮ್ಮ ದೇವಸ್ಥಾನದ ಬಳಿ ಪ್ರಬುದ್ಧ, ನಂದನ್, ಮನೋಜ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕಾರನ್ನು ಜಖಂಗೊಳಿಸಿ ಪರಾರಿಯಾಗಿದ್ದರು.

'ನಾಯಂಡಹಳ್ಳಿಯ ನಿವಾಸಿಯಾಗಿರುವ ಪ್ರಬುದ್ಧ, 'ನೀನು ನನ್ನ ಸ್ನೇಹಿತನ ಸಹೋದರ, ಅಪ್ಪು ಹಾಗೂ ಆತನ ಸಂಗಡಿಗರೊಂದಿಗೆ ಸೇರಬೇಡ' ಎಂದು ತನ್ನ ಸ್ನೇಹಿತನ ಸಹೋದರ ದರ್ಶನ್‌ಗೆ ಬುದ್ಧಿವಾದ ಹೇಳಿದ್ದ. ಈ ವಿಚಾರವನ್ನು ಅಪ್ಪು ಹಾಗೂ ಇತರೆ ಆರೋಪಿಗಳ ಬಳಿ ದರ್ಶನ್ ತಿಳಿಸಿದ್ದ. ಇದರಿಂದ ಸಿಟ್ಟಿಗೆದ್ದ ಆರೋಪಿಗಳು ನಂದನ್, ಮನೋಜ್ ಜತೆ ಕಾರಿನಲ್ಲಿ ಬರುತ್ತಿದ್ದ ಪ್ರಬುದ್ಧನನ್ನು ನಾಯಂಡಹಳ್ಳಿ ಬಳಿ ತಡೆದು, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಶ್ವೇತಾಗೌಡ ಪ್ರಕರಣ ಬಟ್ಟೆ ವ್ಯಾಪಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಹೆಸರು ಹೇಳಿಕೊಂಡು ಚಿನ್ನಾಭರಣ ಮಳಿಗೆ ಮಾಲೀಕರಿಗೆ ₹2.42 ಕೋಟಿ ವಂಚಿಸಿದ್ದ ಪ್ರಕರಣದ ಸಂಬಂಧ ಮತ್ತೊಬ್ಬ ಆರೋಪಿಯನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೋಹನ್ ಲಾಲ್ ಬಂಧಿತ ಆರೋಪಿ.

ನಗರದಲ್ಲಿ ಆರೋಪಿ ಬಟ್ಟೆ ವ್ಯಾಪಾರ ನಡೆಸುತ್ತಿದ್ದ ಎಂದು ಪೊಲೀಸರು ತಿಳಿಸಿದರು.

'ಆರೋಪಿಯನ್ನು ರಾಜಸ್ಥಾನದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಆರೋಪಿ ಮೋಹನ್ ಲಾಲ್‌ಗೆ ಶ್ವೇತಾಗೌಡ 1 ಕೆ.ಜಿ. 800 ಗ್ರಾಂ ಚಿನ್ನಾಭರಣ ಕೊಟ್ಟಿದ್ದಳು. ಪ್ರಕರಣ ದಾಖಲಾಗುತ್ತಿದ್ದಂತೆಯೇ ಆರೋಪಿ ಹೊರ ರಾಜ್ಯಕ್ಕೆ ಪರಾರಿ ಆಗಿದ್ದ. ರಾಜಸ್ಥಾನಕ್ಕೆ ತೆರಳಿದ್ದ ಪ್ರತ್ಯೇಕ ತಂಡವು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ' ಎಂದು ಪೊಲೀಸರು ಹೇಳಿದರು.

ಏಳು ರೌಡಿಗಳ ವಿರುದ್ಧ ಕ್ರಮ

ಬೆಂಗಳೂರು: ಪೂರ್ವ, ಈಶಾನ್ಯ, ಆಗ್ನೇಯ ಹಾಗೂ ವೈಟ್‌ಫೀಲ್ಡ್ ವಿಭಾಗದ 75 ರೌಡಿಗಳ ಮನೆಗಳ ಮೇಲೆ ಸಿಸಿಬಿಯ ಸಂಘಟಿತ ಅಪರಾಧ ದಳದ ಪೊಲೀಸರು ದಾಳಿ ನಡೆಸಿ, ಶೋಧಿಸಿದ್ದಾರೆ.

15 ದಿನಗಳಿಂದ ಈ ಕಾರ್ಯಾಚರಣೆ ನಡೆಯುತ್ತಿದೆ. ಗಡೀಪಾರು ಆದೇಶ ಉಲ್ಲಂಘಿಸಿ ನಗರದ ತಮ್ಮ ಮನೆಯಲ್ಲೇ ಏಳು ರೌಡಿಗಳು ವಾಸ ಮಾಡುತ್ತಿರುವುದು ಕಾರ್ಯಾಚರಣೆಯಲ್ಲಿ ಪತ್ತೆ ಆಯಿತು. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕೆಲವು ರೌಡಿಗಳನ್ನು ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಗೆ ಗಡೀಪಾರು ಮಾಡಿ ಆದೇಶ ಹೊರಡಿಸಲಾಗಿ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನೃತ್ಯ ಭಂಗಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಣರಾಜ್ಯೋತ್ಸವ ದಿನದ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಈಚೆಗೆ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಂಜುಳಾ ಪರಮೇಶ್ ಮತ್ತು ತಂಡದವರು ನೃತ್ಯ ಪ್ರದರ್ಶನ ನೀಡಿದರು ಚಿತ್ರ: ಎಂ.ಎಸ್. ಮಂಜುನಾಥ್

ಮೈಸೂರು ರೇಸ್

'ಎಕ್ಸುಬೆರೆನ್ಸ್' ಗೆಲ್ಲುವ ನಿರೀಕ್ಷೆ

ಅಂದೋಲನ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಕ್ಸುಬೆರೆನ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪಾರ್ಕ್ ವೆಸ್ಟ್ 1, ಸೆಲ್ಮಾ 5, ಏರಿಯನ್ 3
2ನೇ ರೇಸ್: ಆರಿಲ್ 1, ಟೆಂಡು 3
3ನೇ ರೇಸ್: ಫೆಲಿಸಿಟ 1, ಕಂಟ್ರೆಸ್ ವರ್ಸ್ 3, ಡಿ ಫೈಟರ್ 2
4ನೇ ರೇಸ್: ಎಕ್ಸುಬೆರೆನ್ಸ್ 4, ಡಿ ಗೋಲ್ಡ್ ಸ್ಟಾರ್ 3, ಕಾಂಟ್ರಿಬ್ಯೂಟರ್ 6
5ನೇ ರೇಸ್: ಈಗಲ್ ಬ್ಲಫ್ 1, ಡಿ ಗೋಲ್ಡನ್ ಕಪ್ 8, ಇನ್‌ಎಫಬಲ್ 5
6ನೇ ರೇಸ್: ಟಾರೆಕ್ 8, ತಲ್ವೆವಾ 4, ಸರ್ ಕ್ಯಾಲ್‌ಕ್ಯುಲಸ್ 1

ಉತ್ತಮ ಬೆಟ್: ಪಾರ್ಕ್ ವೆಸ್ಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

'ಭಾವ್ 2025': ಸಾಧಕರಿಗೆ ಕಲಾ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಸಂಸ್ಕೃತಿ, ಧರ್ಮ ಅಥವಾ ನಾಗರಿಕತೆ ಮಾಯವಾದರೆ ಈ ಜಗತ್ತು ಬಡವಾಗುತ್ತದೆ. ಪ್ರತಿಯೊಂದು ಸಂಸ್ಕೃತಿಯೂ ಜಗತ್ತಿನ ಪರಂಪರೆಯ ಒಂದು ಭಾಗವಾಗಿರುವ ಕಾರಣ ಎಲ್ಲಾ ಸಂಸ್ಕೃತಿಯನ್ನು ಸಂರಕ್ಷಿಸಿ, ಉಳಿಸಬೇಕು' ಎಂದು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಹೇಳಿದರು.

ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಆಯೋಜಿಸಿದ್ದ 'ಭಾವ್ 2025' ರಲ್ಲಿ ಪಾಲ್ಗೊಂಡು ಮಾತನಾಡಿದರು.

ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಮಾತನಾಡಿ, 'ಪ್ರಯಾಗ್‌ರಾಜ್‌ನ ಮಹಾಕುಂಭದಲ್ಲಿ ಎಲ್ಲಾ ಜಾತಿಗಳ ಜನರು, ವಿವಿಧ ದೈವಗಳನ್ನು ಪ್ರಾರ್ಥಿಸುವವರು ಒಂದಾಗಿ ಸೇರಿದ್ದಾರೆ. ಅದು ಧಾರ್ಮಿಕ ಕುಂಭವಾಗಿದ್ದರೆ, ಇಲ್ಲಿ ಭಾವ್ 2025ರ ಹೆಸರಿನಲ್ಲಿ ಕಲಾವಿದರ, ಕಲಾ ಸಾಧಕರ ಕುಂಭ ನಡೆಯುತ್ತಿದೆ' ಎಂದರು.

ಕಾರ್ಯಕ್ರಮದಲ್ಲಿ ವರ್ಲ್ಡ್ ಫೋರಂ ಫಾರ್ ಆರ್ಟ್ಸ್ ಆ್ಯಂಡ್ ಕಲ್ಚರ್ಸ್‌ನ (ಡಬ್ಲ್ಯುಎಫ್ ಎಸಿಯ) ನಿರ್ದೇಶಕಿ ಶ್ರೀವಿದ್ಯಾ ವರ್ಚಸ್ವಿ, ಮಂಜಮ್ಮ ಜೋಗತಿ, ಓಂ ಪ್ರಕಾಶ್ ಶರ್ಮಾ, ಉಮಾ ಮಹೇಶ್ವರಿ, ಆಂಧ್ರದ ಹರಿಕಥಾ ದಿಗ್ಗಜ ಚಿತ್ರವೀಣಾ ಎನ್.ರವಿಕಿರಣ್ ಹಾಜರಿದ್ದರು.

ಜೀವಮಾನ ಸಾಧನೆಗಾಗಿ 94ರ ಹರೆಯದ ವೀಣಾ ವಿದ್ವಾನ್ ಆರ್. ವಿಶ್ವೇಶ್ವರನ್, ಮೃದಂಗ ವಿದ್ವಾನ್ ಎ.ಆನಂದ್, ಯಕ್ಷಗಾನ ಕಲಾವಿದರಾದ ಬನ್ನಂಜೆ ಸುವರ್ಣ, ಗಾಯಕ ಅತುಲ್ ಪುರೋಹಿತ್ ಹಾಗೂ ಇತರೆ ಸಾಧಕರಿಗೆ 2025ನೇ ಸಾಲಿನ ಕಲಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ಸೀತಾಚರಿತಂ' ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚಿನ ಕಲಾವಿದರು, 30 ನೃತ್ಯ ಹಾಗೂ ಸಂಗೀತ ಪ್ರಕಾರಗಳು, ನೇರ ಕಲಾ ಪ್ರದರ್ಶನದ ಮೂಲಕ ಜಗತ್ತಿನ 180 ರಾಷ್ಟ್ರಗಳಲ್ಲಿ ಪ್ರಸಾರವಾದವು. ದೇಶದ ಶ್ರೀಮಂತ ಸಾಂಸ್ಕೃತಿಕ ವೈಭವವನ್ನು ಅನಾವರಣಗೊಳಿಸಲು ಆಯೋಜಿಸಲಾಗಿದ್ದ ಭಾವ್ 2025ರಲ್ಲಿ ವೈವಿಧ್ಯಮಯ ಪ್ರದರ್ಶನ ಗಮನ ಸೆಳೆಯಿತು.

ಪಶ್ಚಿಮ ಬಂಗಾಳದ ಲಿಂಗತ್ವ ಅಲ್ಪಸಂಖ್ಯಾತ ಕಲಾವಿದರ ತಂಡವು ಪ್ರದರ್ಶಿಸಿದ ಸಪ್ತಮಾತೃಕೆಯರ ನೃತ್ಯ ಮತ್ತು ಆರ್ಟ್ ಆಫ್ ಲಿವಿಂಗ್‌ನ 'ಔಟ್ ಆಫ್ ಬಾಕ್ಸ್' ಮ್ಯೂಸಿಕ್ ಬ್ಯಾಂಡ್ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು.

ಖಾಲಿ ಪಾತ್ರೆ, ತಟ್ಟೆ ಹಿಡಿದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ನಡೆಯುತ್ತಿರುವ ರ‍್ಯಾಪಿಡೊ, ಓಲಾ, ಉಬರ್ (ಬೈಕ್–ಟ್ಯಾಕ್ಸಿ) ಹಾಗೂ ಗೂಡ್ಸ್ (ಪೋರ್ಟರ್) ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ, ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್ ಹಾಗೂ 'ಸ್ನೇಹಜೀವಿ' ಚಾಲಕರ ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಈಚೆಗೆ ಪ್ರತಿಭಟನೆ ನಡೆಸಿದರು. ಖಾಲಿ ಪಾತ್ರೆ ಹಾಗೂ ತಟ್ಟೆ ಹಿಡಿದು ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು.

ಕಪ್ಪುಪಟ್ಟಿ ಧರಿಸಿ ಘೋಷಣೆ ಕೂಗಿದರು.

ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಯೂನಿಯನ್ ಅಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ ಮಾತನಾಡಿ, 'ಸಮಸ್ಯೆ ಬಗೆಹರಿಸುವಂತೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಸ್ಪಂದನ ಸಿಕ್ಕಿಲ್ಲ. ಸಾರಿಗೆ ಇಲಾಖೆ ಅಧಿಕಾರಿಗಳೇ ಕಾನೂನುಬಾಹಿರ ಸಂಸ್ಥೆಗಳ ಪೋಷಕರಾಗಿದ್ದಾರೆ' ಎಂದು ಆಪಾದಿಸಿದರು.

'ಸರ್ಕಾರದ ಧೋರಣೆಯಿಂದ ಚಾಲಕರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ದರ ತಾರತಮ್ಯ ಮಾಡುತ್ತಿರುವ ಓಲಾ, ಉಬರ್‌ಗೆ ಕೇಂದ್ರ ಸರ್ಕಾರ ಈಗಾಗಲೇ ನೋಟಿಸ್ ನೀಡಿ ಸ್ಪಷ್ಟನೆ ಕೇಳಿದೆ. ಚಾಲಕರ ಸಮಸ್ಯೆಗಳಿಗೆ ರಾಜ್ಯ ಸರ್ಕಾರವೂ ಕೂಡ ನೇರ ಹೊಣೆ. ಬೇಡಿಕೆ ಈಡೇರದಿದ್ದರೆ ಹೋರಾಟ ತೀವ್ರಗೊಳಿಸುತ್ತೇವೆ' ಎಂದು ಎಚ್ಚರಿಸಿದರು.

ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ರಾಜ್ಯ ಅಧ್ಯಕ್ಷ ಸಂತೋಷ್ ಕುಮಾರ್, ಕಾನೂನು ಬಾಹಿರ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಉನ್ನತಮಟ್ಟದ ಸಭೆ ಕರೆದು ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕೊಬ್ಬರಿ ಕಳವು

ತಿಪಟೂರು: ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಸೋಮವಾರ ರಾತ್ರಿ ಲಕ್ಷಾಂತರ ಮೌಲ್ಯದ ಸುಮಾರು 3,635 ಕೆ.ಜಿ ಕೊಬ್ಬರಿ ಕಳ್ಳತನವಾಗಿದೆ.

ಬಿಎಂಎಸ್ ಟ್ರಸ್ಟ್‌ಗೆ ನೋಟಿಸ್

ಬೆಂಗಳೂರು: ಕಾರಂಜಿ ಆಂಜನೇಯ ದೇವಸ್ಥಾನಕ್ಕೆ ಸೇರಿದ 35,000 ಚದರ ಅಡಿ ಜಾಗವನ್ನು ತೆರವು ಮಾಡುವಂತೆ ಮುಜರಾಯಿ ಇಲಾಖೆ ಬಿಎಂಎಸ್ ಶಿಕ್ಷಣ ಟ್ರಸ್ಟ್‌ಗೆ ನೋಟಿಸ್ ನೀಡಿದೆ.

ಈ ಭೂಮಿಯನ್ನು ಟ್ರಸ್ಟ್‌ಗೆ 30 ವರ್ಷಗಳ ಗುತ್ತಿಗೆಗೆ ನೀಡಲಾಗಿತ್ತು. ಅವಧಿ ಮುಗಿದಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ಇಲಾಖೆ ನೋಟಿಸ್ ಜಾರಿ ಮಾಡಿದೆ.

ಟ್ರಸ್ಟ್ ಒಪ್ಪಂದವನ್ನು ನವೀಕರಿಸಲು ಬಯಸಿದರೆ ತಿಂಗಳಿಗೆ ₹67 ಲಕ್ಷ ಬಾಡಿಗೆ ನೀಡಬೇಕಿದೆ. ಹಿಂದಿನ ಒಪ್ಪಂದದ ಪ್ರಕಾರ ಟ್ರಸ್ಟ್ ತಿಂಗಳಿಗೆ ₹1000 ಪಾವತಿಸುತ್ತಿತ್ತು.

ಒಪ್ಪಂದ ಮುಗಿದ ಭೂಮಿಯ ಜತೆಗೆ ದೇವಸ್ಥಾನಕ್ಕೆ ಸೇರಿದ ಹೆಚ್ಚುವರಿ 10 ಸಾವಿರ ಚದರ ಅಡಿ ಭೂಮಿಯನ್ನು ಟ್ರಸ್ಟ್ ಅತಿಕ್ರಮಿಸಿಕೊಂಡಿದೆ ಎಂದು ನೋಟಿಸ್‌ನಲ್ಲಿ ವಿವರಿಸಲಾಗಿದೆ.

ಮೈಕ್ರೊ ಫೈನಾನ್ಸ್: ಮಹಿಳೆಗೆ ವಂಚಿಸಿದ ಆರೋಪಿ ಬಂಧನ

ಚಿಕ್ಕಮಗಳೂರು: ಮೈಕ್ರೊ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ಎಂದು ಹೇಳಿ ಮಹಿಳೆಗೆ ವಂಚಿಸಿದ ಆರೋಪದಲ್ಲಿ ಮೂವರ ವಿರುದ್ಧ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ಒಬ್ಬನನ್ನು ಬಂಧಿಸಿದ್ದಾರೆ.

ಇಕ್ವಿಟಾಸ್ ಫೈನಾನ್ಸ್ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದ ಸಂತೋಷ್ ಆಲ್ದೂರು ಬಂಧಿತ ಆರೋಪಿ. ಹಳೆಯ ಸಾಲ ತೀರಿಸಿದರೆ ₹10 ಲಕ್ಷ ಸಾಲ ಸಿಗಲಿದೆ ಎಂದು ಮಂಜುಳಾ ಎಂಬ ಮಹಿಳೆಯನ್ನು ನಂಬಿಸಿದ್ದಾರೆ.

ಬ್ಯಾಂಕ್‌ನಲ್ಲಿ ಸಾಲ ತೆಗೆದು ಮಹಿಳೆ ಅವರಿಗೆ ಕೊಟ್ಟಿದ್ದು, ಅದನ್ನು ಫೈನಾನ್ಸ್‌ಗೆ ಕಟ್ಟದೆ ಸಂತೋಷ್ ವಂಚಿಸಿದ್ದಾನೆ ಎಂದು ಮಂಜುಳಾ ದೂರು ನೀಡಿದ್ದಾರೆ. ಮತ್ತಿಬ್ಬರು ಆರೋಪಿಗಳಾದ ಆಶಾರಾಣಿ ಹಾಗೂ ಜಾನ್ ಎಂಬುವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಿವಂಗತ ಡಿ.ವಿ.ಸುಧೀಂದ್ರ ಅವರು ಸ್ಥಾಪಿಸಿದ್ದ ಸಂಸ್ಥೆ

ಶ್ರೀರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗದ ಪಿಆರ್‌ಒ ಆಗಿದ್ದ ದಿವಂಗತ ಡಿ.ವಿ. ಸುಧೀಂದ್ರ ಅವರು ಸ್ಥಾಪಿಸಿದ್ದ ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ 49ನೇ ವಾರ್ಷಿಕೋತ್ಸವ ಹಾಗೂ 24ನೇ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಇತ್ತೀಚೆಗೆ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, 'ಸಿನಿಮಾ ಪಿಆರ್‌ಒಗಳನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ನಿರ್ದೇಶಕರನ್ನಾಗಿಸಲು ಮತ್ತು ಸರ್ಕಾರದ ಸಿನಿಮಾ ಪ್ರಶಸ್ತಿಗೆ ಪರಿಗಣಿಸುವ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಲಾಗುವುದು' ಎಂದು ಭರವಸೆ ನೀಡಿದರು.

ನಿರ್ಮಾಪಕರಾದ ಮೀನಾಕ್ಷಿ ಕೆ.ವಿ. ಜಯರಾಂ ಹಾಗೂ ಪತ್ರಕರ್ತ ಕೆ.ಜೆ.ಕುಮಾರ್ ಅವರು 'ಶ್ರೀ ರಾಘವೇಂದ್ರ ಚಿತ್ರವಾಣಿ' ಪ್ರಶಸ್ತಿಗೆ ಭಾಜನರಾದರು. ಗಾಯಕಿ ಅನುರಾಧಾ ಭಟ್ ಅವರಿಗೆ 'ಡಾ.ರಾಜ್‌ಕುಮಾರ್ ಪ್ರಶಸ್ತಿ', ಓಂಪ್ರಕಾಶ್ ರಾವ್ ಅವರಿಗೆ 'ಆರ್.ಶೇಷಾದ್ರಿ ಸ್ಮರಣಾರ್ಥ ಪ್ರಶಸ್ತಿ', ನಟ ರೇಖಾರಾವ್ ಅವರಿಗೆ 'ಡಾ.ಜಯಮಾಲ ಎಚ್.ಎಂ.ರಾಮಚಂದ್ರ ಪ್ರಶಸ್ತಿ', 'ಕೃಷ್ಣಂ ಪ್ರಣಯ ಸಖಿ' ಚಿತ್ರದ ಸಂಗೀತ ನಿರ್ದೇಶನಕ್ಕಾಗಿ ಅರ್ಜುನ್ ಜನ್ಯ ಅವರಿಗೆ 'ಎಂ.ಎಸ್. ರಾಮಯ್ಯ ಮೀಡಿಯಾ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಪ್ರೈ.ಲಿ. ಪ್ರಶಸ್ತಿ', 'ಶಿವಮ್ಮ' ಚಿತ್ರದ ಕಥಾಲೇಖನಕ್ಕಾಗಿ ಜೈಶಂಕರ್ ಆರ್ಯರ್ ಅವರಿಗೆ 'ಕೆ.ವಿ. ಜಯರಾಂ ಪ್ರಶಸ್ತಿ', 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರದ ಸಂಭಾಷಣೆಗಾಗಿ ಚಂದ್ರಜಿತ್ ಬೆಳ್ಳಪ್ಪ ಅವರಿಗೆ 'ಹುಣಸೂರು ಕೃಷ್ಣಮೂರ್ತಿ ಸ್ಮರಣಾರ್ಥ ಪ್ರಶಸ್ತಿ', 'ಫೋಟೋ' ಚಿತ್ರದ ನಿರ್ದೇಶನಕ್ಕಾಗಿ ಉತ್ಸವ್ ಗೋನವಾರ ಅವರಿಗೆ 'ಬಿ. ಸುರೇಶ ಪ್ರಶಸ್ತಿ', 'ಕೃಷ್ಣಂ ಪ್ರಣಯ ಸಖಿ' ಚಿತ್ರದ 'ದ್ವಾಪರ' ಹಾಡಿನ ಗೀತರಚನೆಗಾಗಿ ವಿ.ನಾಗೇಂದ್ರ ಪ್ರಸಾದ್ ಅವರಿಗೆ 'ಪಿ.ಜಿ. ಶ್ರೀನಿವಾಸಮೂರ್ತಿ ಸ್ಮರಣಾರ್ಥ ಪ್ರಶಸ್ತಿ' ನೀಡಿ ಗೌರವಿಸಲಾಯಿತು. 'ಗೌರಿ' ಚಿತ್ರದಲ್ಲಿನ ನಟನೆಗಾಗಿ ಸಮರ್ಜಿತ್ ಲಂಕೇಶ್ ಅವರು 'ಶ್ರೀ ರಾಘವೇಂದ್ರ ಚಿತ್ರವಾಣಿ ವಿಶೇಷ ಪ್ರಶಸ್ತಿ'ಗೆ ಭಾಜನರಾದರು.

'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರದ ಸಂಭಾಷಣೆಗಾಗಿ ನಿರ್ದೇಶಕ ಚಂದ್ರಜಿತ್ ಬೆಳ್ಳಪ್ಪ ಅವರಿಗೆ 'ಹುಣಸೂರು ಕೃಷ್ಣಮೂರ್ತಿ ಸ್ಮರಣಾರ್ಥ ಪ್ರಶಸ್ತಿ' ನೀಡಿ ಗೌರವಿಸಲಾಯಿತು

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ. ನರಸಿಂಹಲು, ಕನ್ನಡ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಪತ್ರಕರ್ತೆ ವಿಜಯಮ್ಮ, ನಿರ್ದೇಶಕ ಇಂದ್ರಜಿತ್ ಲಂಕೇಶ್, ಪತ್ರಕರ್ತ ಸದಾಶಿವ ಶೆಣೈ, ನಟಿ ರಾಗಿಣಿ ದ್ವಿವೇದಿ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

₹665 ಕೋಟಿ ವಂಚಿಸಿದ ಆರೋಪ: ನ್ಯಾಯಾಂಗ ಬಂಧನದಲ್ಲಿರುವ ಕಂಪನಿಯ ಮಾಜಿ ನಿರ್ದೇಶಕರು

ಜಿಎಸ್‌ಟಿ ವಂಚನೆ: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಕಾಬಿಟ್ಟಿಯಾಗಿ ಹಲವು ಕಂಪನಿಗಳನ್ನು ಆರಂಭಿಸಿ, ಅವುಗಳ ಮೂಲಕ ಅವ್ಯವಹಾರ ನಡೆಸಿ ಕೇಂದ್ರಕ್ಕೆ ₹665 ಕೋಟಿ ತೆರಿಗೆ ವಂಚಿಸಿದ್ದಾರೆ' ಎಂಬ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಮುಂಬೈನ, 'ಝುಕ್ರೋಮ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್ ಕಂಪನಿ'ಯ ಮಾಜಿ ನಿರ್ದೇಶಕಿ ರಿತು ನಿತಿನ್ ಮಿನೋಚಾ ಅವರಿಗೆ ಹೈಕೋರ್ಟ್, ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ರಿತು ನಿತಿನ್ ಮಿನೋಚಾ ಕೋಂ ನಿತಿನ್ ಕೃಷ್ಣಲಾಲ್ ಮಿನೋಚಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರನ್ನು ಕೂಡಲೇ ಬಿಡುಗಡೆ ಮಾಡಿ' ಎಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ಅರ್ಜಿದಾರರಿಗೆ ಮುಂಚಿತವಾಗಿ ಸಮನ್ಸ್ ಜಾರಿಗೊಳಿಸದೆ, 36 ಗಂಟೆ ಮನೆಯಲ್ಲಿ ಶೋಧ ಕಾರ್ಯ ನಡೆಸಲಾಗಿದೆ. ರಿತು ಅವರು ಇಂತಹುದೇ ಅಪರಾಧಗಳನ್ನು ಮಾಡಿದ್ದಾರೆ ಎಂಬುದನ್ನು ತೋರಿಸುವಂತಹ ಯಾವುದೇ ದಾಖಲೆಯನ್ನು ಅಧಿಕಾರಿಗಳು ಹಾಜರುಪಡಿಸಿಲ್ಲ. ಮಧ್ಯಂತರ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

ಡಿಜಿಜಿಐ ಪರ ವಾದಿಸಿದ ಮಧು ಎನ್.ರಾವ್, 'ಈ ಪ್ರಕರಣವು ಶೇರು ಮಾರುಕಟ್ಟೆಯ ಬಹುದೊಡ್ಡ ಹಗರಣಕ್ಕೆ ನಾಂದಿ ಹಾಡಿದೆ. ಆದ್ದರಿಂದ, ಆರೋಪಿಗೆ ಜಾಮೀನು ಮಂಜೂರು ಮಾಡಬಾರದು' ಎಂದು ಕೋರಿದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಮನು ಪ್ರಭಾಕರ ಕುಲಕರ್ಣಿ ವಕಾಲತ್ತು ವಹಿಸಿದ್ದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಆರೋಪಿ ಅರ್ಜಿದಾರರು ಮುಂದಿನ ವಿಚಾರಣೆವರೆಗೂ ಬೆಂಗಳೂರು ಮಹಾನಗರವನ್ನು ಬಿಟ್ಟು ಹೊರಗೆ ಹೋಗುವಂತಿಲ್ಲ' ಎಂಬುದೂ ಸೇರಿದಂತೆ ಸಾಂಪ್ರದಾಯಿಕ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿ ಆದೇಶಿಸಿತು.

ಮುಖ್ಯಾಂಶಗಳು

- ಷೇರು ಮಾರುಕಟ್ಟೆಯ ಬಹುದೊಡ್ಡ ಹಗರಣಕ್ಕೆ ನಾಂದಿ–ಡಿಜಿಜಿಐ
- ಫೆಬ್ರುವರಿ 3ಕ್ಕೆ ವಿಚಾರಣೆ ಮುಂದೂಡಿಕೆ

ಪಿಸ್ತೂಲ್ ಮುಟ್ಟುಗೋಲು ಪ್ರಶ್ನಿಸಿ ಹೈಕೋರ್ಟ್‌ಗೆ ದರ್ಶನ್ ಅರ್ಜಿ

ದರ್ಶನ್

ಬೆಂಗಳೂರು: ತಮಗೆ ಮಂಜೂರು ಮಾಡಲಾಗಿದ್ದ ಶಸ್ತ್ರಾಸ್ತ್ರ (ಪಿಸ್ತೂಲ್) ಪರವಾನಗಿ ಅಮಾನತುಪಡಿಸಿ ಪಿಸ್ತೂಲ್ ಮುಟ್ಟುಗೋಲು ಹಾಕಿಕೊಂಡಿರುವ ಪೊಲೀಸರ ಕ್ರಮವನ್ನು ಪ್ರಶ್ನಿಸಿ; ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್, ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತಂತೆ ದರ್ಶನ್ ಮಂಗಳವಾರ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಇದು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ಅರ್ಜಿಯಲ್ಲಿ ನಗರ ಪೊಲೀಸ್ ಆಯುಕ್ತ ಹಾಗೂ ಆಡಳಿತ ವಿಭಾಗದ ಉಪ ಪೊಲೀಸ್ ಆಯುಕ್ತರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ರದ್ದು ತೀರ್ಮಾನ: 'ದರ್ಶನ್ ಗಂಭೀರವಾದ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಇವರು ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿನ ಸಂತ್ರಸ್ತರು ಹಾಗೂ ತಮ್ಮ ವಿರುದ್ಧದ ಸಾಕ್ಷಿದಾರರಿಗೆ ಪಿಸ್ತೂಲ್ ಮುಂದಿಟ್ಟುಕೊಂಡು ಹೆದರಿಸುವ ಅಥವಾ ಅವರ ಪ್ರಾಣಕ್ಕೆ ಸಂಚಕಾರ ತರುವ ಸಾಧ್ಯತೆ ಇವೆ. ಈ ಹಿನ್ನೆಲೆಯಲ್ಲಿನ ವರದಿ ಪರಿಶೀಲಿಸಿ ಇವರ ಶಸ್ತ್ರಾಸ್ತ್ರ ಪರವಾನಗಿ ರದ್ದುಗೊಳಿಸಲು ವರದಿ ಸಲ್ಲಿಸಲಾಗಿತ್ತು. ಅಂತೆಯೇ, ಪರವಾನಗಿ ರದ್ದುಪಡಿಸುವುದಕ್ಕೆ ದರ್ಶನ್ ನೀಡಿರುವ ಸಮಜಾಯಿಷಿಯಲ್ಲಿ ಸಮರ್ಪಕ ಕಾರಣ ಕಂಡುಬಂದಿಲ್ಲ. ಹೀಗಾಗಿ, ಸಕ್ಷಮ ಪ್ರಾಧಿಕಾರ ಇವರ ಶಸ್ತ್ರಾಸ್ತ್ರ ಪರವಾನಗಿ ರದ್ದುಗೊಳಿಸಲು ತೀರ್ಮಾನಿಸಿರುತ್ತದೆ' ಎಂದು ಉಪ ಪೊಲೀಸ್ ಆಯುಕ್ತರು ತಿಳಿಸಿದ್ದರು.

ಕೋರಿಕೆ: 'ನನ್ನ ಪಿಸ್ತೂಲ್ ಪರವಾನಗಿ ಅಮಾನತುಪಡಿಸಿ ಉಪ ಪೊಲೀಸ್ ಆಯುಕ್ತರು ಇದೇ 16ರಂದು ಆದೇಶಿಸಿದ್ದಾರೆ ಮತ್ತು ಇದೇ 20ರಂದು ಪಿಸ್ತೂಲ್ ಅನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅವರ ಆದೇಶ ಸಂಪೂರ್ಣ ಏಪಕ್ಷೀಯ ಮತ್ತು ಕಾನೂನುಬಾಹಿರ. ನನಗೆ ಕಿರುಕುಳ ನೀಡುವ ಉದ್ದೇಶದಿಂದಲೇ ಈ ಆದೇಶ ಹೊರಡಿಸಲಾಗಿದೆ. ಎಲ್ಲಾ ಕಾನೂನು ಪ್ರಕ್ರಿಯೆ ಪಾಲಿಸಿದ ನಂತರವೇ ನನಗೆ ಶಸ್ತ್ರಾಸ್ತ್ರ ಪರವಾನಗಿ ನೀಡಲಾಗಿತ್ತು. ಆದ್ದರಿಂದ, ಉಪ ಪೊಲೀಸ್ ಆಯುಕ್ತರ ಆದೇಶ ರದ್ದುಪಡಿಸಬೇಕು' ಎಂದು ದರ್ಶನ್ ಅರ್ಜಿಯಲ್ಲಿ ಕೋರಿದ್ದಾರೆ.

ಸುದ್ದಿ 2 ನಿಮಿಷ

ಸಿ.ಎಂ. ವಿರುದ್ಧ ಉದ್ದೇಶಪೂರ್ವಕ ಷಡ್ಯಂತ್ರ– ದಿನೇಶ್ ಗುಂಡೂರಾವ್

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಉದ್ದೇಶಪೂರ್ವಕ ಷಡ್ಯಂತ್ರ ಮಾಡಲಾಗುತ್ತಿದೆ. ಬಿಜೆಪಿಯವರು ವಾಮಮಾರ್ಗದಲ್ಲಿ ಅಧಿಕಾರ ಹಿಡಿಯಲು ಯತ್ನಿಸುತ್ತಿದ್ದಾರೆ. ಆದರೆ, ಅದು ಫಲಿಸುವುದಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಒಂದೇ ಪಕ್ಷ, ಒಬ್ಬನೇ ನಾಯಕ, ಇನ್ನ್ಯಾರೂ ದೇಶದಲ್ಲಿ ಇರಬಾರದು. ಇದು ಕೇಂದ್ರ ಸರ್ಕಾರದ ದ್ವೇಷ ರಾಜಕಾರಣ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳಲು ಬಿಜೆಪಿಯವರಿಗೆ ಏನು ಹಕ್ಕಿದೆ? ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಷಡ್ಯಂತ್ರವನ್ನು ಸಮರ್ಥವಾಗಿ ಎದುರಿಸುತ್ತೇವೆ' ಎಂದರು.

ರಾಜಕೀಯ ಪ್ರೇರಿತ: 'ಮುಡಾದಲ್ಲಿ 50-50 ಅನುಪಾತದಲ್ಲಿ ಸಾವಿರಾರು ನಿವೇಶನ ಹಂಚಲಾಗಿದೆ. ಅದೆಲ್ಲ ಆಗಿರುವುದು ಬಿಜೆಪಿ ಅವಧಿಯಲ್ಲಿ. ಹೀಗಾಗಿ, ಬಿಜೆಪಿ ಅವಧಿಯ ತನಿಖೆ ಆಗಬೇಕು. ಮುಖ್ಯಮಂತ್ರಿಯ ಪತ್ನಿ ನಿವೇಶನ ವಾಪಸ್ ಮಾಡಿದ್ದಾರೆ. ಆದರೂ ಅವರಿಗೆ ಇ.ಡಿ ನೋಟಿಸ್ ನೀಡಿರುವುದು ರಾಜಕೀಯ ಪ್ರೇರಿತ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಇಬ್ಬರೂ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂದು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಹೊರತುಪಡಿಸಿ, ನಾವು ಮಾತಾಡಿದರೆ ಅದು ನಮ್ಮ ನಮ್ಮಲ್ಲಿ ಮಾತ್ರ. ಬಿಜೆಪಿಯಲ್ಲಿ ಇರುವಷ್ಟು ಗೊಂದಲ ನಮ್ಮಲ್ಲಂತೂ ಇಲ್ಲ. ಬಿಜೆಪಿಯವರು ತೊಡೆ ತಟ್ಟಿಕೊಂಡ ಹಾಗೆ ನಾವೇನೂ ಗೊಂದಲ ಮಾಡಿಕೊಂಡಿಲ್ಲ' ಎಂದರು.

ಬಾಲ್ಯವಿವಾಹ: ಶಿಕ್ಷಕ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಕಲಬುರಗಿ: ನಗರದಲ್ಲಿ ಯುವಕನೊಂದಿಗೆ 15 ವರ್ಷದ ಬಾಲಕಿಯ ವಿವಾಹ ಮಾಡಿಸಿದ ಆರೋಪದಡಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಸೇರಿ ನಾಲ್ವರ ವಿರುದ್ಧ ನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕಿ ಮದುವೆಯಾದ ಹಾಗರಗಾ ಕ್ರಾಸ್ ನಿವಾಸಿ ಸೈಯದ್ ಅಹಮದ್‌ರಾಜ್, ಕುರಾನ್ ಪಠಿಸಿ ಮದುವೆ ಮಾಡಿಸಿದ ವಿ.ಕೆ. ಸಲಗರ ಗ್ರಾಮದ ಶಿಕ್ಷಕ ಅಕ್ರಂ ಪಾಷಾ, ಚಿಂಚೋಳಿ ತಾಲ್ಲೂಕಿನ ಪೋಲಕಪಳ್ಳಿಯ ಬಾಲಕಿಯ ತಂದೆ ಶೇಖ್ ಇಸ್ಮಾಯಿಲ್ ಹಾಗೂ ತಾಯಿ ಇರ್ಫಾನಾ ಬೇಗಂ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ಅನಾರೋಗ್ಯದ ಚಿಕಿತ್ಸೆಗೆಗಾಗಿ ಕಲಬುರಗಿಗೆ ಬಂದಿದ್ದ ಪೋಷಕರು ಸೈಯದ್ ಮನೆಯಲ್ಲಿ ಉಳಿದುಕೊಂಡಿದ್ದರು. ಬಳಿಕ ಸೈಯದ್ ಮನೆಯಲ್ಲಿ ನಿಖಾ (ಮದುವೆ) ಮಾಡಿಸಿದ್ದರು. ಈ ಸಂಬಂಧ ಮಕ್ಕಳ ಸಹಾಯವಾಣಿಗೆ ದೂರು ಬಂದಿದ್ದು, ನಿಖಾ ಮಾಡಿಸಿದ ವಿಡಿಯೊ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ಪ್ರಕರಣ ದಾಖಲಿಸಲಾಗಿದೆ. ಶಿಕ್ಷಕ ಅಕ್ರಂ ಪಾಷಾ ಅವರು ಇಸ್ಲಾಂ ಧರ್ಮದ ಪ್ರಕಾರ ಕುರಾನ್ ಪಠಿಸಿ ಬಾಲ್ಯವಿವಾಹ ಮಾಡಿಸಿದ್ದಾರೆ ಎಂದು ಹೇಳಿದ್ದಾರೆ.

ಫೆ.16ಕ್ಕೆ ಪಿಟೀಲು ವಾದನ, ಭಕ್ತಿಗೀತೆ ಗಾಯನ ಸ್ಪರ್ಧೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ಸಂಗೀತ ಸರಸ್ವತಿ ಪಿಟೀಲು ಚೌಡಯ್ಯ ದತ್ತಿಯಡಿ ಫೆಬ್ರುವರಿ 16ರಂದು ಪಿಟೀಲು ವಾದನ ಮತ್ತು ಭಕ್ತಿಗೀತೆ ಗಾಯನ ಸ್ಪರ್ಧೆ ಹಮ್ಮಿಕೊಂಡಿದೆ.

ಕೆ.ಮೋಹನ್ ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ಅವರು ಈ ದತ್ತಿ ಸ್ಥಾಪಿಸಿದ್ದಾರೆ. ಈ ಸ್ಪರ್ಧೆಯನ್ನು 10ರಿಂದ 16 ವರ್ಷದವರಿಗೆ ಆಯೋಜಿಸಲಾಗಿದೆ. ಪ್ರಥಮ ಮೂರು ಸ್ಥಾನ ಪಡೆದವರಿಗೆ ಕ್ರಮವಾಗಿ ₹4 ಸಾವಿರ, ₹3 ಸಾವಿರ ಹಾಗೂ ₹2 ಸಾವಿರ ನಗದು ಬಹುಮಾನ ನೀಡಲಾಗುತ್ತದೆ.

ಆಸಕ್ತರು ಪ್ರತಿಷ್ಠಾನದ ಕಚೇರಿಯಿಂದ ಅರ್ಜಿ ನಮೂನೆ ಪಡೆದು, ಫೆ.10ರೊಳಗೆ ಬಿ.ಎಂ. ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು–560004 ಈ ವಿಳಾಸಕ್ಕೆ ಸಲ್ಲಿಸಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9972812127

ಚತುಷ್ಪಥ ರಸ್ತೆಗಾಗಿ 154 ಮರಗಳು ಧರೆಗೆ

ತಾವರೆಕೆರೆ, ಬೆಂಗಳೂರು, ಮಾಗಡಿಗೆ ಸಂಪರ್ಕ ಕಲ್ಪಿಸುವ ರಸ್ತೆ; ಮತ್ತೆ ಗಿಡಗಳನ್ನು ಬೆಳೆಸಲು ಆಗ್ರಹ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಸೊಂಡೆಕೊಪ್ಪ ರಸ್ತೆಯನ್ನು ಚತುಷ್ಪಥ ರಸ್ತೆಯಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಗಾಗಿ ರಸ್ತೆ ಬದಿಯಲ್ಲಿದ್ದ ಸುಮಾರು 154 ಮರಗಳನ್ನು ಕಡಿಯಲಾಗಿದೆ.

ಪಟ್ಟಣದಿಂದ ತಾವರೆಕೆರೆ, ಬೆಂಗಳೂರು, ಮಾಗಡಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯ ಎರಡೂ ಬದಿಯಲ್ಲಿ 30ರಿಂದ 40 ವರ್ಷಗಳಷ್ಟು ಹಳೆಯದಾದ ಮರಗಳಿದ್ದವು. 20 ಮೀಟರ್ ಅಗಲದ ರಸ್ತೆ ನಿರ್ಮಿಸುವುದಕ್ಕಾಗಿ ನೆರಳು ನೀಡುತ್ತಿದ್ದ ರಸ್ತೆ ಬದಿಯ ಮರಗಳನ್ನು ಕಡಿಯಲಾಗುತ್ತಿದೆ.

ಸೊಂಡೆಕೊಪ್ಪ ರಸ್ತೆಯ ನಗರಸಭೆ ವ್ಯಾಪ್ತಿಯವರೆಗೆ 3.29 ಕಿ.ಮೀ. ರಸ್ತೆ ನಿರ್ಮಾಣವಾಗುತ್ತಿದ್ದು, ಇದರಲ್ಲಿ ರಸ್ತೆ ವಿಭಜಕ, ಪಾದಚಾರಿ ಮಾರ್ಗ ಸೇರಿದಂತೆ 20 ಮೀಟರ್ ಅಗಲದ ರಸ್ತೆ ನಿರ್ಮಿಸುವ ಉದ್ದೇಶವಿದೆ. ರಸ್ತೆಯ ಎರಡೂ ಬದಿಗೂ ವಿದ್ಯುತ್ ದೀಪಗಳನ್ನು ಅಳವಡಿಸುವುದು ಯೋಜನೆಯಲ್ಲಿದೆ.

'ನಿಯಮಾನುಸಾರ ಮರಗಳ ಸಮೀಕ್ಷೆ ನಡೆಸಿ, ಹಿರಿಯ ಅಧಿಕಾರಿಗಳ ಅನುಮತಿ ಮೇರೆಗೆ ಮರಗಳನ್ನು ತೆರವುಗೊಳಿಸಲಾಗುತ್ತಿದೆ' ವಲಯ ಅರಣ್ಯಾಧಿಕಾರಿ ಮಂಜುನಾಥ್ ತಿಳಿಸಿದರು.

'ತೆರವುಗೊಳಿಸುವ ಒಂದು ಮರಕ್ಕೆ ಪರಿಹಾರವಾಗಿ ಹತ್ತು ಮರಗಳನ್ನು ಬೆಳೆಸುವುದಕ್ಕೆ ಅಗತ್ಯವಿರುವ ಹಣವನ್ನು ಅರಣ್ಯ ಇಲಾಖೆಗೆ ಸಂದಾಯ ಮಾಡಿದ್ದೇವೆ. ಅರಣ್ಯೀಕರಣದ ಭಾಗವಾಗಿ ಅವಶ್ಯಕತೆ ಇರುವ ಕಡೆ ಇಲಾಖೆಯವರು ಗಿಡಗಳನ್ನು ನೆಡಿಸುತ್ತಾರೆ. ಎಲ್ಲ ಹಂತದಲ್ಲೂ ಅನುಮತಿಯನ್ನು ಪಡೆದೇ ಕಾಮಗಾರಿ ಮಾಡುತ್ತಿದ್ದೇವೆ' ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೋಮಶೇಖರಪ್ಪ ತಿಳಿಸಿದರು.

ಸೊಂಡೆಕೊಪ್ಪ ರಸ್ತೆಯಲ್ಲಿ ಚತುಷ್ಪಥ ರಸ್ತೆ ಕಾಮಗಾರಿಗಾಗಿ ಮರಗಳನ್ನು ಕಡಿದಿರುವುದು



ಸ್ವಾಮಿ

ಸೊಂಡೆಕೊಪ್ಪ ರಸ್ತೆಯಲ್ಲಿ ಕೋರ್ಟ್, ದೇವಾಲಯ, ಶಾಲಾ–ಕಾಲೇಜು, ಕಲ್ಯಾಣ ಮಂಟಪಗಳು, ಕೈಗಾರಿಕೆಗಳಿವೆ. ಇದೇ ಮಾರ್ಗವಾಗಿ ಹಲವರು ಬೆಂಗಳೂರಿಗೆ ಸಂಚರಿಸುತ್ತಾರೆ. ರಸ್ತೆ ಕಿರಿದಾಗಿದ್ದರಿಂದ ಸಂಚಾರ ದಟ್ಟಣೆಯಾಗುತ್ತಿದೆ. ಚತುಷ್ಪಥ ರಸ್ತೆ ನಿರ್ಮಾಣವಾದರೆ ಎಲ್ಲದಕ್ಕೂ ಪರಿಹಾರ ದೊರೆಯಲಿದೆ' ಎಂದು ಸ್ಥಳೀಯ ನಿವಾಸಿ ಸ್ವಾಮಿ ಹೇಳಿದರು. 'ಕೆಲವರು ರಸ್ತೆ ವಿಸ್ತರಣೆಯಿಂದ ಮರಗಳು ನಾಶವಾಗುತ್ತಿದೆ ಎನ್ನುತ್ತಿದ್ದಾರೆ. ರಸ್ತೆ ವಿಸ್ತರಣೆಯಾದ ಮೇಲೂ ರಸ್ತೆ ಬದಿಗಳಲ್ಲಿ ಮರಗಳನ್ನು ಬೆಳೆಸಬಹುದು' ಎಂದು ಅವರು ಸಲಹೆ ನೀಡಿದರು.

ನೆಲಮಂಗಲ ತಾಲ್ಲೂಕಿನ ಸಮಗ್ರ ಅಭಿವೃದ್ಧಿಯ ಭಾಗವಾಗಿ ₹17 ಕೋಟಿ ವೆಚ್ಚದಲ್ಲಿ ಸೊಂಡೆಕೊಪ್ಪ ರಸ್ತೆಯನ್ನು ಚತುಷ್ಪಥ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ

ಎನ್.ಶ್ರೀನಿವಾಸ್, ಶಾಸಕ, ನೆಲಮಂಗಲ

ಸೊಂಡೆಕೊಪ್ಪ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಶಾಸಕ ಎನ್‌.ಶ್ರೀನಿವಾಸ್ (ಮಧ್ಯದಲ್ಲಿರುವವರು) ಚಾಲನೆ ನೀಡಿದರು

ಕಸ ಮುಕ್ತ ನೆಲಮಂಗಲ: ಭರವಸೆ

ನೆಲಮಂಗಲ: 'ಕಸ ಸಂಗ್ರಹಣೆ ಮಾಡಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಖಾಸಗಿ ಕಂಪನಿಯ ಜೊತೆ ಒಡಂಬಡಿಕೆ ಮಾಡಿಕೊಂಡು ಹೊಸ ಯೋಜನೆ ರೂಪಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ನೆಲಮಂಗಲವನ್ನು ಕಸ ಮುಕ್ತಗೊಳಿಸಲಾಗುವುದು' ಎಂದು ಶಾಸಕ ಎನ್.ಶ್ರೀನಿವಾಸ್ ಭರವಸೆ ನೀಡಿದರು.

ಪಟ್ಟಣದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು '₹130 ಕೋಟಿ ವೆಚ್ಚದಲ್ಲಿ ಬೆಸ್ಕಾಂ ಸಹಕಾರದೊಂದಿಗೆ ನಗರಸಭೆಯ ಎಲ್ಲ ಪ್ರದೇಶಗಳಿಗೆ ಭೂಗತ ಕೇಬಲ್ ಅಳವಡಿಸಲಾಗುವುದು. ಪಟ್ಟಣದ ಸಮಗ್ರ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಹಲವು ಯೋಜನೆಗಳನ್ನು ರೂಪಿಸಲಾಗುವುದು' ಎಂದರು.

ಇದೇ ವೇಳೆ ಸೋಲೂರು ಹೋಬಳಿ ತಟ್ಟೆಕೆರೆಯಲ್ಲಿ ₹50 ಲಕ್ಷ ವೆಚ್ಚದಲ್ಲಿ ರಸ್ತೆ ಕಾಮಗಾರಿ ಹಾಗೂ ಬಸವಣ್ಣದೇವರ ಮಠದ ಆವರಣದ ರಸ್ತೆ ಕಾಮಗಾರಿಗಳಿಗೆ ಭೂಮಿಪೂಜೆ ಮಾಡಲಾಯಿತು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ಗದ್ದಿಗೆ ಮಠದ ಮಹಾಂತ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ರವಿ, ಮಾಜಿ ಸದಸ್ಯ ಬಿ.ಎಂ.ಎಲ್.ಕಾಂತರಾಜು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ನಾರಾಯಣಗೌಡ, ಮುಖಂಡರಾದ ಎಂ.ಕೆ.ನಾಗರಾಜು, ಎನ್.ಪಿ.ಹೇಮಂತಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ಗೌಡ, ತಾಲ್ಲೂಕು ಅಧ್ಯಕ್ಷ ವಜ್ರಘಟ್ಟ ನಾಗರಾಜು ಇದ್ದರು.

ಮೂರು ವಾರಗಳಲ್ಲಿ ವಕೀಲರ ಸಂಘಕ್ಕೆ ಚುನಾವಣೆ: ಸುಪ್ರೀಂ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ವಕೀಲರ ಸಂಘದ ಚುನಾವಣೆಯನ್ನು ಮೂರು ವಾರಗಳಲ್ಲಿ ಪೂರ್ಣಗೊಳಿಸಬೇಕೆಂದು ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಈ ವರ್ಷ ಫೆಬ್ರುವರಿ 2ರಂದು ನಿಗದಿಯಾಗಿದ್ದ ಚುನಾವಣೆಯನ್ನು ಸಂಘವು ಕಳೆದ ವಾರ ರದ್ದುಗೊಳಿಸಿತ್ತು. ಸಂಘದ ಖಜಾಂಚಿ ಹುದ್ದೆಯನ್ನು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿಡಬೇಕು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಸೂಚಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠ, 'ಖಜಾಂಚಿ ಹುದ್ದೆಗೆ ನಾಮಪತ್ರ ಸಲ್ಲಿಸಿದ ಪುರುಷ ಅಭ್ಯರ್ಥಿಗಳಿಗೆ ಅದನ್ನು ಬೇರೆ ಯಾವುದೇ ಹುದ್ದೆಗೆ ಬದಲಾಯಿಸಲು ಒಂದು ಅವಕಾಶ ನೀಡಲಾಗುವುದು ಎಂದು ಹೇಳಿತು. ಮಹಿಳಾ ಅಭ್ಯರ್ಥಿ ಹುದ್ದೆಗಳಿಗೆ ವಾರದೊಳಗೆ ನಾಮಪತ್ರಗಳನ್ನು ಆಹ್ವಾನಿಸಬೇಕು ಎಂದೂ ಸೂಚಿಸಿತು.

'ಬೆಂಗಳೂರು ವಕೀಲರ ಸಂಘದ ಹಾಲಿ ಪದಾಧಿಕಾರಿಗಳ ಅಧಿಕಾರಾವಧಿ 2024ರ ಡಿಸೆಂಬರ್ 19ರಂದು ಕೊನೆಗೊಂಡಿದೆ. 2025ರ ಜನವರಿ ಅಥವಾ ಫೆಬ್ರುವರಿಯಲ್ಲಿ ಚುನಾವಣೆ ನಡೆಸಲು ಉದ್ದೇಶಿಸಲಾಗಿದೆ. ಈ ಕಾರಣದಿಂದ ಮಹಿಳೆಯರಿಗೆ ಶೇ 33ರಷ್ಟು ಮೀಸಲು ನಿಗದಿಪಡಿಸುವಂತೆ ಬೆಂಗಳೂರು ವಕೀಲರ ಸಂಘ ಸೇರಿದಂತೆ ಅರ್ಜಿಯಲ್ಲಿ ಕಾಣಿಸಲಾಗಿರುವ ಇತರೆ ಪ್ರತಿವಾದಿಗಳಿಗೆ ನಾವು 2024ರ ಡಿಸೆಂಬರ್ 23ರಂದು ಮನವಿ ಸಲ್ಲಿಸಿದ್ದೆವು' ಎಂದು ಹೈಕೋರ್ಟ್ ವಕೀಲೆ ದೀಕ್ಷಾ ಎನ್. ಅಮೃತೇಶ್ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

'ಸುಪ್ರೀಂ ಕೋರ್ಟ್ ನಿರ್ದೇಶನದಂತೆ, ಮುಂಬರುವ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಆಯ್ಕೆಯ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ 33ರಷ್ಟು ಮೀಸಲು ಕಲ್ಪಿಸಬೇಕು ಎಂಬ ನಮ್ಮ ಮನವಿಗೆ ಪೂರಕವಾಗಿ ಪ್ರತಿವಾದಿಗಳು ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ, ಈ ನಿಟ್ಟಿನಲ್ಲಿ ಸಂಘದ ಬೈ–ಲಾಗೆ ತಿದ್ದುಪಡಿ ಮಾಡುವ ಮೂಲಕ ನಮ್ಮ ಮನವಿಪತ್ರ ಪರಿಗಣಿಸಿ ಮಹಿಳೆಯರಿಗೆ ಶೇ 33ರಷ್ಟು ಸೀಟುಗಳ ಮೀಸಲು ಕಲ್ಪಿಸಲು ಪ್ರತಿವಾದಿಗಳಿಗೆ ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

'ಕ್ರೈಸ್ತರ ವಿರುದ್ಧದ ಸುಳ್ಳು ಪ್ರಕರಣ ವಾಪಸ್ ಪಡೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಾಂತರ ಮಾಡುತ್ತಿದ್ದಾರೆ ಎಂದು ಕ್ರೈಸ್ತ ಧರ್ಮೀಯರ ವಿರುದ್ಧ ದಾಖಲಿಸಿರುವ ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು' ಎಂದು 'ಅಹಿಂದ ಚಳವಳಿ' ಸಂಘಟನೆಯ ಮುಖ್ಯ ಸಂಚಾಲಕ ಸಿದ್ದಯ್ಯ ಮೂರ್ತಿ ಒತ್ತಾಯಿಸಿದ್ದಾರೆ.

ಅಹಿಂದ ಚಳವಳಿ ವತಿಯಿಂದ ಗಾಂಧಿ ಭವನದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಕ್ರೈಸ್ತ ಧರ್ಮಗುರುಗಳ ಸಭೆಯ ನಿರ್ಣಯಗಳ ಬಗ್ಗೆ ಪ್ರಕಟಣೆ ನೀಡಿರುವ ಅವರು, 'ಪೊಲೀಸ್ ತನಿಖೆಯ ಹಂತದಲ್ಲಿರುವ ಪ್ರಕರಣಗಳನ್ನು ಸರ್ಕಾರ ವಾಪಸ್ ಪಡೆಯಬೇಕು. ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವ ಪ್ರಕರಣಗಳಲ್ಲಿ ಸಂಘದ ವತಿಯಿಂದ ಹೋರಾಟ ನಡೆಸಲು ತೀರ್ಮಾನಿಸಲಾಯಿತು' ಎಂದಿದ್ದಾರೆ.

'2022ರಲ್ಲಿ ಅಂದಿನ ರಾಜ್ಯ ಸರ್ಕಾರವು ಜಾರಿಗೆ ತಂದ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ರಕ್ಷಣಾ ಕಾಯ್ದೆ'ಯಿಂದ ಕ್ರೈಸ್ತ ಧರ್ಮೀಯರಿಗೆ ತೊಂದರೆಯಾಗುತ್ತಿದೆ. ಆ ಕಾಯ್ದೆಯನ್ನು ವಾಪಸ್ ಪಡೆಯಬೇಕು. ಚರ್ಚ್ ಮತ್ತು ಮಸಣ ಸಂಬಂಧಿ ಕಾಮಗಾರಿಗಳಿಗೆ ಕೆಲ ಸಂಘಟನೆಗಳು ಅಡಚಣೆ ಮಾಡುತ್ತಿದ್ದು, ಈ ವಿಷಯದಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಜನರ ಘನತೆ ಎತ್ತಿಹಿಡಿಯುವ ಸಂವಿಧಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸಂವಿಧಾನವು ಜನರ ಘನತೆಯನ್ನು ಎತ್ತಿಹಿಡಿಯುವ ಜೊತೆಗೆ ಅವರನ್ನು ರಕ್ಷಿಸುವ ಕೆಲಸ ಮಾಡುತ್ತದೆ ಎಂದು ಚಿಂತಕ ಸರ್ಜಾಶಂಕರ್ ಹರಳಿಮಠ ಹೇಳಿದರು.

ನಗರದ ಕ್ರಿಸ್ತು ಜಯಂತಿ ಕಾಲೇಜಿನ ಕನ್ನಡ ವಿಭಾಗ ಆಯೋಜಿಸಿದ್ದ 'ಕನ್ನಡ ಸಾಹಿತ್ಯದಲ್ಲಿ ಭಾರತ ಸಂವಿಧಾನದ ಆಶಯ' ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂವಿಧಾನ ಕೇವಲ ಕಾನೂನು ಕಟ್ಟಳೆಗಳ ಪುಸ್ತಕವಲ್ಲ. ಅದು ಭಾರತೀಯರ ಬದುಕಿನ ಸಾಧನ. ಭಾರತ ಬಹುಸಂಸ್ಕೃತಿಯ ದೇಶ. ಇಲ್ಲಿ ನೂರಾರು ಜಾತಿಗಳು, ಹತ್ತಾರು ಧರ್ಮಗಳು, ಸಾವಿರಾರು ಭಾಷೆಗಳು, ಆದಿವಾಸಿಗಳು, ಬುಡಕಟ್ಟು ಜನರು ಎಲ್ಲರೂ ಇದ್ದಾರೆ. ನಮ್ಮೆಲ್ಲರ ಸಂಪ್ರದಾಯಗಳು, ನಮ್ಮ ಆಚಾರ–ವಿಚಾರಗಳು, ಆಹಾರ ಪದ್ಧತಿಗಳು ವಿಭಿನ್ನವಾಗಿವೆ. ಆದ್ದರಿಂದ ನಾವೆಲ್ಲರೂ ಪರಸ್ಪರ ದ್ವೇಷಿಸದೆ, ಹಿಂಸೆಗೆ ಇಳಿಯದೆ ಪರಸ್ಪರರನ್ನು ಅರ್ಥ ಮಾಡಿಕೊಂಡು ಬದುಕಲು ಹಾಕಿಕೊಟ್ಟಿರುವ ವಿಧಿವಿಧಾನಗಳ ಒಂದು ನೀಲನಕ್ಷೆಯೇ ನಮ್ಮ ಸಂವಿಧಾನ' ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಸರ್ಜಾಶಂಕರ್ ಹರಳಿಮಠ ಮಾತನಾಡಿದರು

'ಪ್ರಜಾಪ್ರಭುತ್ವವನ್ನು ಸಾಧಿಸುವುದೇ ಸ್ವಾತಂತ್ರ್ಯಪೂರ್ವದ ಭಾರತೀಯರ ಕನಸಾಗಿತ್ತು. ಈ ಕನಸುಗಳಿಗೆ ಜೀವ ಕೊಟ್ಟವರು ನಮ್ಮ ಕವಿ, ಸಾಹಿತಿಗಳು. ಇವರು ತಮ್ಮ ಸಾಹಿತ್ಯದ ಮೂಲಕ ಒಂದು ಅಲಿಖಿತ ಭಾರತದ ಸಂವಿಧಾನವನ್ನೇ ರೂಪಿಸಿಬಿಟ್ಟರು. ಇದರಲ್ಲಿ ಕನ್ನಡ ಸಾಹಿತ್ಯದ ಪಾಲು ಗಣನೀಯವಾಗಿದೆ' ಎಂದು ಅವರು ತಿಳಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಸರ್ವೇಶ್ ಬಿ.ಎಸ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕರಾದ ಚಂದ್ರಶೇಖರ್ ಎನ್., ಕುಪ್ಪನಹಳ್ಳಿ ಎಂ. ಬೈರಪ್ಪ, ಸೈಯದ್ ಮುಯಿನ್, ರವಿಶಂಕರ್ ಎ.ಕೆ., ಪ್ರೇಮಕುಮಾರ್ ಕೆ., ಕಿರಣಕುಮಾರ್ ಎಚ್.ಜಿ., ಉಪಸ್ಥಿತರಿದ್ದರು.

'ಹಿಂದೂರಾಷ್ಟ್ರ ಸಂವಿಧಾನ ಕಾನೂನುಬಾಹಿರ'

ಬೆಂಗಳೂರು: 'ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಕೆಲ ಹಿಂದುತ್ವವಾದಿಗಳು 'ಹಿಂದೂರಾಷ್ಟ್ರ ಸಂವಿಧಾನ' ರೂಪಿಸಿದ್ದೇವೆ ಎಂದು ಘೋಷಿಸಿಕೊಂಡಿದ್ದಾರೆ. ಇದು ಕಾನೂನುಬಾಹಿರ ಮತ್ತು ಶಿಕ್ಷಾರ್ಹ ಅಪರಾಧ. ಅಂತವರ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು' ಎಂದು ಸೌಹಾರ್ದ ಕರ್ನಾಟಕ ಸಂಘಟನೆಯ ಪ್ರೊ.ಆರ್.ಕೆ.ಹುಡಗಿ ಒತ್ತಾಯಿಸಿದ್ದಾರೆ.

ಈ ಬಗ್ಗೆ ಸೌಹಾರ್ದ ಕರ್ನಾಟಕದ ಸದಸ್ಯರು ಬಹಿರಂಗ ಪತ್ರ ಬರೆದಿದ್ದಾರೆ. ಮೀನಾಕ್ಷಿ ಬಾಳಿ, ನೀಲಾ ಕೆ., ಮಾರುತಿ ಗೋಖಲೆ, ಸೇರಿ 14 ಮಂದಿ ಲೇಖಕರು, ವಿಮರ್ಶಕರು, ಸಾಮಾಜಿಕ ಕಾರ್ಯಕರ್ತರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಚಿತ್ರಾವಳಿ

ಒಳ ಮೀಸಲಾತಿ ಮರು ವರ್ಗೀಕರಣ ತಡೆಹಿಡಿಯುವಂತೆ ಆಗ್ರಹಿಸಿ, ಭೋವಿ (ವಡ್ಡರ), ಬಂಜಾರ (ಲಂಬಾಣಿ) ಕೊರಮ–ಕೊರಚ ಜಾತಿಗಳ ಮಹಾ ಒಕ್ಕೂಟದಿಂದ ಮಂಗಳವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಪೀಣ್ಯ ಕೈಗಾರಿಕಾ ಸಂಘ ಹಾಗೂ ಪೀಣ್ಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸೇಂಟ್ ಫ್ರಾನ್ಸಿಸ್ ಕಾಲೇಜಿನ ಸಹ ಪ್ರಾಧ್ಯಾಪಕ ಜಗದೀಶ್ ಬಾಬು ಬಿ.ವಿ., ಭಾರತೀಯ ಭೂ ಸೇನೆಯ ನಿವೃತ್ತ ಮೇಜರ್ ಕಾಶಿನಾಥ್ ರೈ ಟಿ.ಆರ್., ಮತ್ತು ಭಾರತೀಯ ವಾಯುಸೇನೆಯ ನಿವೃತ್ತ ಅಧಿಕಾರಿ ಪಿ.ಜಿ.ಕೆ. ನಾಯರ್ ಅವರಿಗೆ 76ನೇ ಗಣರಾಜ್ಯೋತ್ಸವದ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಶಿವಕುಮಾರ್ ಆರ್., ಉಪಸ್ಥಿತರಿದ್ದರು

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವಾಹನಗಳ ವೇಗದಿಂದ ಪಕ್ಷಿಗಳ ಪ್ರಾಣಕ್ಕೆ ಸಂಚಕಾರ

ಬಿಳಿ ಹದ್ದುಗಳ ಪಾಲಿಗೆ ಮಸಣವಾದ ಹೆದ್ದಾರಿ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯು ಬಿಳಿ ಹದ್ದು ಸೇರಿದಂತೆ ಕೆಲವು ಅಪರೂಪದ ಪಕ್ಷಿಗಳ ಜೀವಕ್ಕೆ ಕಂಟಕವಾಗುತ್ತಿದೆ.

ಪ್ರತಿ ತಿಂಗಳು 15–20 ಪಕ್ಷಿಗಳು, ಹದ್ದುಗಳು ಹೆದ್ದಾರಿಯಲ್ಲಿ ವಾಹನಗಳ ಚಕ್ರಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿವೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಕೆಲವೇ ವರ್ಷಗಳಲ್ಲಿ ಈ ಪ್ರದೇಶದಲ್ಲಿರುವ ಕೆಲವು ಅಪರೂಪದ ಹದ್ದುಗಳ ಸಂತತಿ ವಿನಾಶದ ಅಂಚಿಗೆ ತಲುಪಲಿದೆ ಎನ್ನುತ್ತಾರೆ ಪಶು, ಪಕ್ಷಿಗಳ ಸಂರಕ್ಷಕಿ ಬೆಂಗಳೂರಿನ ಗೌರಿ ಶಿವಯೋಗಿ.

ಹೆದ್ದಾರಿಯಲ್ಲಿ ಹೆಚ್ಚುತ್ತಿರುವ ಹದ್ದು ಮತ್ತು ಇತರ ಪಕ್ಷಿಗಳ ಸಾವಿನ ಬಗ್ಗೆ ಅಧ್ಯಯನದಲ್ಲಿ ತೊಡಗಿರುವ ಗೌರಿ ಅವರು ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್.

ಹೆದ್ದಾರಿಯಲ್ಲಿ ಸತ್ತು ಬಿದ್ದ ನಾಯಿ, ಬೆಕ್ಕುಗಳ ಕಳೇಬರ ಮತ್ತು ಅಕ್ಕಪಕ್ಕದ ಜಮೀನುಗಳಲ್ಲಿ ಆಹಾರ ಹುಡುಕಿಕೊಂಡು ಬರುವ ಹದ್ದುಗಳು ತಮ್ಮ ಭಾರವಾದ ದೇಹದಿಂದ ಏಕಾಏಕಿ ಮೇಲಕ್ಕೆ ಹಾರಲಾಗದೆ ವೇಗವಾಗಿ ಚಲಿಸುವ ವಾಹನಗಳ ಚಕ್ರಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿವೆ ಎನ್ನುವುದು ಅವರ ವಾದ.

ಪರಿಹಾರ ಏನು?

- ಹೆದ್ದಾರಿಯಲ್ಲಿ ಅಪಘಾತದ ಹಾಟ್‌ಸ್ಪಾಟ್ ಗುರುತಿಸಿ, ವಾಹನಗಳು ನಿಧಾನವಾಗಿ ಚಲಿಸುವಂತೆ ಸೂಚನಾ ಫಲಕ ಅಳವಡಿಸಬೇಕು
- ಹೆದ್ದಾರಿಯ ಎರಡೂ ಬದಿಯಲ್ಲಿ ಅಳವಡಿಸಿರುವ ತಂತಿಬೇಲಿ ದುರಸ್ತಿ ಮಾಡಬೇಕು

ಬೆಂಗಳೂರು –ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಗೌರಿ ಶಿವಯೋಗಿ ಅವರು ಸಂಗ್ರಹಿಸಿರುವ ಹದ್ದುಗಳ ಕಳೇಬರ

'ಒಮ್ಮೆ ಹೆದ್ದಾರಿಯಲ್ಲಿ ಬಿದ್ದಿದ್ದ ನಾಯಿ ಕಳೇಬರವನ್ನು ಹದ್ದು ತಿನ್ನುತ್ತಿತ್ತು. ಅದೇ ಮಾರ್ಗದಲ್ಲಿ ಬಂದ ಕಾರು ಡಿಕ್ಕಿ ಹೊಡೆದು ಹದ್ದು ಕೂಡ ಸತ್ತು ಬಿತ್ತು. ರಸ್ತೆ ಬದಿ ಕಾರು ನಿಲ್ಲಿಸಿ ಹದ್ದಿನ ಕಳೇಬರವನ್ನು ಗುಂಡಿ ತೋಡಿ ಹೂತು ಹಾಕಿದೆ. ಅಂದಿನಿಂದ ಹೆದ್ದಾರಿಯಲ್ಲಿ ಈ ರೀತಿ ಸಾಯುತ್ತಿರುವ ಹದ್ದು ಹಾಗೂ ಇತರ ಪಕ್ಷಿಗಳ ಕುರಿತು ಅಧ್ಯಯನ ಶುರು ಮಾಡಿದೆ' ಎಂದು ಗೌರಿ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಬಲಿಯಾಗುತ್ತಿರುವ ಪಕ್ಷಿಗಳ ಸಾವು ತಡೆಯುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಹೆದ್ದಾರಿ ಪ್ರಾಧಿಕಾರದವರು ಸೂಚನಾ ಫಲಕ ಅಳವಡಿಸಿ ಜಾಗೃತಿ ಮೂಡಿಸಬೇಕು

ಗೌರಿ ಶಿವಯೋಗಿ, ಪಕ್ಷಿಪ್ರಿಯೆ, ಬೆಂಗಳೂರು

'2023ರ ಡಿಸೆಂಬರ್‌ನಿಂದ ಇಲ್ಲಿಯವರೆಗೆ ಹೆದ್ದಾರಿಯಲ್ಲಿ ಬಲಿಯಾಗುತ್ತಿರುವ ಹದ್ದು ಮತ್ತು ಇತರ ಪಕ್ಷಿಗಳ ಕುರಿತು ಮಾಹಿತಿ ಸಂಗ್ರಹಿಸಲು ಆರಂಭಿಸಿದೆ. ಅದಕ್ಕಾಗಿ, ತಿಂಗಳಿಗೆ ಎರಡರಿಂದ ಮೂರು ಸಲ ವಾರಾಂತ್ಯದಲ್ಲಿ ಈ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದೇನೆ. ಇದುವರೆಗೆ 40ಕ್ಕೂ ಹೆಚ್ಚು ಹದ್ದು (ಕಪ್ಪು ಮತ್ತು ಬಿಳಿಹದ್ದು) ಸೇರಿದಂತೆ ಕಾಗೆ, ಗೂಬೆ, ಕೋಗಿಲೆ ಹಾಗೂ ಇತರ ಪಕ್ಷಿಗಳ ಕಳೇಬರಗಳನ್ನು ಹೂತಿದ್ದೇನೆ. ಕೆಲವೊಮ್ಮೆ ಹಲವು ವಾಹನ ಓಡಾಡಿ ಪಕ್ಷಿಗಳ ಕಳೇಬರ ರಸ್ತೆಗೆ ಅಂಟಿಕೊಂಡು ಅಪ್ಪಚ್ಚಿಯಾಗಿರುತ್ತವೆ' ಎಂದು ಹೇಳಿದರು.

ಹಾಟ್‌ಸ್ಪಾಟ್‌ಗಳು: ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಪಕ್ಷಿಗಳ ಪ್ರಾಣಕ್ಕೆ ಸಂಚಕಾರ ತಂದೊಡ್ಡುವ ಹಲವು ಅಪಾಯಕಾರಿ ಅಪಘಾತ ಸ್ಥಳಗಳನ್ನು(ಹಾಟ್‌ಸ್ಪಾಟ್) ಅವರು ಗುರುತಿಸಿದ್ದಾರೆ.

ಬಿಡದಿ, ಚನ್ನಪಟ್ಟಣ (ಮಸೀದಿ ಸಮೀಪ), ಮದ್ದೂರು ಮೇಲ್ಸೇತುವೆ (ಮದ್ದೂರು ಟಿಫಾನೀಸ್ ಬಳಿ) ಹಾಗೂ ಮಂಡ್ಯ (ತಿರುವು ಹಾಗೂ ಮೇಲ್ಸೇತುವೆ) ಹೆದ್ದಾರಿಯ ಪ್ರಮುಖ ಅಪಾಯಕಾರಿ ಹಾಟ್‌ಸ್ಪಾಟ್‌ಗಳು. ಅಪರೂಪದ ಬಿಳಿ ಹದ್ದುಗಳು ಹೆಚ್ಚಾಗಿರುವ ಜಾಗಗಳು ಇವು.

'ಹೆದ್ದಾರಿಯಲ್ಲಿ ಹದ್ದು, ಬಿಳಿ ಹದ್ದು ಸೇರಿದಂತೆ ಕೆಲ ಪಕ್ಷಿಗಳು ಬಲಿಯಾಗುತ್ತಿರುವುದನ್ನು ತಡೆಯಲು ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ. ಇ–ಮೇಲ್ ಕೂಡ ಮಾಡಿರುವೆ. ಕೆಲ ಸಚಿವರ ಗಮನಕ್ಕೂ ತಂದರೂ ಪ್ರಯೋಜನವಾಗಿಲ್ಲ. ಅವರಿಗೆ ಪಕ್ಷಿಗಳ ಸಾವಿನ ಗಂಭೀರತೆ ಅರ್ಥವಾಗುತ್ತಿಲ್ಲ' ಎಂದು ಗೌರಿ ಬೇಸರ ವ್ಯಕ್ತಪಡಿಸಿದರು.

ತಿಂಗಳಿಗೆ 15–20 ಪಕ್ಷಿ ಸಾವು

ಪ್ರತಿ ದಿನ ಬೆಳಗ್ಗೆ 6ರಿಂದ 8ರ ಅವಧಿಯಲ್ಲಿ ಬಹುತೇಕ ಪಕ್ಷಿಗಳು ಬಲಿಯಾಗುತ್ತಿವೆ. ವಾರಾಂತ್ಯದಲ್ಲಿ ಸಾವಿನ ಸಂಖ್ಯೆ ಹೆಚ್ಚು.

ತಿಂಗಳಿಗೆ ಕನಿಷ್ಠ ಏನಿಲ್ಲವೆಂದರೂ 15 ಪಕ್ಷಿಗಳು ಹೆದ್ದಾರಿಯಲ್ಲಿ ಅಪಘಾತಕ್ಕೆ ಬಲಿಯಾಗುತ್ತಿವೆ. ಇದರಲ್ಲಿ ಹದ್ದುಗಳೇ ಹೆಚ್ಚು. ಜನವರಿ, ಫೆಬ್ರುವರಿ, ಮಾರ್ಚ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಈ ಪ್ರಮಾಣ ಹೆಚ್ಚು.

ಜನವರಿಯಿಂದ ಮಾರ್ಚ್ ಹದ್ದುಗಳ ಸಂತಾನೋತ್ಪತ್ತಿ ಅವಧಿ ಎಂಬುದು ಇಲ್ಲಿ ಗಮನಾರ್ಹ. ಹೆದ್ದಾರಿಯಲ್ಲಿ ಅತಿ ವೇಗವಾಗಿ ಸಂಚರಿಸುವ ವಾಹನಗಳಿಗೆ ಪಕ್ಷಿಗಳು ಸಿಲುಕಿ ಸತ್ತಾಗ ಬಹುತೇಕ ಸವಾರರು ವಾಹನ ನಿಲ್ಲಿಸದೆ ಹೋಗುತ್ತಾರೆ ಎನ್ನುತ್ತಾರೆ ಗೌರಿ.

ಅನಿಲ ಸೋರಿಕೆ: ಕಾರ್ಮಿಕ ಸಾವು

ಕೊಪ್ಪಳ ಬಳಿ ಕಾರ್ಖಾನೆಯಲ್ಲಿ ಅವಘಡ: 10 ಮಂದಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಸಮೀಪದ ಗಿಣಿಗೇರಾ, ಅಲ್ಲಾನಗರ ನಡುವೆ ಇರುವ ಕಾಮಿನಿ ಇಸ್ಪಾತ್ (ಹೊಸಪೇಟೆ ಇಸ್ಪಾತ್ ಲಿಮಿಟೆಡ್) ಕಾರ್ಖಾನೆಯಲ್ಲಿ ಮಂಗಳವಾರ ಅನಿಲ ಸೋರಿಕೆ ಆಗಿದ್ದು, ಒಬ್ಬ ಕಾರ್ಮಿಕ ಮೃತಪಟ್ಟು, ಹತ್ತು ಜನ ಗಾಯಗೊಂಡಿದ್ದು, ಒಬ್ಬನ ಸ್ಥಿತಿ ಚಿಂತಾಜನಕವಾಗಿದೆ.

ಕಬ್ಬಿಣ ಮತ್ತು ಸ್ಪಾಂಜ್ ತಯಾರಿಕೆ ಕಾರ್ಖಾನೆಯ ಒಂದು ಘಟಕದಲ್ಲಿ ಹೊರ ಬೀಳುತ್ತಿದ್ದ ಬೂದಿಯನ್ನು ಸ್ವಚ್ಛಗೊಳಿಸಲು ಇಬ್ಬರು ಕಾರ್ಮಿಕರು ತೆರಳಿದ್ದರು. ಆಗ ಆ ಘಟಕ ಬಂದ್ ಆಗಿತ್ತು. ಪಕ್ಕದಲ್ಲಿದ್ದ ಘಟಕ ಕಾರ್ಯನಿರ್ವಹಿಸುತ್ತಿತ್ತು. ಆಗ ಅನಿಲ ಸೋರಿದ್ದು, ಅಲ್ಲಾನಗರ ನಿವಾಸಿ ಮಾರುತಿ ಕೊರಗಲ್ (24) ಅಸ್ವಸ್ಥರಾದರು. ಆಸ್ಪತ್ರೆಗೆ ಬರುವ ಮಾರ್ಗದಲ್ಲಿ ಮೃತಪಟ್ಟಿದ್ದಾರೆ. ಇನ್ನೊಬ್ಬ ಕಾರ್ಮಿಕ ಮಹಾಂತೇಶ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಜಿಲ್ಲಾಸ್ಪತ್ರೆ ಆವರಣದಲ್ಲಿ ಶವ ಇರಿಸಿದ್ದ ವಾಹನದ ಬಳಿ ಕುಟುಂಬದವರ ಆಕ್ರಂದನ

'ಕಾರ್ಬನ್ ಮೋನಾಕ್ಸೈಡ್ ಸೋರಿ ದುರ್ಘಟನೆ ನಡೆದಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಬಂದ್ ಆಗಿದ್ದ ಘಟಕದಲ್ಲಿ ಮಾರುತಿ ಹಾಗೂ ಮಹಾಂತೇಶ ಅಸ್ವಸ್ಥರಾದರು. ಅವರು ಕಿರುಚಾಟ ಕೇಳಿ ರಕ್ಷಣೆಗಾಗಿ ತೆರಳಿದ ಎಂಟು ಜನರೂ ಅಸ್ವಸ್ಥರಾದರು' ಎಂದು ಘಟನೆ ನಡೆದಾಗ ಕಾರ್ಖಾನೆಯ ಹೊರಭಾಗದಲ್ಲಿದ್ದ ಸಿಬ್ಬಂದಿ ತಿಳಿಸಿದರು.

ಆಕ್ರಂದನ: ಜಿಲ್ಲಾಸ್ಪತ್ರೆ ಶವಾಗಾರದ ಬಳಿ ಮಾರುತಿ ಸಾವು ನೆನೆದು ಕುಟುಂಬದವರು ಹಾಗೂ ಸ್ನೇಹಿತರು ಕಣ್ಣೀರಿಟ್ಟರು. ತಾಯಿ ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.

'ಖಾಸಗಿ ಬ್ಯಾಂಕ್‌ನಲ್ಲಿ ಕೆಲಸ ಸಿಕ್ಕಿತ್ತು. 2-3 ದಿನಗಳಲ್ಲಿ ಕಾರ್ಖಾನೆ ಕೆಲಸ ತೊರೆದು ಅಲ್ಲಿಗೆ ಹೋಗುತ್ತಿದ್ದ. ಆದರೆ ಇಂತಹ ಅವಘಡ ನಡೆಯಿತು' ಎಂದು ಕುಟುಂಬದವರು ಕಣ್ಣೀರು ಸುರಿಸಿದರು.

ಶಾಸಕರ ಅಭಿಪ್ರಾಯ ಪಡೆದೇ ಮುಖ್ಯಮಂತ್ರಿ ಆಯ್ಕೆ- ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಶಾಸಕಾಂಗ ಪಕ್ಷದ ಅಭಿಪ್ರಾಯ ಸಂಗ್ರಹಿಸಿದ ನಂತರವೇ ಹೈಕಮಾಂಡ್ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

'ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವರು ಮುಖ್ಯಮಂತ್ರಿ ಆಗಲು ಶಾಸಕರ ಬೆಂಬಲ ಇರಬೇಕು ಎಂದೇನೂ ಇಲ್ಲ. ಹೈಕಮಾಂಡ್ ಹೇಳಿದರೆ ಸಾಕು' ಎಂದು ರಾಮನಗರ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆಗೆ ರಾಜಣ್ಣ ಹೀಗೆ ಪ್ರತಿಕ್ರಿಯಿಸಿದರು.

'ಎಲ್ಲ ಶಾಸಕರದ್ದು ಒಂದೇ ಅಭಿಪ್ರಾಯ ಇರುವುದಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹತೆ ಇರುವವರು ಒಬ್ಬರಲ್ಲ, ಬಹಳ ಜನ ಇದ್ದಾರೆ. ಹೈಕಮಾಂಡ್ ನಾಯಕರು ಎಲ್ಲರ ಅಭಿಪ್ರಾಯ ಕೇಳುತ್ತಾರೆ. ಅವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೊ ಅದಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ' ಎಂದರು.

ಆರೋಪ ಮಾಡುವುದು ಚಾಳಿ: 'ಪರಿಶಿಷ್ಟರ ಕಲ್ಯಾಣಕ್ಕೆ ಬಜೆಟ್‌ನಲ್ಲಿ ಒದಗಿಸಿದ ಅನುದಾನ ಸಮರ್ಪಕವಾಗಿ ಬಳಕೆ ಆಗಿಲ್ಲ' ಎಂಬ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿಕೆಗೆ, 'ಅವರ (ಬಿಜೆಪಿ) ಅವಧಿಯಲ್ಲಿ ಎಷ್ಟು ಅನುದಾನ ಉಪಯೋಗಿಸಿಕೊಂಡಿದ್ದಾರೆ ಎನ್ನುವುದನ್ನು ಮೊದಲು ನೋಡಲಿ. ಆರೋಪ ಮಾಡುವುದು ಅವರ ಚಾಳಿ' ಎಂದರು.

ಅನುದಾನ ಸಿಗದ ಕಾರಣಕ್ಕೆ ಕಾಂಗ್ರೆಸ್ ಶಾಸಕರು ಅಸಮಾಧಾನಗೊಂಡಿರುವ ಬಗ್ಗೆ ಕೇಳಿದಾಗ, 'ತಮ್ಮ ಕ್ಷೇತ್ರದಲ್ಲಿ ಹೆಚ್ಚು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ಶಾಸಕರು ಅನುದಾನ ಕೊಡುವಂತೆ ಬೇಡಿಕೆ ಇಟ್ಟಿದ್ದಾರೆ. ಅವರ ಬೇಡಿಕೆಯನ್ನು ಸರ್ಕಾರ ಹಂತಹಂತವಾಗಿ ಈಡೇರಿಸಲಿದೆ' ಎಂದು ಅವರು ತಿಳಿಸಿದರು.

ದಣಿವರಿಯದ ಧರಣಿ

ಕನಿಷ್ಠ ವೇತನ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದು, ಮಂಗಳವಾರ ರಾತ್ರಿ ಪ್ರತಿಭಟನಾ ಸ್ಥಳದಲ್ಲಿ ಮಲಗಿದ್ದರು.

ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

RAJAJINAGAR PARENTS' EDUCATION SOCIETY
CA-2, 69TH CROSS, 5TH BLOCK, RAJAJINAGAR, BANGALORE –10
Applications are invited for the following posts, Apply on or before 06.02.2025

RPES JNANA SARASWATHI PUBLIC SCHOOL
(Affiliated to CBSE, code 830887)
PHONE NO.: 7022278002/ 7022278003
Resumes may be sent to rpes.cbse@gmail.com

Subject	Qualification
English	B.A. B.Ed
Kannada	B.A..B.Ed
Hindi	B.A..B.Ed
Mathematics	B.Sc.B.Ed
EVS	B.Sc.B.Ed
Social Science	B.A, B.Ed
Pre-primary	Graduation with NTT/MTT
Office Assistant	Graduate with good spoken English & Computer Skills
Computer	B.Sc (Computer Science)

RPES JNANA VIKASA HIGH SCHOOL (STATE BOARD)
PHONE NO : 9449955975
Resumes may be sent to rpajvhs@gmail.com

Social Science	B.A., B.Ed with 5 years experience
Mathematics	B.Sc, B.Ed with 5 years exp. (should also teach physics)
Computer Teacher	B.Com, B.C.A., with prior office administration experience

GOLDEN RAY INTERNATIONAL PUBLIC SCHOOL, GORINABELE CAMPUS (NELAMANGALA) (CBSE)
PHONE NO : 9538247010
Resumes may be sent to kalakv1024@gmail.com

Mathematics (Primary)	B.Sc.B.Ed
English (Primary)	B.A. B.Ed
Pre-primary	Graduation with NTT/MTT

President, RPES, Rajajinagar, Bangalore.

REQUIRED
PRINCIPAL
VICE-PRINCIPAL
TEACHERS FOR ALL SUBJECTS
Primary/ Higher Primary / High School
PE / COMPUTER INSTRUCTORS and OFFICE ASSISTANTS
Attractive Salary, P.F & ESIC for deserving candidates, Pick up & drop from Nelamangala to Jalahalli Cross
Send your resumes to bmnrequest@gmail.com or Whatsapp to 9513333834
Walk-in Interview Directly on working days with Original marks cards and a set of xerox copies between 11a.m. to 2:30p.m. Makali, Alur Road,
SRUSHTI PUBLIC SCHOOL (Recg. by Govt. of Karnataka)
B.M.N PUBLIC SCHOOL (Affiliated to CBSE, New Delhi)
Makali, Alur Road, Dasanapura (H), Near Himalaya Drug Co., (3 Kms from Jindal), Bengaluru North -562162.
Ph: 9513333834 / 8123333677

JYOTI NIVAS PRE-UNIVERSITY COLLEGE
HOSUR ROAD, BANGALORE-95
Ph: 080-25506100
WE ARE HIRING
Wanted Passionate, Experienced Lecturer for the following subjects.
English, Physics, Mathematics, Accountancy, Business Studies, Economics and Counsellor.
Qualification: Post Graduation with B.Ed Preferred
Apply with detailed resume to: info@jnpuc.org
website: www.jnpuc.org
Last Date to apply: 15th February 2025

IMPACT INSTITUTIONS
Sahakara Nagar, Bangalore
WANTED
FACULTY IN CS
BE with teaching experience
WALK IN INTERVIEW
Walk in with credentials for interview on Saturday, 1st February 2025 from 10 am to 1 pm.
VENUE: IMPACT Campus, Kodigehalli, Sahakaranagar, Bengaluru - 560092
Call: 94487 48297
To schedule your interviews
IMP-24506

REQUIRED PROFESSOR: Physiology, Pathology, OBG, Community Medicine, Repertory, Associate Professor: Anatomy, OBG, Medicine, Asst. Professor: Physiology, Pathology, Surgery Yoga Instructor Contact: Anuradha Homoeopathic Medical College & Hospital, Sy.No. 78/5, BBMP Ward No.70, Srigandha Nagar, Near Hegganahalli Cross, Bengaluru-91. E-Mail : anuradhacollege@gmail.com, / anuradha homoeopathy@ gmail.com, Mob - 9341850234, 9731562744, 9731612344,

EDUCATION
To Place your Classified Ads Contact: 9845114560

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact: +91 9901641752 | +91 9845114560 | +91 9886213331

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.in

Invites applications for the following posts:

A. (a) Assistant Teachers for Pre-Primary School: (ICSE Board) Pay Scale: 21400-53900
Essential Qualification: Bachelor's Degree from a recognized university with a minimum of 55% marks and Diploma in NTT or Montessori Training or Certificate in foundational stage (including ECCE).
Desirable: Previous teaching experience at similar level in School(s) and usage of Technology / ICT in Teaching. Passion to teach children with care.

(b) Teachers For High School Pay Scale: 32600-82000
Subjects: Geography/Hindi.
Essential Qualification: Master's Degree in relevant subject(s) from a recognized university with a minimum of 55% marks and B.Ed., with teaching methods in relevant subject(s).
Desirable: Previous teaching experience at similar level in School(s) and usage of Technology/ICT in Teaching.

B. Teachers (English Medium) (State Board) Pay Scale: 32600-82000
a) Teachers For Primary School:
Subjects: English & Social Science (Regular/Leave Vacancy).
Essential Qualification: Bachelor's Degree from a recognized university with a minimum of 55% marks and B.Ed., with teaching methods in relevant subject(s).
Desirable: Previous teaching experience at similar level in School(s) and usage of Technology/ICT in Teaching.

C. Yoga Teacher Pay Scale: 27000-72500
Essential Qualification: Bachelor's Degree in Yoga from a recognized university with a minimum of 55% marks or Bachelor's Degree in any discipline with Diploma in Yoga from a recognized institution.
Desirable: Previous Teaching Experience at similar level in school(s) Usage of Technology / ICT in Teaching.

D. Dance Teacher Pay Scale: 27000-72500
Essential Qualification: Bachelor's Degree in Performing Arts with a minimum of 55 % marks with one year Teaching experience at school level.

E. Drama Teacher Pay Scale: 27000-72500
Essential Qualification: Any Bachelor's Degree with a minimum of 55% marks with one-year Theatre Teaching experience.
Desirable: Diploma in Theatre / Certificate in Theatre.

F. Lecturers for PU Colleges Pay Scale: 43100-104600
Subjects: English/Physics/Chemistry/Mathematics/Computer Science and Commerce/Sociology(Part Time)
Essential Qualification: Master's Degree in relevant subject from a recognized university with a minimum of 55% Marks and B.Ed., with teaching methods in relevant subject(s).
Desirable: Previous Teaching experience at similar level in College(s) and usage of technology/ICT in teaching, web content management

G. Office Assistants (Accounts) Pay Scale: 21400-53900
Essential Qualification: Bachelor's Degree in Commerce, qualified in Tally (ERP9.0) operations; and Proficient in MS office & related computer applications.
Desirable: Previous experience in office procedure & accounting and correspondence in Kannada and English. Knowledge of software applications.

H. Computer Technician Consolidated pay of Rs. 35,000
Essential Qualification: Bachelor's Degree in Computer Science/Computer Applications from a recognized University with a minimum of 55% marks or Bachelor's Degree from a recognized University with a minimum of 55 % and Diploma in Hardware Maintenance/ Computer Applications.
Desirable: Previous experience of working in Computer Lab/ Hardware maintenance in educational institution(s) and knowledge of software applications.

I. Counsellor Consolidated pay of Rs.35,000
Essential Qualification: Master's Degree in Counseling Psychology / Clinical Psychology from a recognized university with a minimum of 55% Marks.
Desirable: Basic Computer Skills.

1. The regular posts carry scales of pay and allowances such as HRA at 10%, Fixed Travel allowance. Besides this, contribution towards PF and Gratuity as terminal benefits, Health Insurance cover.
2. Applications with BIO-DATA and copies of certificates of their qualifications and experience etc., should reach the Chief Executive, MES at the above address on or before 15.02.2025 duly superscribing the envelope with "Application for the post of ________________".
3. Candidates with experience are preferred.
4. Competency in ICT enabled teaching is desirable.
5. All posts are tenable in any of the MES Institutions and are transferable.
6. Decision of the selection committee is final.
7. Resorting to any sort of influence will be deemed as a disqualification of the candidature.
8. Download the application form from the MES website: https://mesinstitutions.in

Advt. No. MES/19/ADM-1/2025 Dated 29.01.2025

CHIEF EXECUTIVE

REPUTED SCHOOL at Tumkur Road running ICSE & CBSE requires experienced PRINCIPAL cum MANAGING DIRECTOR (Lady) with at least 5 years of experience in both Teaching & Administration. Contact: 9008616419. Mail: ashakashyap1380@gmail.com

NIRMAN INTERNATIONAL PUBLIC SCHOOL (CBSE), Near Automated RTO,7th Block, Vishweshwaraiah Layout, Bangalore-91 Requires Qualified, Experienced TEACHERS for All Subjects, from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

ST. PHILOMENA'S English School (ICSE) Vidyaranyapura, Bangalore-560097. TEACHERS & OFFICE STAFF RECRUITMENT: We are hiring passionate and dedicated professionals to join our esteemed institution. Positions Available: Teaching Staff: All subjects (Nursery to Grade X) Office Staff. Eligibility Criteria: Candidates must hold a relevant degree in education. Prior teaching experience preferred for teaching positions. Strong communication skills and a commitment to excellence in education. Why Join Us? A reputed ICSE institution. Supportive and professional working environment. How to Apply: Interested candidates can send their updated CV and application to: st.philomena.vrp@gmail.com 9945761253/ 9901197858.

mLAC Excellence in Education Since 1972
Maharani Lakshmi Ammanni College for Women Autonomous
(Permanently affiliated to Bengaluru Central University)
18th Cross, Malleswaram, Bangalore – 560 012
Ph: 080 23349311, 23565727 E: mlacw@mlacw.org
IMMEDIATE FACULTY RECRUITMENT
Applications are invited for the post of
1. **Assistant/Associate Professors** in the Department of Computer Science, with MCA/M.E/M.Tech.(Preferably NET/SLET/Ph.D.) Salary based on Experience/Qualification.
2. **Front Office Executive** Candidate with any Degree, fluent communication in English & Kannada. Resumes to be sent to **E-mail: mlacw@mlacw.org within 8 days** from the date of advertisement.

PARIJATHA EDUCATIONAL SOCIETY (R)
Shivaramaiah Garden, Venkateshpura, Bengaluru-560 045
WANTED TEACHING STAFF
Wanted the following Teaching Staff for English Medium Aided Primary and High School from the Acadmic Year 2025-26.
- Primary School : 5 Vacancy - Qualification D.Ed.
- High School : B.Sc, B.Ed(Cbz)-01, PCM-01, BA,B.Ed -1, Phy-Edn (B.P.Ed)-01.
- * Attractive salary will be paid till the approval of appointment.

Apply to The Secretary before 05-02-2025 & attend the Interview On 08-02-2025 (Saturday) at 9.00 am. Mobile: No:- 9341245718

SRI-AYYAPPAN EDUCATIONAL INSTITUTIONS JAYAMAHAL BANGALORE-46 Phone:23433008 9895171155 WANTED: Trained Graduates TEACHERS: For KANNADA, SCIENCE, ENGLISH, SOCIAL SCIENCE, COMPUTER SCIENCE, PHYSICAL EDUCATION.

REPUTED SCHOOL in South Bangalore State-Syllabus seeks: Experienced VICE PRINCIPAL, HIGH SCHOOL TEACHERS (Math, Science, English) PRIMARY TEACHER, Cricket coach, Part-time yoga, Karate, Dance and Music Teachers. Contact-6362999642

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

GEMS- ET @ 2002
THE PRESIDENCY GROUP OF INSTITUTIONS
Gurukula, Amarapura Road, Sira-572137, Tumkur (Dist), Karnataka
Co-Educational English Medium, secular Day Cum Residential Institutions with a strength of around 6000 students located on a 20 Acre campus in the heart of SIRA city, 120KM from Bangalore on NH4, requires qualified, competent & experienced staff. Those fluent in English, effective in teaching / administration and looking for long-term association with the institution can apply for the following posts.
PRINCIPALS
Trained Post Graduates with minimum 05 years experience in the said post in reputed ICSE/CBSE Schools & PU Colleges with proven track record.
Salary: Rs. 100,000 - 1,50,000 pm based on competency.
THE PRESIDENCY PUBLIC SCHOOL - CBSE (No.830710)
SECONDARY TEACHERS
Trained Post Graduates/ Graduates in Science, Mathematics, English, Social Studies, Humanities & Computer Science with min. 2 years Experience & a proven track record of teaching in CBSE classes IX & X.
Salary: Rs. 50,000 -1,00,000 pm based on competency.
MIDDLE SCHOOL TEACHERS
Trained Science / Arts / Humanities Graduates to teach VI - VIII classes with minimum 2 years experience.
Salary: Rs.35,000 - 60,000 pm based on competency.
PRIMARY TEACHERS
Graduates with D.Ed / B.Ed to teach I to V classes with min. 2 years experience.
Salary: Rs.30,000 - 50,000 pm based on competency.
NURSERY TEACHERS
Graduates with Nursery / Montessori Training with min. 2 years experience.
Salary: Rs.20,000 - 35,000 pm based on competency.
THE PRESIDENCY PUBLIC SCHOOL - ICSE (KA-118)
MIDDLE / HIGH SCHOOL TEACHERS
Trained Post Graduates/ Graduates in English, History, Geography, Physics, Chemistry, Biology, Mathematics & Computer Application with Min. 2 years experience & a proven track record of teaching in ICSE Classes.
Salary: Rs.50,000 - 1,00,000 pm based on competency.
PRESIDENCY PU COLLEGE (UU0228)
LECTURERS
Trained Post Graduates in Physics, Chemistry, Biology, Mathematics , Computer Science &, English with min. 2 years Exp. & a proven track record of teaching in English medium classes and competency to train students for IIT-JEE, NEET & CET.
Salary: Rs.75,000 - 1,25,000 pm based on competency.
INDIAN LANGUAGE TEACHERS
Indian Language Teachers PRT/TGT/PGT in Kannada & Hindi with min. 2 years Exp.
Salary : State Scale
OTHERS
- Student Counselor
- Physical Education Teacher
- Fine Arts / Crafts
- Librarian
- Sports Coaches (Games/Swimming)
- Life Skill Instructors
- Lab Instructors
- Wardens (Gents/Ladies)

Salary : State Scale
Food & Accommodation will be provided on request
INTERVIEWS
Please send a hand written application with CV & Recent Passport Size photograph within 15 days to the Administrator at the above mentioned address. Short listed candidates will be called for interview. Preference will be given to female teachers & couples. Interviews/ Demo will be held in the month of February 2025.
tppsresource@gmail.com

CORDIAL HIGH SCHOOL
8th Main, Vijayanagar West, Nagarbhavi Main Road, Bangalore - 560040.
REQUIRED EXPERIENCED ASSISTANT HEADMISTRESS
- Min. 5 to 8 years experience,
- Preferably with graduation in M.A/ M.Sc/ M.Com- B.Ed/ M.Ed.

Qualified / Trained / Experienced Teachers to teach Pre-Nursery to 10th Grade.
1) English, Mathematics , Science for High school
2) Mathematics, Abacus, Computer and English for Primary.
Minimum 3 to 5 years experience,
* Preferably with graduation in B.A/B.COM/B.Sc/ M.A/ M.Sc/ M.Com/ B.Ed/ M.Ed.
3) Pre-Primary Teachers with Graduation -NTT/MTT/D.Ed
Proficiency in the subject and good communication in English is a must.
Contact
080 2335 2646
9480420265
hr.cordialhighschool@gmail.com
Eligible candidates can send your resume by mail or submit in person to the Principal along with recent photograph within 15 days from the date of advertisement.

General

"OFFICE EXECUTIVE for`Office and`Marketing (Dental Equipments Pvt.Ltd Company) preferably Female's-with MBA`or`any Graduation`with good`English, Hindi`speaking &`Computer skills.Office Located at`South Bangalore. Contact: 9844016274"

WANTED LIBRARIAN on Contract Basis. Freshers/ Experience at Vijaya Bank Layout Bannerghatta Road. Contact- 9900134411

Accounts & Finance

REQUIRED FEMALE Accountant with experience of Tally and Office Assistance working timings 9.30 am to 6.00 pm Age 20 to 40 yrs walk in interview on 31.1.2025, between 4.30 to 6.30 pm at CBM IMPEX No 45, KK Complex 1st Floor, Shankarmutt Road, Basavangudi, Bangalore 560004. Call: 9343088815/ 08026677889

REAL ESTATE SELLING

Industrial & Factory

Tumkur Road

SALE 100 Acres Dabespet 9.5 Acres Built to Suit 12 Acres NH-4 Facing. NAIK: 9141326819

Sites

J P Nagar

30X40 B Khata site for immediate sale. East facing site with civic amenities in JP Nagar 8th phase near B.K. Circle. Genuine buyers only. Ph: 9844455628

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, MOHAMED SALAUDDIN, # 55, Eshwara Temple Road, Chikkabanavara, Banglore-560090, have changed my name to MOHAMMED SALAHUDDIN vide affidavit dated 27-01-2025. Before notary N MAHESHA, Chikkabanavara, Banglore

CHANGE OF NAME
I, SEBASTIAN VISHWAS KUMAR B S aged about 29 years, S/o. Shiva Kumar B.L, Residing at No. 116, V.M. Villa, 10th Cross, Gangondanahalli, Bangalore 560 039, have changed my name from SABATIAN JOE ANTO MARIO VISHWAS to SEBASTIAN VISHWAS KUMAR B S vide Affidavit dated 23-04-2024 before advocate & Notary Deepa .M, at Bengaluru.

BUSINESS

Business to Business

Hotel & Restaurant

FOR RENT
RVB Licence (Beer) in Bangalore City Limits is for Rent For More Details Contact: 9483912444

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

Machinery & Tools

WE SPECIALIZE in Export Promotion of all kinds of Machine Tools & Accessories. MSMEs interested to export, send product details. T&C applicable. Email: boostexports@gmail.com WhatsApp: 9590707677 (Only text)

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ. ಶೀಲಾ.ಡಿ ಬಿನ್ ಲೇಟ್ ಶ್ರೀ. ದೊರೈಸ್ವಾಮಿ, ವಯಸ್ಸು ಸುಮಾರು 68 ವರ್ಷ, ವಿಳಾಸ ನಂ. 537, 18ನೇ ಅಡ್ಡರಸ್ತೆ, 1ನೇ ಬ್ಲಾಕ್, ಪೂಜಾ ಬೇಕರಿ ಹತ್ತಿರ, ಆರ್.ಟಿ.ನಗರ, ಬೆಂಗಳೂರು 560032 ಮತ್ತು ಶ್ರೀಮತಿ. ಗೀತಾ ಅಲಿಯಾಸ್ ಗೀತಾ ಜೊವ್ ಬಿನ್ ಲೇಟ್ ಶ್ರೀ. ದೊರೈಸ್ವಾಮಿ, ಕೋಂ. ಜಾನ್ ಜೊವ್, ವಯಸ್ಸು ಸುಮಾರು 64 ವರ್ಷ, ವಿಳಾಸ ನಂ. 248, 11ನೇ ಅಡ್ಡರಸ್ತೆ, 1ನೇ ಬ್ಲಾಕ್, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಆರ್.ಟಿ.ನಗರ, ಬೆಂಗಳೂರು 560032 ಇವರುಗಳು, ಕೆಳಕಂಡ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ ಷೆಡ್ಯೂಲ್-ಪ್ರಾಪರ್ಟಿ ಎನ್ನಲಾಗುವ, 1ನೇ ಬ್ಲಾಕ್, ಮಠದಹಳ್ಳಿ, ಆರ್.ಟಿ.ನಗರ ಅಂಚೆ, ಬೆಂಗಳೂರು 560032 ವಿಳಾಸದಲ್ಲಿರುವ ಮತ್ತು ಬಿಬಿಎಂಪಿ ವಾರ್ಡ್ ನಂ. 46ರ ವ್ಯಾಪ್ತಿಗೊಳಪಡುವ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಮತ್ತು ಸದರಿ ಸ್ವತ್ತು ಇವರ ಸ್ವಾಧೀನಾನುಭವದಲ್ಲಿ ಇರುತ್ತದೆ.

ಮುಂದುವರಿದಂತೆ, ಸದರಿ ಷೆಡ್ಯೂಲ್ ಪ್ರಾಪರ್ಟಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ದಿನಾಂಕ 20.06.2013ರ ಕ್ರಯಪತ್ರದ ಮೂಲಕ ನಮಗೆ ಲಭಿಸಿರುತ್ತದೆ ಮತ್ತು ಸದರಿ ಸ್ವತ್ತು ದಿನಾಂಕ 21.06.2013 ರಂದು ಬೆಂಗಳೂರು ಜಿಲ್ಲಾ ಹೆಚ್ಚುವರಿ ಜಿಲ್ಲಾ ನೋಂದಣಿ ಕಚೇರಿಯಲ್ಲಿ ಡಾಕ್ಯೂಮೆಂಟ್ ನಂ. ಬಿಡಿಎ-1-00813-2013-14 ಮುಖೇನ ನೋಂದಣಿ ಆಗಿದೆ ಹಾಗೂ ಸಿ.ಡಿ.ನಂ. ಬಿಡಿಎಡಿ191 ರಲ್ಲಿ ದಾಖಲಾಗಿರುತ್ತದೆ ಎಂದು ನಮ್ಮ ಕಕ್ಷಿದಾರರು ತಿಳಿಸಿದ್ದಾರೆ.

ಇದೀಗ ನಮ್ಮ ಕಕ್ಷಿದಾರರ ಪರವಾಗಿ ತಿಳಿಸುವುದು ಏನೆಂದರೆ, ದಿನಾಂಕ 21.06.2013 ರಂದು ಬೆಂಗಳೂರು ಜಿಲ್ಲಾ ಹೆಚ್ಚುವರಿ ಜಿಲ್ಲಾ ನೋಂದಣಿ ಕಚೇರಿಯಲ್ಲಿ ಡಾಕ್ಯೂಮೆಂಟ್ ನಂ. ಬಿಡಿಎ-1-00813-2013-14 ಮುಖೇನ ನೋಂದಣಿ ಆಗಿರುವ ಮತ್ತು ಸಿ.ಡಿ.ನಂ. ಬಿಡಿಎಡಿ191 ರಲ್ಲಿ ದಾಖಲಾಗಿರುವ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ದಿನಾಂಕ 20.06.2013ರ ಕ್ರಯಪತ್ರವು ಕಾಣಿಸುತ್ತಿಲ್ಲ ಅಥವಾ ಕಳೆದಿರುತ್ತದೆ. ಈ ಕುರಿತಂತೆ ನಮ್ಮ ಕಕ್ಷಿದಾರರಾದ ಶ್ರೀಮತಿ. ಶೀಲಾ ಬಿನ್ ಲೇಟ್ ಶ್ರೀ. ಎ.ಬಿ.ದೊರೈಸ್ವಾಮಿ ಮತ್ತು ಶ್ರೀಮತಿ. ಗೀತಾ ಅಲಿಯಾಸ್ ಗೀತಾ ಜೊವ್ ಬಿನ್ ಲೇಟ್ ಶ್ರೀ. ಎ.ಬಿ.ದೊರೈಸ್ವಾಮಿ ಇವರುಗಳು, 18.01.2025 ರಂದು ಬೆಂಗಳೂರು ನಗರ ಪೊಲೀಸ್‌ರಲ್ಲಿ ಹಕ್ಕುಪತ್ರಗಳು ಕಳೆದಿರುವ ಬಗ್ಗೆ ದೂರು ದಾಖಲಿಸಿದ್ದಾರೆ.

ಈ ಮೇಲೆ ಉಲ್ಲೇಖಿಸಲಾಗಿರುವ ಮೂಲ ದಾಖಲಾತಿಗಳು ಯಾರಿಗಾದರೂ ಸಿಕ್ಕಿದಲ್ಲಿ, ದಯವಿಟ್ಟು ಅವುಗಳನ್ನು ಕೆಳಕಂಡ ಸಹಿದಾರರಿಗೆ ತಲುಪಿಸಬೇಕೆಂದು ಕೋರಲಾಗಿದೆ ಹಾಗೂ ಒಂದು ವೇಳೆ ಈ ಪ್ರಕಟಣೆಯು ಪ್ರಕಟಗೊಂಡ ಬಳಿಕವೂ, ಮೇಲೆ ತಿಳಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಅನ್ಯ ವ್ಯಕ್ತಿಗಳು ಯಾರಾದರು ಸದರಿ ಮೂಲ ದಾಖಲಾತಿಗಳ ಮೂಲಕ ಯಾವುದೇ ವ್ಯವಹಾರ ಮಾಡಿದಲ್ಲಿ, ಅಂತಹ ವಹಿವಾಟು ನಮ್ಮ ಕಕ್ಷಿದಾರರ ಮೇಲಾಗಲಿ ಅಥವಾ ಕೆಳಕಂಡ ಸ್ವತ್ತಿನ ಮೇಲಾಗಲಿ ಯಾವುದೇ ನಿರ್ಬಂಧ ರೂಪಿಸುವುದಿಲ್ಲ ಮತ್ತು ಹೀಗೆ ಮಾಡುವವರೇ ಅದರ ಪರಿಣಾಮ ಮತ್ತು ಆಗುಹೋಗುಗಳಿಗೆ ಹೊಣೆಯಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

1ನೇ ಬ್ಲಾಕ್, 11ನೇ ಅಡ್ಡರಸ್ತೆ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಮಠದಹಳ್ಳಿ, ಆರ್.ಟಿ.ನಗರ ಅಂಚೆ, ಬೆಂಗಳೂರು 560032 ವಿಳಾಸದಲ್ಲಿ ಸ್ಥಿತಗೊಂಡಿರುವ ಮುನಿಸಿಪಲ್ ನಂ. 248, ಪಿಐಡಿ ನಂ. 97-1-248, ಸೈಟ್ ನಂ. 248 ಹೊಂದಿರುವ, ಪೂರ್ವ-ಪಶ್ಚಿಮ 50 ಅಡಿ ಮತ್ತು ಉತ್ತರ-ದಕ್ಷಿಣ 30 ಅಡಿ, ಒಟ್ಟಾರೆಯಾಗಿ 1500 ಚ.ಅ. ವಿಸ್ತೀರ್ಣವುಳ್ಳ ನಿವೇಶನ ಮತ್ತು ಅದರಲ್ಲಿ ನಿರ್ಮಿಸಲಾಗಿರುವ 800 ಚ.ಅ. ವಿಸ್ತೀರ್ಣದ ಕಟ್ಟಡವು ಸೇರಿದಂತೆ ಎಲ್ಲಾ ಹಕ್ಕುಗಳು, ಸೌಕರ್ಯಗಳು ಮತ್ತು ಅಪರ್ಟನನ್ಸ್‌ಗಳು ಮತ್ತು ಎಲ್ಲಾ ಭೂಭಾಗಗಳು ಸೇರಿರುತ್ತವೆ ಹಾಗೂ ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 273, ಉತ್ತರಕ್ಕೆ: ಸೈಟ್ ನಂ. 249, ದಕ್ಷಿಣಕ್ಕೆ: ಸೈಟ್ ನಂ. 247.

ಗೋವಿಂದರಾಜ.ಬಿ, ವಕೀಲರು, ನಂ. 55, ಗುರುಕೃಪಾ, 5ನೇ ಮುಖ್ಯರಸ್ತೆ, ಎಂಎಸ್‌ಎಚ್ ಬಡಾವಣೆ, ಆನಂದನಗರ, ಬೆಂಗಳೂರು 560024 ಮೊಬೈಲ್: 9886773678

PUBLIC NOTICE

This is to inform the general public that my client intends to purchase the immovable property mentioned and described in the schedule below from **Sri. K. H. Ramanjinappa**, son of Sri. Hanumappa, (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/ demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the below mentioned properties situated at Sonnappanahalli Village, Kasaba Hobli, Doddaballapura Taluk, Bengaluru Rural District:

Sy. No.	Owners	Extent		Boundaries			
		Acres	Guntas	East by	West by	North by	South by
46/2	Sri K.H.Ramanjinappa son of Sri Hanumappa	01	19	Adinarayana Hosahalli Village Boundary	Survey No. 46/3.	Survey No. 46/1	Survey No. 48/1
48/1	Sri K.H.Ramanjinappa son of Sri Hanumappa	02	16	Adinarayana Hosahalli Village Boundary	Survey No. 49/4	Survey Nos. 46/2 & 46/3	Survey No.48/2

Place : Bengaluru
Date: 28-01-25

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001 Ph.: 080 22863885
email: vinay@vinaykademane.in

ನೀತಿ ನಿರೂಪಣಾ ಸಮಿತಿ ವರದಿ ಬಳಿಕ ಕ್ರಮ: ಹೊರಟ್ಟಿ

ಪ್ರಜಾವಾಣಿ ವಾರ್ತೆ

ಬಸವರಾಜ ಹೊರಟ್ಟಿ

ಶಿರಸಿ: 'ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮತ್ತು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಪ್ರಕರಣವನ್ನು ಪರಿಷತ್ತಿನ ನೀತಿ ನಿರೂಪಣಾ ಸಮಿತಿಗೆ ನೀಡಲಾಗಿದೆ. ವಿಡಿಯೊ ಸೇರಿ ಇತರ ದಾಖಲೆ ಪರಿಶೀಲಿಸಿ ಸಮಿತಿಯು ವರದಿ ನೀಡಿದ ಬಳಿಕ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

'ಪರಿಷತ್ ಉಪಸಭಾಪತಿಯವರು ಅಧ್ಯಕ್ಷರಾಗಿರುವ ಸದನದ ನೀತಿ ನಿರೂಪಣಾ ಸಮಿತಿಗೆ ಪ್ರಕರಣ ವಹಿಸಲಾಗಿದೆ. ಅದರಲ್ಲಿ ಸಿ.ಟಿ.ರವಿ ಕೂಡ ಸದಸ್ಯರಾಗಿದ್ದರು. ಅವರನ್ನು ಈಗ ಹೊರಗೆ ಇಡಲಾಗಿದೆ. ಸಮಿತಿಯವರು ಸದನದ ಆಡಿಯೊ, ವಿಡಿಯೊ ಪರಿಶೀಲಿಸುವರು. ಮಾಧ್ಯಮದವರೂ ವಿಡಿಯೊ ನೀಡಿದ್ದಾರೆ. ಅದನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗಿದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಸಭಾಪತಿಗಳು ಪಕ್ಷಪಾತ ಮಾಡಬಾರದು. ಸಿ.ಟಿ.ರವಿ ಮತ್ತು ಲಕ್ಷ್ಮೀ ಹೆಬ್ಬಾಳಕರ ಪ್ರಕರಣದಲ್ಲಿ ನಾನು ತೆಗೆದುಕೊಂಡ ನಿರ್ಧಾರಕ್ಕೆ ಬಿಹಾರದ ವಿಧಾನಸಭೆಯಲ್ಲಿ ಶ್ಲಾಘನೆ ವ್ಯಕ್ತವಾಗಿದೆ. ನಿರ್ಧಾರವು ನೂರಕ್ಕೆ ನೂರರಷ್ಟು ಸರಿಯಿದೆ. ಯಾರೇ ಈ ನಿರ್ಧಾರ ತಪ್ಪು ಎಂದರೂ, ಅದು ಅವರ ಅಭಿಪ್ರಾಯ' ಎಂದು ಹೇಳಿದರು.

'ಸಭಾಪತಿ ಎನ್ನುವುದು ಕಾಯಂ ಕುರ್ಚಿಯಲ್ಲ. ಸರ್ಕಾರಗಳು ಬದಲಾದಾಗ ಸಭಾಪತಿಗಳನ್ನು ಇಳಿಸುವುದು ಕೆಟ್ಟ ಸಂಪ್ರದಾಯ. ಅದು ನಮ್ಮ ರಾಜ್ಯದಲ್ಲಿ ರೂಢಿಯಲ್ಲಿದೆ' ಎಂದು ಹೇಳಿದರು

ಜಾತಿ ದೌರ್ಜನ್ಯ: ಶಿಕ್ಷೆ ಪ್ರಮಾಣ ಹೆಚ್ಚಿಸಿ

ಒಂದನೇ ಪುಟದಿಂದ...

'ಈ ಸಮುದಾಯಕ್ಕೆ ಸೇರಿದವರ ಕೊಲೆ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ತನಿಖೆ ತಡ ಆದಷ್ಟೂ, ನ್ಯಾಯಾಲಯಗಳಲ್ಲಿ ವಿಚಾರಣೆ ತಡೆ ಆದಷ್ಟೂ ಸಾಕ್ಷ್ಯ ನಾಶ ಆಗುತ್ತದೆ. ಈ ಪ್ರಕರಣಗಳಲ್ಲಿ ಪುರಾವೆಯ ಹೊರೆ ಆರೋಪಿಗಳ ಮೇಲಿರುತ್ತದೆ. ಆದ್ದರಿಂದ ಶಿಕ್ಷೆ ಪ್ರಮಾಣ ಹೆಚ್ಚಾಗಲೇ ಬೇಕು. ಯಾಕೆ ಆಗುತ್ತಿಲ್ಲ' ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಆರೋಪ ಪಟ್ಟಿ ಶೀಘ್ರವಾಗಿ ಸಲ್ಲಿಸಿ ಸಾಕ್ಷ್ಯಗಳನ್ನು ಪರಿಣಾಮಕಾರಿಯಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಸೂಚಿಸಿದರು.

ಸಭೆಯಲ್ಲಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಸುಧಾಮ್ ದಾಸ್, ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಕಡಿಮೆ ಇದೆ. ಆದರೆ ಕೌಂಟರ್ ಕೇಸ್‌ಗಳಲ್ಲಿ ಶಿಕ್ಷೆ ಪ್ರಮಾಣ ಹೆಚ್ಚಾಗಿದೆಯೇ? ಈವರೆಗೆ ಮೂರು ವಿಶೇಷ ನ್ಯಾಯಾಲಯಗಳಿಗೆ ಮಾತ್ರ ಅನುಮತಿ ಸಿಕ್ಕಿದೆ. ಇನ್ನೂ 24 ವಿಶೇಷ ನ್ಯಾಯಾಲಯಗಳಿಗೆ ಅನುಮತಿ ದೊರೆತಿಲ್ಲ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 'ಈ ವಿಷಯವನ್ನು ಗಮನಿಸುತ್ತೇನೆ. ಉಳಿದ ನ್ಯಾಯಾಲಯಗಳಿಗೆ ಬೇಗ ಅನುಮತಿ ಸಿಗುವ ದಿಕ್ಕಿನಲ್ಲಿ ಗಮನ ಹರಿಸುತ್ತೇವೆ' ಎಂದರು.

ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣದ ನ್ಯಾಯಾಂಗ ತನಿಖೆ ಭವಿಷ್ಯದ ಹುದ್ದೆಗೆ ಮುಳುವಾಯಿತೇ?

ನ್ಯಾ.ದೇಸಾಯಿ ಡಿಬಾರ್ ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ನ್ಯಾ. ಪಿ.ಎನ್. ದೇಸಾಯಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದ ತನಿಖೆ ನಡೆಸಲು ರಾಜ್ಯ ಸರ್ಕಾರ ನೇಮಿಸಿರುವ ಏಕಸದಸ್ಯ ನ್ಯಾಯಾಂಗ ಆಯೋಗದ ಮುಖ್ಯಸ್ಥ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರನ್ನು ಮೂರು ವರ್ಷ ಕೇಂದ್ರ ಸರ್ಕಾರದ ಎಲ್ಲ ನೇಮಕಾತಿಗಳಿಂದ ಡಿಬಾರ್ ಮಾಡಲಾಗಿರುವ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ನ್ಯಾಯಮೂರ್ತಿ ಪದ್ಮರಾಜ ನೇಮಿಚಂದ್ರ ದೇಸಾಯಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ದೇಸಾಯಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ, 'ದೇಸಾಯಿಯವರು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ. ಇವರನ್ನು ಹೈದಾರಾಬಾದ್ ಪೀಠದ ಸಿಎಟಿ (ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ) ನ್ಯಾಯಾಂಗ ಸದಸ್ಯರನ್ನಾಗಿ ನೇಮಕ ಮಾಡಲಾಗಿತ್ತು. ಇದಕ್ಕಾಗಿ ಅವರು ರಾಷ್ಟ್ರಪತಿ ಮತ್ತು ಭಾರತ ಸರ್ಕಾರಕ್ಕೆ ಧನ್ಯವಾದ ತಿಳಿಸಿ ಆಗಸ್ಟ್ 14ರಂದು ಪತ್ರ ಬರೆದಿದ್ದರು. ಈ ಪತ್ರದಲ್ಲಿ ಅವರು, ತಾವು ಮುಡಾ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸರ್ಕಾರ ನೀಡಿರುವ ಜವಾಬ್ದಾರಿ ನಿಭಾಯಿಸುತ್ತಿರುವುದನ್ನು ತಿಳಿಸಿದ್ದರು. ಈ ಕೆಲಸದ ಜವಾಬ್ದಾರಿ ಆರು ತಿಂಗಳಲ್ಲಿ ಮುಗಿಯಲಿದೆ. ಹೀಗಾಗಿ, ಸದ್ಯಕ್ಕೆ ಕೇಂದ್ರ ಸರ್ಕಾರದ ನೇಮಕಾತಿ ನಿರಾಕರಿಸುವುದು ನನಗೆ ಅನಿವಾರ್ಯವಾಗಿದೆ ಎಂದು ವಿವರಿಸಿದ್ದರು' ಎಂದು ತಿಳಿಸಿದರು.

'ದೇಸಾಯಿ ಅವರು ಸಿಎಟಿ ನ್ಯಾಯಾಂಗ ಸದಸ್ಯ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಲ್ಲಿಸಿದ ಆರು ತಿಂಗಳವರೆಗೂ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಏತನ್ಮಧ್ಯೆ, ರಾಜ್ಯ ಸರ್ಕಾರ ಮುಡಾ ಹಗರಣದ ತನಿಖೆಗಾಗಿ ದೇಸಾಯಿ ನೇತೃತ್ವದಲ್ಲಿ ಏಕಸದಸ್ಯ ನ್ಯಾಯಾಂಗ ಆಯೋಗ ರಚಿಸಿತ್ತು. ಈ ಬೆಳವಣಿಗೆಯ ನಂತರ ಅವರನ್ನು ಸಿಎಟಿ ಸದಸ್ಯರನ್ನಾಗಿ ನೇಮಿಸಲಾಗಿದೆ ಮತ್ತು ಈ ದಿಸೆಯಲ್ಲಿ ನೇಮಕಾತಿ ಪತ್ರವನ್ನು ಕಳುಹಿಸಲಾಗಿತ್ತು' ಎಂದರು.

'ಈ ಪತ್ರಕ್ಕೆ ಪ್ರತಿಯಾಗಿ ದೇಸಾಯಿ ಅವರು, ಮುಡಾ ಹಗರಣದ ತನಿಖೆಗೆ ಆರು ತಿಂಗಳ ಗಡುವು ನೀಡಲಾಗಿದೆ. ಅದು ಮುಗಿದ ಬಳಿಕ ಸಿಎಟಿ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ದೇಸಾಯಿ ಅವರನ್ನು ಸಿಎಟಿ ನ್ಯಾಯಾಂಗ ಸದಸ್ಯರನ್ನಾಗಿ ನೇಮಕ ಮಾಡಿರುವುದರಿಂದ ಡಿಬಾರ್ ಮಾಡಲಾಗಿದೆ ಎಂಬ ಮಾಹಿತಿಯನ್ನು ಮಾಧ್ಯಮಗಳು ಪ್ರಕಟಿಸಿವೆ. ಅಂತೆಯೇ, ದೇಸಾಯಿ ಅವರನ್ನು ಡಿಬಾರ್ ಮಾಡುವುದಕ್ಕೂ ಮುನ್ನ ನೋಟಿಸ್ ಕೂಡಾ ನೀಡಿಲ್ಲ. ಹೀಗಾಗಿ, ಡಿಬಾರ್ ಆದೇಶಕ್ಕೆ ತಡೆ ನೀಡಬೇಕು' ಎಂದರು.

ಇದನ್ನು ಆಲಿಸಿದ ನ್ಯಾಯಪೀಠ, ಪ್ರಕರಣದ ಪ್ರತಿವಾದಿಯಾಗಿರುವ ಸಾರ್ವಜನಿಕ ಕುಂದುಕೊರತೆ, ಪಿಂಚಣಿ ಹಾಗೂ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಫೆಬ್ರುವರಿ 6ಕ್ಕೆ ಮುಂದೂಡಿದೆ.

ಡಿಬಾರ್ ಮಾಡುವ ನಿರ್ಧಾರವನ್ನು ಸಚಿವ ಸಂಪುಟದ ನೇಮಕಾತಿ ಸಮಿತಿಯು ಕೈಗೊಂಡಿತ್ತು. ಇದರನ್ವಯ ನ್ಯಾಯಮೂರ್ತಿ ದೇಸಾಯಿ ಅವರನ್ನು ಸರ್ಕಾರದ ಯಾವುದೇ ಸ್ವಾಯತ್ತ, ಶಾಸನಬದ್ಧ ಅಥವಾ ನಿಯಂತ್ರಣ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಲು 2024ರ ಅಕ್ಟೋಬರ್ 21ರಿಂದ ಪೂರ್ವಾನ್ವಯವಾಗುವಂತೆ ಡಿಬಾರ್ ಮಾಡಿ ಆದೇಶಿಸಲಾಗಿದೆ.

ಒಪ್ಪಿತ ಸಂಬಂಧ ದೌರ್ಜನ್ಯಕ್ಕೆ ದಾರಿಯಲ್ಲ: ಹೈಕೋರ್ಟ್

'ಸಹಮತದ ಲೈಂಗಿಕ ಸಂಬಂಧ ಎಂದಾಕ್ಷಣ ಸಂಗಾತಿ ಮಹಿಳೆಯ ಮೇಲೆ ದೌರ್ಜನ್ಯ ಎಸಗಿ, ಹಿಂಸಿಸಿ, ಸ್ತ್ರೀದ್ವೇಷ ಪ್ರಕಟ ಮಾಡಿದರೆ ಅಂತಹುದಕ್ಕೆಲ್ಲಾ ವಿನಾಯಿತಿ ನೀಡಲು ಸಾಧ್ಯವಿಲ್ಲ' ಎಂಬ ಕಠಿಣ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಈ ಸಂಬಂಧ ಸರ್ಕಲ್ ಇನ್‌ಸ್ಪೆಕ್ಟರ್‌ವೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದೆ.

'ನನ್ನ ವಿರುದ್ಧ ಅತ್ಯಾಚಾರ ಸೇರಿದಂತೆ ಐಪಿಸಿಯ ವಿವಿಧ ಕಲಂಗಳಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ 56 ವರ್ಷದ ಸರ್ಕಲ್ ಇನ್‌ಸ್ಪೆಕ್ಟರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

'ಸರ್ಕಲ್ ಇನ್‌ಸ್ಪೆಕ್ಟರ್ ವಿರುದ್ಧದ ಅತ್ಯಾಚಾರ ಆರೋಪವನ್ನು ಕೈಬಿಡಲಾಗಿದೆ' ಎಂದು ಹೇಳಿರುವ ನ್ಯಾಯಪೀಠ, '2021 ನವೆಂಬರ್ 11ರಂದು ಆರೋಪಿಯು 30 ವರ್ಷದ ಸಂತ್ರಸ್ತೆಯ ಜೊತೆ ಯಾವ ರೀತಿ ವರ್ತಿಸಿದ್ದಾರೆ ಎಂಬುದನ್ನು ದೋಷಾರೋಪ ಪಟ್ಟಿಯಲ್ಲಿ ಸಾದ್ಯಂತವಾಗಿ ವಿವರಿಸಲಾಗಿದೆ. ಹೀಗಾಗಿ, ಕೊಲೆ ಯತ್ನ, ಹಲ್ಲೆ ಮತ್ತು ಬೆದರಿಕೆ ಆರೋಪಗಳನ್ನು ರದ್ದುಪಡಿಸಲು ಸಾಧ್ಯವಿಲ್ಲ' ಎಂದು ತಿಳಿಸಿದೆ.

'ಇಬ್ಬರ ಮಧ್ಯೆ ಒಪ್ಪಿತ ಲೈಂಗಿಕ ಸಂಬಂಧ ಇರುವುದು ವೇದ್ಯವಾಗಿದೆ. ಆದರೆ, ಸಹಮತದ ಲೈಂಗಿಕ ಕ್ರಿಯೆ ಇದೆ ಎಂದ ಮಾತ್ರಕ್ಕೆ ಆರೋಪಿಯು ಆಕೆಯ ಮೇಲೆ ಎಸಗಿರುವ ದೌರ್ಜನ್ಯ ಹಾಗೂ ವ್ಯಕ್ತಪಡಿಸಿರುವ ಮಹಿಳಾ ವಿರೋಧಿ ನಡೆಯನ್ನು ಮನ್ನಿಸಲಾಗದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: 'ಸಂತ್ರಸ್ತೆಯು ಪೊಲೀಸ್ ಕಾನ್‌ಸ್ಟೆಬಲ್ ಪತ್ನಿ ಹಾಗೂ ಸಾಮಾಜಿಕ ಕಾರ್ಯಕರ್ತೆ. 2018ರ ಆರಂಭದಲ್ಲಿ, ಯಾವುದೋ ಕೇಸಿನ ಸಲುವಾಗಿ ಸಾರ್ವಜನಿಕರ ಜೊತೆ ಗ್ರಾಮಾಂತರ ವೃತ್ತ ಕಚೇರಿಗೆ ಹೋದಾಗ ಪರಿಚಯವಾಗಿದ್ದ ಆರೋಪಿ ಸರ್ಕಲ್ ಇನ್‌ಸ್ಪೆಕ್ಟರ್ ನಂತರ ಈ ಮಹಿಳೆಯೊಂದಿಗೆ ಫೋನ್‌ನಲ್ಲಿ ಸಂಪರ್ಕದಲ್ಲಿದ್ದರು ಮತ್ತು ಲೈಂಗಿಕ ಸಂಬಂಧ ಬೆಳೆಸಿದ್ದರು' ಎಂಬುದು ದೋಷಾರೋಪ ಪಟ್ಟಿಯಲ್ಲಿನ ವಿವರ.

ಏತನ್ಮಧ್ಯೆ ಮಹಿಳೆಯು, 'ಬಲವಂತದಿಂದ ಲೈಂಗಿಕ ಸಂಪರ್ಕ ನಡೆಸುತ್ತಿದ್ದಾರೆ' ಎಂದು ಸರ್ಕಲ್ ಇನ್‌ಸ್ಪೆಕ್ಟರ್ ವಿರುದ್ಧ ದೂರು ನೀಡಿದ್ದರು. ಇದರಿಂದ ಕುಪಿತಗೊಂಡಿದ್ದ ಸರ್ಕಲ್ ಇನ್‌ಸ್ಪೆಕ್ಟರ್ ದೂರನ್ನು ವಾಪಸು ಪಡೆಯುವಂತೆ ಒತ್ತಾಯಿಸಿ, 2021ರ ನವೆಂಬರ್ 11ರಂದು ನೆಪ ಹೇಳಿ ಮಹಿಳೆಯನ್ನು ತಾವಿದ್ದಲ್ಲಿಗೆ ಕರೆಯಿಸಿಕೊಂಡು ಅಲ್ಲಿಂದ ಲಾಡ್ಜ್‌ಗೆ ಕರೆದೊಯ್ದಿದ್ದರು' ಎಂದು ದೂರಿದ್ದರು.

'ನನ್ನನ್ನು ಅಕ್ರಮ ಬಂಧನದಲ್ಲಿ ಇರಿಸಿಕೊಂಡು ಬಲವಂತವಾಗಿ ಅತ್ಯಾಚಾರ ನಡೆಸಿ, ಬೂಟುಗಾಲಿನಿಂದ ಒದ್ದು, ಕುತ್ತಿಗೆ ಹಿಚುಕಿ ಗಾಯ ಪಡಿಸಿದ್ದರು. ಕೂಗಾಡಿದರೆ ಫ್ಯಾನ್‌ಗೆ ನೇತು ಹಾಕುತ್ತೇನೆ ಎಂದು ಕೊಲೆ ಮಾಡುವ ಬೆದರಿಕೆ ಹಾಕಿದ್ದಾರೆ. ಹಾಗಾಗಿ, ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಂಡು ನನಗೆ ನ್ಯಾಯ ಕೊಡಿಸಬೇಕು' ಎಂದು ಕೋರಿದ್ದರು.

ಕೆಪಿಎಸ್‌ಸಿಗೆ ಕೆಎಟಿ ನೋಟಿಸ್

'ಕರ್ನಾಟಕ ಲೋಕಸೇವಾ ಆಯೋಗವು 2024ರ ಡಿಸೆಂಬರ್ 29ರಂದು 384 ಹುದ್ದೆಗಳ ಭರ್ತಿಗೆ ನಡೆಸಿದ್ದ ಪೂರ್ವಭಾವಿ ಮರು ಪರೀಕ್ಷೆಯಲ್ಲಿ ದೋಷ ಕಂಡು ಬಂದಿರುವ ಕಾರಣ ಪರೀಕ್ಷೆ ರದ್ದುಪಡಿಸಬೇಕು' ಎಂದು ಕೋರಿ ಹಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮೊರೆ ಹೊಕ್ಕಿದ್ದಾರೆ.

ಈ ಸಂಬಂಧ ಕೃಷ್ಣ ಮತ್ತಿತರರು ಸಲ್ಲಿಸಿರುವ ಅರ್ಜಿಯನ್ನು ಕೆಎಟಿ ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಕೆಲಕಾಲ ವಾದ-ಪ್ರತಿವಾದ ಆಲಿಸಿದ ಬಳಿಕ ಪೀಠವು, 'ಕೆಪಿಎಸ್‌ಸಿ ಅಭಿಪ್ರಾಯ ಆಲಿಸದೆ ಯಾವುದೇ ಮಧ್ಯಂತರ ಆದೇಶ ನೀಡಲು ಸಾಧ್ಯವಿಲ್ಲ' ಎಂದು ತಿಳಿಸಿ; ರಾಜ್ಯ ಸರ್ಕಾರ ಮತ್ತು ಕೆಪಿಎಸ್‌ಸಿ ಪರ ವಕೀಲರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಪರೀಕ್ಷೆಗೆ ಸಂಬಂಧಿಸಿದಂತೆ ಮುಂದಿನ ವಿಚಾರಣೆವರೆಗೆ ಯಾವುದೇ ಕ್ರಮ ಕೈಗೊಳ್ಳಬಾರದು' ಎಂದು ಕೆಪಿಎಸ್‌ಸಿಗೆ ನಿರ್ದೇಶಿಸಿರುವ ಪೀಠವು ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿದೆ.

ಉಗ್ರಾಣದಲ್ಲೇ ಔಷಧ ಅಲಭ್ಯ

ಒಂದನೇ ಪುಟದಿಂದ...

'ಉಗ್ರಾಣದಲ್ಲಿ ಕೆಲ ಔಷಧಗಳ ಕೊರತೆ ಇರುವುದನ್ನು ಮೇಲಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಶೀಘ್ರ ಪೂರೈಸುವುದಾಗಿ ತಿಳಿಸಿದ್ದಾರೆ. ಜಿಲ್ಲೆ, ತಾಲ್ಲೂಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇರುವ ಆಯುಷ್ಮಾನ್ ಭಾರತ್ ಸೇರಿ ಕೆಲ ವಿಶೇಷ ಹಣಕಾಸು ನಿಧಿಗಳಡಿ ಅಗತ್ಯ ಔಷಧಗಳ ಖರೀದಿ ನಡೆದಿದೆ. ಧಾರವಾಡ ಜಿಲ್ಲೆಯ ಉಗ್ರಾಣ ದಲ್ಲಿ ಸದ್ಯ 348 ಬಗೆಯ ಔಷಧಗಳಿದ್ದು, ಅಗತ್ಯಕ್ಕೆ ತಕ್ಕಷ್ಟು ಪೂರೈಸಲಾಗುತ್ತಿದೆ' ಎಂದು ಹೇಳಿದರು.

ದೇವದಾಸಿಯರ ಸಮಸ್ಯೆ ಮತ್ತು ಪುನರ್ವಸತಿ ಕುರಿತು ವೈಜ್ಞಾನಿಕ ಸಮೀಕ್ಷೆ

ವರದಿ ಸಿದ್ಧಪಡಿಸಲು ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವದಾಸಿಯರ ಸಮಸ್ಯೆ ಮತ್ತು ಪುನರ್ವಸತಿ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಮೇಲ್ವಿಚಾರಣಾ ಸಮಿತಿ ಸಭೆ ಮಂಗಳವಾರ ನಡೆಯಿತು. ರಾಯಚೂರಿನ ಅಂಬೇಡ್ಕರ್ ವೃತ್ತದಲ್ಲಿ ಮಹಿಳೆಯರು ನಡೆಸುತ್ತಿರುವ ಅಹೋ ರಾತ್ರಿ ಧರಣಿ ವಿಚಾರವನ್ನು ಸಿದ್ದರಾಮಯ್ಯನವರು ಸಭೆಯಲ್ಲಿ ಪ್ರಸ್ತಾಪಿಸಿದರು.

ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸಬೇಕು, ದೇವದಾಸಿ ಮಹಿಳೆಯರ ಸ್ಥಿತಿಗತಿ ಬಗ್ಗೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು ಎನ್ನುವುದು ಪ್ರತಿಭಟನೆ ನಿರತರ ಬೇಡಿಕೆಯಾಗಿದೆ ಎಂದ ಅವರು ಅಧಿಕಾರಿಗಳಿಂದ ಮಾಹಿತಿ ಕೇಳಿದರು.

ಅರಣ್ಯವಾಸಿಗಳ ಒಕ್ಕಲೆಬ್ಬಿಸಬೇಡಿ: ಅರಣ್ಯವಾಸಿಗಳನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು ಎಂದು ಸಿದ್ದರಾಮಯ್ಯ ಸೂಚಿಸಿದರು.

ಅರಣ್ಯ ಹಕ್ಕು ಕಾಯ್ದೆ ಅಡಿ ಹಕ್ಕುಪತ್ರ ಸಮರ್ಪಕವಾಗಿ ವಿತರಿಸಬೇಕು. ಹಕ್ಕುಪತ್ರ ನೀಡಿದ ಬಳಿಕ ಪಹಣಿಯಲ್ಲಿ ಅವರ ಹೆಸರು ನಮೂದಿಸುವ ಕಾರ್ಯ ತ್ವರಿತಗೊಳಿಸಬೇಕು. ಕಂದಾಯ ಇಲಾಖೆ ಅಧಿಕಾರಿಗಳು ಇದನ್ನು ಆದ್ಯತೆ ಮೇಲೆ ಕೈಗೊಳ್ಳಬೇಕು ಎಂದು ಹೇಳಿದರು.

ಅರಣ್ಯ ಹಕ್ಕು ಸಮಿತಿ ನಿಗದಿತವಾಗಿ ಸಭೆಗಳನ್ನು ನಡೆಸಿ, ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡುವ ಪ್ರಕ್ರಿಯೆ ತ್ವರಿತಗೊಳಿಸಬೇಕು. 3,430 ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲು ಬಾಕಿ ಇದ್ದು, ಒಂದು ತಿಂಗಳೊಳಗೆ ಪೂರ್ಣಗೊಳಿಸಬೇಕು. ಸಭೆಗೆ ಅಧಿಕಾರಿಗಳು ನೀಡಿರುವ ಅನುಪಾಲನಾ ವರದಿಯಲ್ಲಿ ಮುಂದಿನ ಬಾರಿ ಜಿಲ್ಲಾವಾರು ಅಂಕಿ– ಅಂಶ ನಮೂದಿಸಲು ಅವರು ಸೂಚಿಸಿದರು.

ಸಭೆಯ ಪ್ರಮುಖ ಅಂಶಗಳು:

- ಬ್ಯಾಕ್‌ಲಾಗ್, ನೇಮಕಾತಿ ಮತ್ತು ಮುಂಬಡ್ತಿ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕು. ಈ ಕುರಿತು ಇಲಾಖಾವಾರು ಸಭೆ ನಡೆಸಬೇಕು
- ಮೃತಪಟ್ಟ ಪ್ರಕರಣಗಳಲ್ಲಿ ಅನುಕಂಪ ಆಧಾರದ ಉದ್ಯೋಗಕ್ಕಾಗಿ ಮೃತಪಟ್ಟ ದಿನಾಂಕದಿಂದ ಮೂರು ವರ್ಷದೊಳಗೆ, ಅಪ್ರಾಪ್ತ ವಯಸ್ಸಿನ ಮಕ್ಕಳು 18 ವರ್ಷಗಳನ್ನು ಪೂರೈಸಬೇಕು ಎಂಬ ಮಿತಿ ತೆಗೆದುಹಾಕುವ ಬಗ್ಗೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು
- ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳಲ್ಲಿ ಅಂತಹ ಪ್ರಮಾಣ ಪತ್ರ ನೀಡುವ ಅಧಿಕಾರಿಯನ್ನು ಸಹ ಆರೋಪಿಯನ್ನಾಗಿ ಮಾಡಲಾಗುತ್ತದೆ. ಜಾತಿ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು
- ಪೋಕ್ಸೊ ಪ್ರಕರಣಗಳು ಕೋರ್ಟ್‌ಗಳಲ್ಲಿ ದೀರ್ಘ ಕಾಲದಿಂದ ಬಾಕಿ ಇದ್ದರೆ ಪ್ರಾಸಿಕ್ಯೂಷನ್ ಜತೆ ಚರ್ಚಿಸಿ ಬೇಗ ಇತ್ಯರ್ಥಪಡಿಸಲು, ಶೀಘ್ರ ನ್ಯಾಯದಾನಕ್ಕೆ ಕ್ರಮ ವಹಿಸಬೇಕು

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮಂಗಳವಾರ ಧರಣಿ ನಡೆಸಿದರು ಚಿತ್ರ: ಪ್ರಶಾಂತ್ ಎಚ್.ಜಿ.

ಅಂಗನವಾಡಿ ಕಾರ್ಯಕರ್ತೆಯರ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ಕಾರ್ಯಕರ್ತೆಯರು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಅಂಗನವಾಡಿ ಕಾರ್ಯಕರ್ತೆಯರಿಗೆ ₹25 ಸಾವಿರ, ಸಹಾಯಕಿಯರಿಗೆ ₹12 ಸಾವಿರ ಕನಿಷ್ಠ ವೇತನ ನೀಡಬೇಕು. ಕಾರ್ಯಕರ್ತೆಯರನ್ನು 'ಸಿ' ದರ್ಜೆ ಹಾಗೂ ಸಹಾಯಕಿಯರನ್ನು 'ಡಿ' ದರ್ಜೆ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂದು ಆಗ್ರಹಿಸಿದರು.

'ಸಮಗ್ರ ಶಿಶು ಅಭಿವೃದ್ಧಿ ಯೋಜನೆ' ಯೋಜನೆಯ ಅನುಷ್ಠಾನಕ್ಕೆ ಅಂಗನವಾಡಿ ಕಾರ್ಯಕರ್ತೆಯರು ಶ್ರಮ ಹಾಕುತ್ತಿದ್ದಾರೆ. ಆದರೆ, ಯಾವುದೇ ಸೌಲಭ್ಯ ಕಲ್ಪಿಸುತ್ತಿಲ್ಲ' ಎಂದರು.

ಪ್ರತಿಭಟನೆಯ ನೇತೃತ್ವವನ್ನು ಸಮಿತಿಯ ರಾಜ್ಯ ಅಧ್ಯಕ್ಷೆ ಬಿ.ಪ್ರೇಮಾ, ಗೌರವಾಧ್ಯಕ್ಷೆ ಬಿ.ಆರ್.ಜಯಲಕ್ಷ್ಮಿ, ಕಾರ್ಯದರ್ಶಿ ಉಮಾಮಣಿ, ಖಜಾಂಚಿ ವಿಶಾಲಾಕ್ಷಿ, ಉಪಾಧ್ಯಕ್ಷೆ ಬಿ.ಎಸ್. ನಿರ್ಮಲಾ, ಸಹ ಕಾರ್ಯದರ್ಶಿ ಶಾಂತಾ, ಸಲಹೆಗಾರ್ತಿ ಎನ್.ಪಿ.ಭಾರತಿ ವಹಿಸಿದ್ದರು.

ಕುಂಭಮೇಳದ ಅವಹೇಳನ: ಅಶೋಕ

ಪ್ರಜಾವಾಣಿ ವಾರ್ತೆ


ಆರ್.ಅಶೋಕ

ಬೆಂಗಳೂರು: 'ಪ್ರಯಾಗ್‌ರಾಜ್ ಕುಂಭಮೇಳ ಮತ್ತು ಹಿಂದೂಗಳ ಶ್ರದ್ಧೆಯ ಬಗ್ಗೆ ಅವಹೇಳನ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಹಜ್ ಯಾತ್ರೆ ಮತ್ತು ರಮ್ಜಾನ್ ಉಪವಾಸದ ಬಗ್ಗೆ ಟೀಕೆ ಮಾಡುವ ಧೈರ್ಯ ಇದೆಯೇ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಹಿಂದೂ ಧರ್ಮವೆಂದರೆ, ಭಾರತೀಯ ಸಂಸ್ಕೃತಿ, ಪರಂಪರೆ ಎಂದರೆ ಯಾಕಿಷ್ಟು ದ್ವೇಷ, ಅಸಡ್ಡೆ ಎಂದು ಅವರು 'ಎಕ್ಸ್'ನಲ್ಲಿ ಕೇಳಿದ್ದಾರೆ.

'ಭಾರತೀಯತೆ ಮತ್ತು ಸನಾತನ ಧರ್ಮದ ಬಗ್ಗೆ ದ್ವೇಷತುಂಬಿಕೊಂಡಿರುವ ನಕಲಿ ಗಾಂಧಿ ಕುಟುಂಬವನ್ನು ಓಲೈಸುವ ಭರದಲ್ಲಿ ಹಿಂದೂಗಳ ನಂಬಿಕೆಯನ್ನು ಯಾಕೆ ಅಪಮಾನಿಸುತ್ತೀರಿ? ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಲ್ಲಿ ಇನ್ನೊಬ್ಬರಿಗೆ ತೊಂದರೆ ಆಗದಂತೆ ಎಲ್ಲರಿಗೂ ತಮ್ಮ ತಮ್ಮ ಮತ, ಧರ್ಮ, ನಂಬಿಕೆಗಳನ್ನು ಆಚರಣೆ ಮಾಡುವ ಹಕ್ಕಿದೆ, ಸ್ವಾತಂತ್ರ್ಯವಿದೆ. ಗಂಗೆಯಲ್ಲಿ ಮಿಂದೇಳುವ ಆಚರಣೆ ಪ್ರಶ್ನೆ ಮಾಡುವುದು ಹಿಂದೂ ಧರ್ಮಕ್ಕೆ ಮಾತ್ರವಲ್ಲ. ಸಂವಿಧಾನಕ್ಕೂ ಅಪಚಾರ ಮಾಡಿದಂತೆ' ಎಂದು ಹೇಳಿದ್ದಾರೆ.

ಮೆಕ್ಕಾಗೆ ಹೋಗುವವರನ್ನೂ ಪ್ರಶ್ನಿಸಬೇಕಲ್ಲವೇ- ಶೆಟ್ಟರ್: (ಕಲಬುರಗಿ ವರದಿ): 'ಮೆಕ್ಕಾಗೆ ಹೋಗುವ ಅಲ್ಪಸಂಖ್ಯಾತರು ಹಾಗೂ ಇಟಲಿಗೆ ತೆರಳಿ ಪೋಪ್ ಅವರನ್ನು ಭೇಟಿ ಮಾಡಿ ಬರುವ ಕ್ರಿಶ್ಚಿಯನ್ನರನ್ನೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಬೇಕಲ್ಲವೇ' ಎಂದು ಸಂಸದ ಜಗದೀಶ ಶೆಟ್ಟರ್ ಕೇಳಿದರು.

'ಅಲ್ಪಸಂಖ್ಯಾತರ ವಿಚಾರ, ಧಾರ್ಮಿಕತೆಯ ಬಗ್ಗೆ ಏನೂ ಪ್ರಶ್ನಿಸಲ್ಲ. ಆದರೆ, ಧಾರ್ಮಿಕ ಆಚರಣೆಯಲ್ಲಿ ನಂಬಿಕೆ ಇರಿಸಿದ ಕೋಟ್ಯಂತರ ಹಿಂದೂಗಳ ಆಚರಣೆ (ಗಂಗಾ ನದಿಯ ಪವಿತ್ರ ಸ್ನಾನ) ಬಗ್ಗೆ ಪ್ರಶ್ನಿಸುತ್ತೀರಿ. ಇದೇ ರೀತಿ ಅಲ್ಪಸಂಖ್ಯಾತರ ವಿಚಾರ, ಧಾರ್ಮಿಕ ಕೇಂದ್ರಗಳ ಬಗ್ಗೆ ಮಾತನಾಡಿದರೆ ಅವರ (ಖರ್ಗೆ) ಅಸ್ತಿತ್ವ ಉಳಿಯುತ್ತದೆಯಾ? ಇಂತಹ ಹೇಳಿಕೆ ಮೂಲಕ ಹಿಂದೂ ಸಮಾಜಕ್ಕೆ ಅಪಮಾನ ಮಾಡಿದ್ದನ್ನು ಖಂಡಿಸುತ್ತೇವೆ. ಹಿಂದೂಗಳ ಭಾವನೆಗೆ ಧಕ್ಕೆ ತರುವಂತೆ ವ್ಯಂಗ್ಯವಾಗಿ ಮಾತನಾಡುವುದನ್ನು ನಿಲ್ಲಿಸಬೇಕು' ಎಂದು ಹೇಳಿದರು.

'ಬಸವಣ್ಣನವರ ಅನುಯಾಯಿ'

ಬೆಂಗಳೂರು: 'ನಾವು ಬಸವಣ್ಣನವರ ಅನುಯಾಯಿಗಳು. ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂಬ ಬಸವಣ್ಣನವರ ಮಾತಿನಲ್ಲಿ ನಂಬಿಕೆ ಇದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗಂಗೆಯಲ್ಲಿ ತೀರ್ಥ ಸ್ನಾನ ಮಾಡಿದರೆ ಬಡತನ ಹೋಗುವುದಿಲ್ಲ ಎಂಬ ಹೇಳಿಕೆ ಪ್ರತಿಕ್ರಿಯಿಸಿ, 'ಗಂಗೆಯಲ್ಲಿ ಸ್ನಾನ ಮಾಡಿದರೆ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. ಆದರೆ ನಾವು ಬಸವಣ್ಣನವರ ಅನುಯಾಯಿಗಳು' ಎಂದರು.

'ದೇಶದ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡಿದ ಪಾಪ ಬಿಜೆಪಿಯವರನ್ನು ಬಿಡುವುದಿಲ್ಲ. ಗಂಗಾ ಸ್ನಾನ ಮಾಡಿದ ತಕ್ಷಣ ಈ ಪಾಪ ತೊಳೆದುಹೋಗಲ್ಲ

ಸಂತೋಷ ಲಾಡ್, ಸಚಿವ

ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಜೆರುಸಲೇಮ್‌ಗೆ ಏಕೆ ಹೋಗುತ್ತೀರಿ ಎಂದು ಕೇಳಿದ್ದರೆ, ಎಐಸಿಸಿ ಅಧ್ಯಕ್ಷ ಸ್ಥಾನದಲ್ಲಿ ಖರ್ಗೆ ಅವರು ಇರುತ್ತಿರಲಿಲ್ಲ

ಕೆ.ಎಸ್. ಈಶ್ವರಪ್ಪ
ಮಾಜಿ ಉಪಮುಖ್ಯಮಂತ್ರಿ

ಕಾಂಗ್ರೆಸ್‌ನವರು ಯಾರೂ ಮಹಾಕುಂಭಮೇಳಕ್ಕೆ ಹೋಗಬಾರದು ಎಂದು ಕಾಂಗ್ರೆಸ್ ಆದೇಶ ಹೊರಡಿಸಲಿ. ಮುಸ್ಲಿಮರ ಓಲೈಕೆಗೆ ಖರ್ಗೆ ಅವರು ಈ ಹೇಳಿಕೆ ನೀಡಿದ್ದಾರೆ

ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

ದೇಶದ ಜನರ ಭಾವನೆಗಳಿಗೆ ಧಕ್ಕೆಯಾಗುವಂತೆ ಖರ್ಗೆ ಅವರು ಆಕ್ಷೇಪಾರ್ಹವಾಗಿ ಮಾತನಾಡಿದ್ದು ಖಂಡನೀಯ, ಅವರು ಭಾರತೀಯರ ಕ್ಷಮೆ ಕೇಳಬೇಕು

ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ಉದ್ಯೋಗ ವಾಣಿ

ಪ್ರಸಾರ ಭಾರತಿ
(ಭಾರತದ ಸಾರ್ವಜನಿಕ ಸೇವಾ ಪ್ರಸಾರಕ)
ಪ್ರಸಾರ ಭಾರತಿ ಕಾರ್ಯಾಲಯ, ನವದೆಹಲಿ

ದೂರದರ್ಶನದ ಬೆಂಗಳೂರು ಕೇಂದ್ರದಲ್ಲಿ **ಹಿರಿಯ ಪ್ರತಿನಿಧಿ (Senior Correspondent)** ಹುದ್ದೆಯಲ್ಲಿ, ಹಂಗಾಮಿಯಾಗಿ ಪೂರ್ಣಾವಧಿಯಲ್ಲಿ, ಕಾರ್ಯ ನಿರ್ವಹಿಸಲು ನುರಿತ ಹಾಗೂ ಅನುಭವವುಳ್ಳ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಈ ಹುದ್ದೆಗೆ ಅವಶ್ಯವಿರುವ ವಿವರಗಳ ಮಾಹಿತಿ **https://prasarbharati.gov.in/pbvacancies/** ಜಾಲತಾಣದಲ್ಲಿ ಲಭ್ಯವಿದೆ.
ಅರ್ಜಿ ಸಲ್ಲಿಸ ಬಯಸುವವರು **ಹಿಂದಿ ಹಾಗೂ ಇಂಗ್ಲೀಷ್‌ನಲ್ಲಿ ನೈಪುಣ್ಯತೆಯೊಂದಿಗೆ ಕನ್ನಡ ಭಾಷೆಯ ಜ್ಞಾನ** ಹೊಂದಿರಬೇಕು, ಅರ್ಜಿಗಳನ್ನು **https://applications.prasarbharati.org** ಜಾಲತಾಣದಲ್ಲಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **30 ಜನವರಿ 2025.**

ಸಹಿ/-, ನಿರ್ದೇಶಕರು (ಸುದ್ದಿ)
ದೂರದರ್ಶನ ಕೇಂದ್ರ, ಬೆಂಗಳೂರು.

ಪ್ರಜಾವಾಣಿ

ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

SAPTHAGIRI NPS UNIVERSITY
UNMATCHED EXCELLENCE, UNLIMITED POTENTIAL

FACULTY RECRUITMENT

Professor, Associate Professor & Assistant Professor
- Computer Science and Engineering
- CSE (Artificial Intelligence and Machine Learning)
- CSE (Artificial Intelligence and Data Science)
- CSE (Data Science)

Qualification: First class in B.E & M.Tech., Ph.D. is compulsory for Professor & Associate Professor as per AICTE & UGC Norms.

Salary: 7th Pay Scale for Eligible Candidates.

MARKETING AND ADMINISTRATIVE STAFF
- AGM. Counsellor - Admissions
- Social Media Managers

General Conditions:
- The interested eligible and competent candidates are required to send resume and relevant documents to Email ID: **recruitment@simsrc.edu.in**
- Hard copy through post to The Registrar, Sapthagiri NPS University, No.14/5, Chikkasandra, Hesaraghatta Main Road, Bengaluru – 560 057.
- Interested candidates may apply on or before 07 days from the date of Advertisement.

Chancellor

SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE, DAVANGERE
#5335, 1st Main, Road, Near Bapuji Engineering College, Swamy Vivekananda Badavane, Davangere, Karnataka.

REQUIRED TEACHERS
We invite well qualified & experienced teachers for our CBSE & ICSE Schools

WALK IN INTERVIEW
Date: 01-02-2025 to 09-02-2025 | Timing: 10am to 4pm

SCIENCE, MATHS, SOCIAL & ENGLISH

CLASS	SALARY
1st - 4th Std.	Upto 40K
5th - 8th Std.	Upto 50K
9th - 10th Std.	Upto 65K

Co-ordinators: for Primary, Middle School & High School.
Front Office Executive (Female Candidate only)

➔ Physical Education Trainer (Male & Female Candidates)

Upload your resume along with experience at Apply for Jobs menu in www.spsmrs.org
For Enquiry Call: 9686266990



ಗ್ರಹಗಳ ಮೆರವಣಿಗೆಯ ನೋಡಾ...!

ಅವಿನಾಶ್ ಬಿ.

ಆಗಸದಲ್ಲಿ ಬೆಳಗುವ ಚಂದ್ರನನ್ನು ಅಥವಾ ಪ್ರಖರವಾಗಿ ಹೊಳೆಯುವ ನಕ್ಷತ್ರಗಳನ್ನು, ಗ್ರಹಗಳನ್ನು ತಮ್ಮ ಮಕ್ಕಳಿಗೆ ತೋರಿಸುವುದು, ಅವರ ಮುಖದಲ್ಲಿ ನಗು, ಆನಂದ ನೋಡುವುದು ಆ ದಿನಗಳಲ್ಲಿ ಸಾಮಾನ್ಯವಾಗಿತ್ತು. ಆದರೆ ಈಗಿನ ತಂತ್ರಜ್ಞಾನದ ಯುಗದಲ್ಲಿ ಮಕ್ಕಳು ಇದರಿಂದ ವಂಚಿತರಾಗುತ್ತಿದ್ದಾರೆ. ಹಿಂದೆಲ್ಲ, ಚಂದಿರನನ್ನು ತೋರಿಸಿ, ಪುಸಲಾಯಿಸಿ ಮಕ್ಕಳಿಗೆ ಊಟ ತಿನ್ನಿಸಲಾಗುತ್ತಿತ್ತು. ಆಗಸದ ಅಚ್ಚರಿಗಳನ್ನು, ಸೊಬಗನ್ನು ತೋರಿಸುತ್ತಲೇ, ಮಕ್ಕಳಿಗೆ ಆಕಾಶಕಾಯಗಳಲ್ಲಿ ಆಸಕ್ತಿ ಬೆಳೆಯುವಂತೆ ಮಾಡುತ್ತಿದ್ದ ಅಂಥ ಪ್ರಕ್ರಿಯೆಯ ಸೊಬಗನ್ನು ಇಂದು ಸ್ಮಾರ್ಟ್‌ಫೋನ್‌ಗಳು ಕಸಿದುಕೊಂಡಿವೆ. ನಗರಗಳಲ್ಲಾದರೆ ಗ್ರಹ-ನಕ್ಷತ್ರಗಳನ್ನು, ಆಗಸದಲ್ಲಾಗುತ್ತಿರುವ ವಿದ್ಯಮಾನಗಳನ್ನು ವೀಕ್ಷಿಸಲು ಪ್ಲಾನೆಟೋರಿಯಂ ಅಥವಾ ಖಗೋಳ ವೀಕ್ಷಣಾಲಯಗಳು ಇವೆ. ಆಕಾಶಕಾಯಗಳನ್ನು ನೋಡುವ, ರಾತ್ರಿ ಆಗಸದಲ್ಲಾಗುವ ಗ್ರಹ-ನಕ್ಷತ್ರಗಳ ಸ್ಥಾನಪಲ್ಲಟವನ್ನು ಗಮನಿಸುವ, ಈ ಮೂಲಕ ತಮ್ಮ ಏಕಾಗ್ರತೆಯ ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳುವ ಮಂದಿ ಈಗಲೂ ಇದ್ದಾರೆ. ಟೆಲಿಸ್ಕೋಪ್ ಇಲ್ಲವೇ ಬೈನಾಕ್ಯುಲರ್ ಬಳಸಿ ಆಕಾಶವೀಕ್ಷಣೆಯನ್ನೇ ಹವ್ಯಾಸವಾಗಿಸಿಕೊಂಡ ಅದೆಷ್ಟೋ ಮಂದಿ ನಮ್ಮೆದುರಿದ್ದಾರೆ.

ಆದರೆ, ಮತ್ತೆ ಈ ಆಸಕ್ತಿಯನ್ನು ಕೆರಳಿಸಲು, ಹವ್ಯಾಸವನ್ನು ಬೆಳೆಸಲು ಇಲ್ಲೊಂದು ಸುವರ್ಣಾವಕಾಶವಿದೆ. ಈಗಾಗಲೇ ಹಲವು ದಿನಗಳಿಂದ ದೇಶ-ವಿದೇಶದ ಕೋಟ್ಯಂತರ ಮಂದಿ ಆರು ಗ್ರಹಗಳು ಸೇರಿಕೊಂಡು ಆಗಸದಲ್ಲಿ ಮಾಡುತ್ತಿರುವ 'ಸಮಾವೇಶ'ವನ್ನು, ಎಂದರೆ ಪಥಕೂಟವನ್ನು (Planetary Parade) ವೀಕ್ಷಿಸಿ ಸಂಭ್ರಮ ಪಟ್ಟಿದ್ದಾರೆ.

ಸೌರಮಂಡಲದಲ್ಲಿ ಸೂರ್ಯನ ಸುತ್ತ ಅದೆಷ್ಟೋ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ತಮ್ಮದೇ ಕಕ್ಷೆಗಳಲ್ಲಿ ಪರಿಭ್ರಮಣ ಮಾಡುತ್ತಿರುವ ಶುಕ್ರ, ಮಂಗಳ, ಗುರು, ಶನಿ, ಯುರೇನಸ್ ಹಾಗೂ ನೆಪ್ಚೂನ್ - ಈ ಆರು ಗ್ರಹಗಳು ಪರಸ್ಪರ ತೀರಾ ಹತ್ತಿರದಲ್ಲಿ ಜನವರಿ ತಿಂಗಳಿನಲ್ಲಿ ಹಾದುಹೋಗುತ್ತಿವೆ.

ಏನಿದು ಗ್ರಹಗಳ ಪಥಕೂಟ?

ಇದೊಂದು ತೀರಾ ಅಪರೂಪದ ಖಗೋಳ ವಿದ್ಯಮಾನ. ಗ್ರಹಗಳು ಸೌರವ್ಯೂಹದಲ್ಲಿ ಸೂರ್ಯನ ಸುತ್ತಲಿನ ನಿಗದಿತ ಕಕ್ಷೆಯಲ್ಲಿ ಪರಿಭ್ರಮಿಸುತ್ತಾ ಇರುತ್ತವೆ. ಈ ಹಂತದಲ್ಲಿ ಮೂರ್ನಾಲ್ಕು ಗ್ರಹಗಳು ಆಗಸದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಸಮೀಪದಲ್ಲೇ ಕಾಣಿಸಿಕೊಳ್ಳುತ್ತವೆ; ಸರಳ ರೇಖೆಯಲ್ಲೇ ಕಾಣಿಸಬೇಕೆಂದೇನಿಲ್ಲ. ಇದನ್ನು 'ಪ್ಲಾನೆಟರಿ ಪೆರೇಡ್' (ಗ್ರಹಗಳ ಪಥಕೂಟ) ಎಂದು ನಾಸಾ ಕರೆದಿದೆ. ಆದರೆ ಈ ಕುರಿತ ವೈಜ್ಞಾನಿಕ ಹೆಸರು ಅಧಿಕೃತವಾಗಿ ಇನ್ನೂ ನಿರ್ಧಾರವಾಗಿಲ್ಲ.

ಸೌರಮಂಡಲದಲ್ಲಿ ಸೂರ್ಯನ ಸುತ್ತ ಅದೆಷ್ಟೋ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ತಮ್ಮದೇ ಕಕ್ಷೆಗಳಲ್ಲಿ ಪರಿಭ್ರಮಣ ಮಾಡುತ್ತಿರುವ ಶುಕ್ರ, ಮಂಗಳ, ಗುರು, ಶನಿ, ಯುರೇನಸ್ ಹಾಗೂ ನೆಪ್ಚೂನ್ - ಈ ಆರು ಗ್ರಹಗಳು ಪರಸ್ಪರ ತೀರಾ ಹತ್ತಿರದಲ್ಲಿ ಮತ್ತು ಭೂಮಿಗೆ ಸಮೀಪದಲ್ಲಿ ಜನವರಿ ತಿಂಗಳಿನಲ್ಲಿ ಹಾದುಹೋಗುತ್ತಿವೆ. ಈ ಜನವರಿ 21ರಿಂದ ಭಾರತದಲ್ಲಿ ಕಾಣಿಸಲು ಆರಂಭವಾಗಿರುವ ಈ ಗ್ರಹಗಳ 'ಆನ್‌ಲೈನ್ ಮೀಟಿಂಗ್' ವಿದ್ಯಮಾನವು ಸಂಜೆಗತ್ತಲಾದ ಬಳಿಕ ಆಗಸದಲ್ಲಿ ಗೋಚರಿಸುತ್ತದೆ. ಈ ಆರರಲ್ಲಿ, ಹೆಚ್ಚು ಪ್ರಖರ ಬೆಳಕಿನಲ್ಲಿರುವ ನಾಲ್ಕು ಗ್ರಹಗಳನ್ನು ಬರಿಗಣ್ಣಿಂದ ನೋಡಿ ಆನಂದಿಸಲು ಇಂದು (ಜ.29) ಕೊನೆಯ ದಿನ.

ಸೌರವ್ಯೂಹದಲ್ಲಿ ಗ್ರಹಗಳು ಪರಸ್ಪರ ಸಮೀಪದಲ್ಲಿ ಹಾದುಹೋಗುವುದೊಂದು ಸಾಮಾನ್ಯ ಪ್ರಕ್ರಿಯೆಯಾದರೂ ಈ ಬಾರಿ ಆರು ಗ್ರಹಗಳು ತೀರಾ ಹತ್ತಿರದಲ್ಲೇ, ಸೂರ್ಯನ ಒಂದು ಮಗ್ಗುಲಿನಲ್ಲಿ ಏಕಕಾಲಕ್ಕೆ ಹಾದುಹೋಗುವುದು ಮತ್ತು ಅವುಗಳಲ್ಲಿ ನಾಲ್ಕು ಗ್ರಹಗಳಂತೂ ಬರಿಗಣ್ಣಿಗೆ ಗೋಚರಿಸುವಷ್ಟು, ಭೂಮಿಗೆ ಸಮೀಪದಲ್ಲಿ ಕಾಣಿಸಿಕೊಳ್ಳುವುದು ಅಪರೂಪದ ವಿದ್ಯಮಾನ.

-ಸೂರ್ಯಾಸ್ತವಾದ ಸುಮಾರು ಒಂದು ಗಂಟೆಯ ಬಳಿಕ ಈ ಗ್ರಹಗಳ 'ರಾತ್ರಿಕೂಟ' ಶುರುವಾಗುತ್ತದೆ. ಶುಕ್ರ, ಮಂಗಳ, ಗುರು ಮತ್ತು ಶನಿಗ್ರಹಗಳು ಬರಿಗಣ್ಣಿಗೆ ಕಾಣಿಸಿದರೆ, ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳನ್ನು ನೋಡಬೇಕಿದ್ದರೆ ಟೆಲಿಸ್ಕೋಪ್ ಅಗತ್ಯವಿರುತ್ತದೆ. ಶುಕ್ರಗ್ರಹವು ಎಲ್ಲವುಗಳಿಗಿಂತ ಹೆಚ್ಚು ಪ್ರಖರವಾಗಿ ಆಗ್ನೇಯ ಭಾಗದಲ್ಲಿ ಗೋಚರಿಸಿದರೆ, ಮಂಗಳಗ್ರಹವು ತನ್ನ ಕೆಂಬಣ್ಣದಿಂದಾಗಿ ಬಲ್ಬ್ ಮಾದರಿಯಲ್ಲಿ ಪೂರ್ವದಲ್ಲಿ, ಶನಿಗ್ರಹವು ಪುಟ್ಟ ಬಿಂದುವಿನಂತೆ ಪಶ್ಚಿಮದಲ್ಲಿ, ಗುರುಗ್ರಹವು ಮಧ್ಯ ಆಗಸದಲ್ಲಿ ಪ್ರಖರವಾಗಿ ಕಾಣಿಸುತ್ತದೆ. ನಾವು ಭೂಮಿಯಿಂದ ನೋಡುವ ಕಾರಣ, ಇವೆಲ್ಲವೂ ಒಂದಿಷ್ಟು ಅಂತರದಲ್ಲಿರುವಂತೆ ಕಾಣಿಸುತ್ತವೆ.

ಆಕಾಶವು ಮೋಡಗಳಿಲ್ಲದೆ ಶುಭ್ರವಾಗಿದ್ದರೆ ಆಕಾಶ ವೀಕ್ಷಕರ ಅದೃಷ್ಟ ಮತ್ತು ಅವರ ಕಣ್ಣುಗಳಿಗೆ ಹಬ್ಬ ಖಚಿತ. ಆದರೆ ಸೂರ್ಯಾಸ್ತಮಾನವಾದ ಸುಮಾರು ಮೂರು ಗಂಟೆಗಳ ಬಳಿಕ ನೋಡಿದರೆ, ಶುಕ್ರ ಮತ್ತು ಶನಿಗ್ರಹಗಳು ದೂರ ಸಾಗಿರುತ್ತವೆ. ಡಿಎಸ್ಎಲ್ಆರ್ ಕ್ಯಾಮೆರಾ ಇದ್ದರೆ ಮತ್ತು ಹೆಚ್ಚು ಆಪ್ಟಿಕಲ್ ಝೂಮ್ ವ್ಯವಸ್ಥೆಯಿರುವ ಸ್ಮಾರ್ಟ್‌ಫೋನ್ ಇದ್ದರೆ ಚಿತ್ರ ಮತ್ತು ವಿಡಿಯೊಗಳನ್ನು ಸೆರೆಹಿಡಿಯಬಹುದು. ❖

ಗೂಗಲ್ ವಿಲ್ಲೋ ಕ್ವಾಂಟಮ್ ಕಂಪ್ಯೂಟಿಂಗ್ ಚಿಪ್ ಅನ್ನು ಅಭಿವೃದ್ಧಿಪಡಿಸಿರುವ ತಂತ್ರಜ್ಞರು



ಗೂಗಲ್ ವಿಲ್ಲೋ ಕ್ವಾಂಟಮ್ ಕಂಪ್ಯೂಟರ್

ಸೂಪರ್ ವಿಶ್ಲೇಷಕ ಗೂಗಲ್ ವಿಲ್ಲೋ

ಇ.ಎಸ್. ಸುಧೀಂದ್ರ ಪ್ರಸಾದ್

ಗ್ರೀಕ್‌ನ ಆ್ಯಂಟಿಕ್ಯಾಥೆರಾ ದ್ವೀಪದ ಬಳಿ ಸಾಗರಾಳದಲ್ಲಿ ಹಿಂದೆಂದೋ ಮುಳುಗಿದ್ದ ಹಡಗೊಂದನ್ನು ಹೆಲೆನಿಕ್ ರಾಯಲ್ ನೇವಿಯವರು 1900ರ ಸೆಪ್ಟೆಂಬರ್ 15ರಂದು ಪತ್ತೆ ಮಾಡಿದ್ದರು. ಅದರೊಳಗೆ ಬೆಲೆಬಾಳುವ ವಸ್ತುಗಳು ದೊರೆತವು. ಆದರೆ ಮುಂದೊಂದು ದಿನ ಇಡೀ ಜಗತ್ತನ್ನೇ ಆಳಬಹುದಾದ ಕಂಪ್ಯೂಟರ್ ಜನನಕ್ಕೆ ಕಾರಣವಾದ ಪುಟ್ಟ ಯಂತ್ರವೊಂದು ಪತ್ತೆಯಾಗಿತ್ತು. ಕ್ರಿಸ್ತಪೂರ್ವ 2ನೇ ಶತಮಾನಕ್ಕೆ ಸೇರಿದ್ದು ಎನ್ನಲಾದ 'ಆ್ಯಂಟಿಕ್ಯಾಥೆರಾ ಮೆಕ್ಯಾನಿಸಂ' ಎಂದೇ ಕರೆಯಲಾಗುವ ಈ ಸಾಧನ ಅಭಿವೃದ್ಧಿ ಹಿಂದಿನ ತಂತ್ರಜ್ಞಾನವೇನೆಂದು ಇತ್ತೀಚೆಗೆ ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ.

ಹಿತ್ತಾಳೆ ಲೋಹದ 35 ಸೆಂ.ಮೀ. ಗಾತ್ರದ ಈ ಸಾಧನದೊಳಗೆ ಮೆಕ್ಯಾನಿಕಲ್ ಕೈಗಡಿಯಾರದಲ್ಲಿ ಹಲ್ಲುಗಳಿರುವ ಚಕ್ರಗಳಂತೆ ಸುಮಾರು 37 ಬಗೆಬಗೆಯ ಚಕ್ರಗಳಿದ್ದವು. ಅವುಗಳಲ್ಲಿ ಒಂದು ಚಕ್ರಕ್ಕೆ ಸುಮಾರು 223 ಹಲ್ಲುಗಳಿದ್ದವು. ಇವುಗಳು ಒಂದು ಮಿಲಿಮೀಟರ್‌ಗಿಂತ ಕಡಿಮೆ ಗಾತ್ರದ್ದು. ಇದನ್ನು ಖಗೋಳ ಅಧ್ಯಯನಕ್ಕೆ ಬಳಸಲಾಗುತ್ತಿತ್ತು. ಭವಿಷ್ಯದಲ್ಲಿ ಸಂಭವಿಸುವ ಸೂರ್ಯ ಮತ್ತು ಚಂದ್ರಗ್ರಹಣ ಮತ್ತು ಇತರ ಗ್ರಹಗಳ ಚಲನವಲನದ ಲೆಕ್ಕಾಚಾರಕ್ಕೆ ಬಳಸಲಾಗುತ್ತಿತ್ತು ಎಂದೆನ್ನಲಾಗಿದೆ. ಇದೇ ಅವಧಿಯಲ್ಲಿ ಜಗತ್ತಿನ ಅತ್ಯಂತ ಕಠಿಣ ಹಾಗೂ ಬೃಹತ್ ಸವಾಲುಗಳನ್ನು ಕ್ಷಣ ಮಾತ್ರದಲ್ಲಿ ಬಿಡಿಸಬಲ್ಲ ಸಾಮರ್ಥ್ಯವಿರುವ 'ಕ್ವಾಂಟಮ್ ಕಂಪ್ಯೂಟಿಂಗ್ ಚಿಪ್' 'ವಿಲ್ಲೋ'ವನ್ನು ಗೂಗಲ್ ಅಭಿವೃದ್ಧಿಪಡಿಸಿದೆ ಎಂಬುದೂ ಸುದ್ದಿಯಾಗಿದೆ.

ಬೃಹತ್ ಲೆಕ್ಕಾಚಾರವನ್ನು ಅತ್ಯಂತ ವೇಗದ ಸೂಪರ್ ಕಂಪ್ಯೂಟರ್ 10 ಸೆಪ್ಟಿಲಿಯನ್ (1ರ ಮುಂದೆ 25 ಸೊನ್ನೆಗಳು) ವರ್ಷಗಳನ್ನು ತೆಗೆದುಕೊಳ್ಳುವುದಾದರೆ, ಗೂಗಲ್‌ನ ವಿಲ್ಲೋ ಅದನ್ನು ಕೇವಲ 5 ನಿಮಿಷಗಳಲ್ಲಿ ಪೂರ್ಣಗೊಳಿಸಲಿದೆ ಎಂದು ಸ್ವತಃ ಗೂಗಲ್ ಹೇಳಿಕೊಂಡಿದೆ. ಅಂದರೆ ಬ್ರಹ್ಮಾಂಡಕ್ಕೆ ಎಷ್ಟು ವಯಸ್ಸಾಗಿದೆ ಎಂಬ ಲೆಕ್ಕಾಚಾರದಿಂದ ಹಿಡಿದು ಅನ್ಯಗ್ರಹ ಜೀವಿಗಳವರೆಗಿನ ಮಾಹಿತಿಯನ್ನೂ ಇದು ಅತ್ಯಂತ ವೇಗದಲ್ಲಿ ಪತ್ತೆ ಮಾಡುವ ಸಾಮರ್ಥ್ಯವಿದೆ ಎಂದೆನ್ನಲಾಗಿದೆ.

ಕ್ಯಾಲ್ಕುಲೇಟರ್‌ನಿಂದ ಕ್ವಾಂಟಮ್ ಚಿಪ್‌ನವರೆಗೂ

1642ರಲ್ಲಿ ಪ್ಯಾಸ್ಕಲ್ ಕಂಡುಹಿಡಿದ ಬೇಸಿಕ್ ಕ್ಯಾಲ್ಕುಲೇಟರ್‌ನಿಂದ, ಮೆಕ್ಯಾನಿಕಲ್ ಕಂಪ್ಯೂಟರ್ ಅನ್ವೇಷಣೆವರೆಗಿನ ಸುಮಾರು 400 ವರ್ಷಗಳು, ನಂತರದಲ್ಲಿ ಬಲ್ಬ್ ಅನ್ವೇಷಕ ಥಾಮಸ್ ಆಲ್ವಾ ಎಡಿಸನ್ ಅವರ ಎಲೆಕ್ಟ್ರಾನ್ ಅನ್ವೇಷಣೆಯಿಂದ ಪ್ರೇರಣೆ ಪಡೆದು ಚಿಪ್ ತಯಾರಿಕೆಯಿಂದಾಗಿ ಪ್ರೋಗ್ರಾಮಬಲ್ ಕಂಪ್ಯೂಟರ್‌ಗಳಲ್ಲಿ ಬಳಕೆಯಾಗುವ ಮೈಕ್ರೊ ಚಿಪ್‌ವರೆಗಿನ ಆವಿಷ್ಕಾರವರೆಗೆ ಕಂಪ್ಯೂಟರ್ ಹಲವು ಆವಿಷ್ಕಾರಗಳನ್ನು ಕಂಡಿದೆ. 20 ಅಣುಗಳ ಗಾತ್ರದಷ್ಟು ಪುಟ್ಟದಾದ ಹಾಗೂ ವೇಗದ ಕಂಪ್ಯೂಟರ್‌ಗಳಲ್ಲಿ ಬಳಕೆಯಾಗುವ ಮೈಕ್ರೊ ಚಿಪ್‌ಗಳೂ ಈಗ ಇತಿಹಾಸ ಸೇರುವ ಕಾಲ ಎದುರಾಗಿದೆ. ಕ್ವಾಂಟಮ್ ತಂತ್ರಜ್ಞಾನದಲ್ಲಿ ಕಳೆದ ಎರಡು ದಶಕಗಳಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ಹಲವು ಕಂಪನಿಗಳಲ್ಲಿ ಯಾರು ಮೊದಲಿಗರು ಎಂಬುದಕ್ಕೆ 'ವಿಲ್ಲೋ' ಇದೀಗ ಗೂಗಲ್ ತೆರೆ ಎಳೆದಿದೆ.

ತಂತ್ರಜ್ಞಾನ ಬೆಳವಣಿಗೆ ಈಗ ನಾಗಾಲೋಟದಲ್ಲಿ ಓಡುತ್ತಿದೆ. ಕೃತಕ ಬುದ್ಧಿಮತ್ತೆಯು ಒಂದೆಡೆ ತನ್ನ ಬಾಹುಬಲವನ್ನು ಹೆಚ್ಚಿಸಿಕೊಳ್ಳುತ್ತಿರುವ ಹೊತ್ತಿಗೆ, ಅದರ ಕೆಲಸಕ್ಕೆ ಪೂರಕವಾದ ಚಿಪ್‌ಗಳ ಅಭಿವೃದ್ಧಿಯೂ ಪ್ರಗತಿ ಸಾಧಿಸುತ್ತಿದೆ. ಕಾರ್ಯಕ್ಷಮತೆ, ದಕ್ಷತೆ ಮತ್ತು ಸಾಮರ್ಥ್ಯಗಳಲ್ಲಿ ವಿಲ್ಲೋ ಅತ್ಯಾಧುನಿಕವಾಗಿದೆ.

ಮಷಿನ್ ಲರ್ನಿಂಗ್ ಮತ್ತು ಕೃತಕ ಬುದ್ಧಿಮತ್ತೆಯ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸುವ ವಿಶೇಷ ಪ್ರಾಸೆಸರ್‌ನಲ್ಲಿ ಅಳವಡಿಸಿದ ಚಿಪ್ ಈ ವಿಲ್ಲೋ. ಬೃಹತ್ ಮಾಹಿತಿಯನ್ನು ತ್ವರಿತವಾಗಿ ವಿಶ್ಲೇಷಿಸುವ ಸಾಮರ್ಥ್ಯವಿರುವ ಈ ಸಾಧನವನ್ನು ಗೂಗಲ್ ಕಳೆದ 10 ವರ್ಷಗಳಲ್ಲಿ ಅಭಿವೃದ್ಧಿಪಡಿಸಿದೆ. ಬೃಹತ್ ಮಾಹಿತಿಯನ್ನು ಅರಗಿಸಿಕೊಂಡು ನಿರಂತರ ಬೆಳವಣಿಗೆ ಕಾಣುತ್ತಿರುವ ಕೃತಕ ಬುದ್ಧಿಮತ್ತೆಯ ಭವಿಷ್ಯದ ಬೇಡಿಕೆಗೆ ಅನುಗುಣವಾಗಿ ವಿಲ್ಲೋವನ್ನು ಅಭಿವೃದ್ಧಿಪಡಿಸಿರುವುದಾಗಿ ಗೂಗಲ್ ಹೇಳಿದೆ. ಆ ಮೂಲಕ ತ್ವರಿತ ಹಾಗೂ ಬೃಹದಾಕಾರವಾಗಿ ಬೆಳೆಯುತ್ತಿರುವ ಕಂಪ್ಯೂಟಿಂಗ್ ತಂತ್ರಜ್ಞಾನ ಹೊಸ ಮೈಲಿಗಲ್ಲಿನತ್ತ ಕೊಂಡೊಯ್ಯುವ ಪ್ರಯತ್ನ ಇದಾಗಿದೆ. ಜತೆಗೆ ಕಳೆದ 60 ವರ್ಷಗಳಲ್ಲಿ ಬಳಕೆಯಾಗಿರುವ ಸಾಂಪ್ರದಾಯಿಕ ಚಿಪ್‌ಗಳು ಭವಿಷ್ಯದಲ್ಲಿ ಕೇವಲ ನೆನಪಾಗಿಯಷ್ಟೇ ಉಳಿಯಲಿವೆ. ವಿಲ್ಲೋದಂಥ ಕ್ವಾಂಟಮ್ ಕಂಪ್ಯೂಟಿಂಗ್‌ನಿಂದಾಗಿ ಜಗತ್ತಿನ ಬೆಳವಣಿಗೆ ನಿಗದಿಪಡಿಸುವುದರ ಜತೆಗೆ, ನಿರ್ವಹಣಾ ವೆಚ್ಚವನ್ನು ಕಡಿತಗೊಳಿಸಲಿದೆ. 40ರ ದಶಕದಲ್ಲಿ ಅಭಿವೃದ್ಧಿಪಡಿಸಲಾದ ಬೃಹತ್ ಚಿಪ್‌ಗಳಿರುವ ಕೋಣೆಯೊಳಗೆ ಹೋದರೆ, ಇಂಧನದ ಅತಿಯಾದ ಬಳಕೆಯಿಂದಾಗಿ ಉತ್ಪತ್ತಿಯಾಗುತ್ತಿದ್ದ ಬಿಸಿ ಶಾಖದಲ್ಲಿ ತಂತ್ರಜ್ಞರು ಬೆವರುತ್ತಿದ್ದರಂತೆ. ಆದರೆ ಹೊಸ ತಲೆಮಾರಿನ ಚಿಪ್‌ಗಳು ಇಂಧನವನ್ನು ಮಿತವಾಗಿ ಬಳಸುವ ಸಾಮರ್ಥ್ಯವನ್ನು ಹೊಂದಿವೆ.

ಕೃತಕ ಬುದ್ಧಿಮತ್ತೆ ಭವಿಷ್ಯದಲ್ಲಿ ಇನ್ನಷ್ಟು ಚುರುಕು

ಚಾಲಕರಹಿತ ವಾಹನಗಳ ನಿರ್ವಹಣೆ, ಚಿತ್ರಗಳನ್ನು ತ್ವರಿತವಾಗಿ ಗ್ರಹಿಸುವುದು, ಧ್ವನಿ ಆಧಾರಿತ ನೆರವು ಸೇರಿದಂತೆ ಹಲವು ಬಗೆಯ ರಿಯಲ್ ಟೈಂ ಮಾಹಿತಿಯನ್ನು ನಿರ್ವಹಿಸುವುದರಲ್ಲಿ ವಿಲ್ಲೋ ಪ್ರಮುಖ ಪಾತ್ರ ವಹಿಸಲಿದೆ. ಜತೆಗೆ ಈಗಾಗಲೇ ಕೃತಕ ಬುದ್ಧಿಮತ್ತೆ ಆಧಾರಿತ ಉತ್ಪನ್ನಗಳನ್ನು ಹೊಂದಿರುವ ಗೂಗಲ್, ವಿಲ್ಲೋ ಎಂಬ ಕ್ವಾಂಟಮ್ ಕಂಪ್ಯೂಟಿಂಗ್ ಚಿಪ್ ಅನ್ನು ಕ್ಲೌಡ್‌ನಲ್ಲಿರುವ ತನ್ನ ಬೃಹತ್ ಮಾಹಿತಿಯ ನಿರ್ವಹಣೆಯಲ್ಲಿ ಬಳಸಿಕೊಳ್ಳುವ ಸಾಧ್ಯತೆ ಇದೆ. ಆ ಮೂಲಕ ತನ್ನ ಉತ್ಪನ್ನಗಳ ಪ್ರತಿಕ್ರಿಯೆ ವೇಗವನ್ನು ಹೆಚ್ಚಿಸಿಕೊಳ್ಳಲಿದೆ ಎಂದು ತಂತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆರೋಗ್ಯ ಕ್ಷೇತ್ರದಿಂದ ಹಣಕಾಸು ಕ್ಷೇತ್ರದವರೆಗೂ ಅತಿ ಬೇಡಿಕೆಯ ಕೃತಕ ಬುದ್ಧಿಮತ್ತೆಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯುವಲ್ಲೂ ಈ ಹೊಸ ಮಾದರಿಯ ಚಿಪ್ ನೆರವಾಗಲಿದೆ. ವಿಲ್ಲೋ ಚಿಪ್‌ಗೆ ಪೂರಕವಾದ ಹಾರ್ಡ್‌ವೇರ್ ಅಭಿವೃದ್ಧಿಗೂ ಗೂಗಲ್ ಕೈಹಾಕಿದೆ. ಆ ಮೂಲಕ ತನ್ನ ಅಗತ್ಯಗಳಿಗೆ ಬೇರೊಂದು ಕಂಪೆನಿಯನ್ನು ಅವಲಂಬಿಸುವುದನ್ನು ಆದಷ್ಟು ತಗ್ಗಿಸುವತ್ತ ಹೆಜ್ಜೆ ಇಟ್ಟಿದೆ. ಈ ಚಿಪ್‌ನ ಬಳಕೆಯಿಂದ ಗೂಗಲ್ ಫೋಟೊ ಅಪ್ಲಿಕೇಷನ್ ಮೂಲಕ ಚಿತ್ರಗಳಲ್ಲಿರುವ ವ್ಯಕ್ತಿಗಳ ಗುರುತಿಸುವಿಕೆ, ಸ್ವಯಂಚಾಲಿತ ಟ್ಯಾಗಿಂಗ್, ಧ್ವನಿ ಆಧಾರಿತ ಆದೇಶಗಳು, ಧ್ವನಿಗ್ರಹಿಕೆ ಇತ್ಯಾದಿಗಳು ತಡೆರಹಿತವಾಗಿ ಹಾಗೂ ತ್ವರಿತವಾಗಿ ಕಾರ್ಯಗತಗೊಳಿಸಲು ಸಾಧ್ಯವಿದೆ. ಸಾಧನಗಳಲ್ಲಿರುವ ಸೆನ್ಸರ್‌ಗಳು ತ್ವರಿತವಾಗಿ ನಿರ್ಧಾರ ತೆಗೆದುಕೊಳ್ಳಲೂ ಚಿಪ್ ನೆರವಾಗಲಿದೆ.

ಎನ್‌ವಿಡಿಯಾ ಹಾಗೂ ಇಂಟೆಲ್‌ನಂತ ಕಂಪೆನಿಗಳೂ ಕ್ವಾಂಟಮ್ ಕಂಪ್ಯೂಟಿಂಗ್ ಚಿಪ್‌ಗಳನ್ನು ಪರಿಚಯಿಸುವ ಸಾಧ್ಯತೆಗಳಿವೆ. ಹೀಗಾಗಿ ಭವಿಷ್ಯದ ಕಂಪ್ಯೂಟರ್‌ಗಳು ಹೆಚ್ಚು ವೇಗವಾಗುವುದರಿಂದ ಸಂಶೋಧನೆಗಳು ತ್ವರಿತಗತಿಯಲ್ಲಿ ಸಾಗಿ, ಮನುಷ್ಯನ ಜೀವಿತಾವಧಿಯೇ ಹೆಚ್ಚಳವಾದರೂ ಅಚ್ಚರಿಪಡಬೇಕಾಗಿಲ್ಲ. ಇಲ್ಲವೇ ನೇಚರ್ ಪತ್ರಿಕೆ ಪ್ರಕಟಿಸಿದ ಲೇಖನ '2045ರಲ್ಲಿ ಸಾವಿಗೇ ಸಾವು' ಎಂಬುದು ನಿಜವಾದರೂ ಅಚ್ಚರಿ ಇಲ್ಲ ಎಂದು ತಂತ್ರಜ್ಞರು ಅಂದಾಜಿಸಿದ್ದಾರೆ. ಆದರೆ, ಕ್ವಾಂಟಮ್ ಕಂಪ್ಯೂಟಿಂಗ್ ಚಿಪ್ ಎಲ್ಲರ ಮನೆಗಳಲ್ಲಿರುವ ಕಂಪ್ಯೂಟರ್‌ಗಳಿಗೆ ತರುವ ಸವಾಲು ಕೂಡ ತಂತ್ರಜ್ಞರ ಮುಂದಿದೆ.

ಅಂದಹಾಗೆ, ಆ್ಯಂಟಿಕ್ಯಾಥೆರಾ ಮೆಕ್ಯಾನಿಸಂ ಸಾಧನವು ಗ್ರೀಸ್‌ನ ಅಥೆನ್ಸ್‌ನಲ್ಲಿರುವ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಇದರ ಮರುಸೃಷ್ಟಿ ಸಾಧನವನ್ನೂ ಇದರೊಂದಿಗೆ ಇಡಲಾಗಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

25) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

3) ಥೈರಾಕ್ಸಿನ್ ಹಾರ್ಮೋನ್ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು?

ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡ ರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ.

ಉತ್ತರ:– (ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.

4) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು?

ಎ) ಮ್ಯಾಂಗನೀಸ್ ಬಿ) ಟಂಗ್‌ಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ

ಉತ್ತರ:– (ಬಿ) ಟಂಗ್‌ಸ್ಟನ್

5) ಓಮ್(Ohm) ಎಂಬುದು ಇದರ SIಮಾನವಾಗಿದೆ? (ಮಾರ್ಚ್ 2021)

ಎ) ವಿದ್ಯುತ್ ವಿಭವಾಂತರ ಬಿ) ರೋಧ
ಸಿ) ವಿದ್ಯುತ್ ಪ್ರವಾಹ ಡಿ) ವಿದ್ಯುದಾವೇಶ

ಉತ್ತರ:– (ಬಿ) ರೋಧ

6) ನ್ಯೂಕ್ಲಿಯರ್ ವಿದ್ಯುತ್ ಕ್ರಿಯಾಕಾರಿಯಲ್ಲಿ ಶಕ್ತಿಯ ಮೂಲ ಯಾವುದು?

ಎ) ನ್ಯೂಕ್ಲೀಯರ್ ವಿದಳನ ಕ್ರಿಯೆ
ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ
ಸಿ) ಬಹೀರುಷ್ಣಕ ಕ್ರಿಯೆ
ಡಿ) ನ್ಯೂಕ್ಲಿಯರ್ ಸಮ್ಮಿಲನ ಕ್ರಿಯೆ

ಉತ್ತರ:– (ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ

4) ಬಹುತೇಕ ಆಹಾರದ ಆಕರಗಳಿಗೂ ಕಾರ್ಬನ್ ಆಧಾರಿತವಾಗಿವೆ.. ಈ ಕಾರ್ಬನ್ ಆಕರಗಳ ಸಂಕೀರ್ಣತೆಯ ಆಧಾರದ ಮೇಲೆ ವಿಭಿನ್ನ ಜೀವಿಗಳು, ವಿಭಿನ್ನ ರೀತಿಯ...................... ಬಳಸುತ್ತವೆ.

ಎ) ಆಹಾರ ಪ್ರಮಾಣ ,ಬಿ) ಪೋಷಣಾ ವಿಧಾನ
ಸಿ) ಮರಿ ಪರಿಪಾಲನಾ ವಿಧಾನ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಪೋಷಣಾ ವಿಧಾನ

5) ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು .... ಈ ಮೂರೂ ಒಂದೇ ಸಮತಲದಲ್ಲಿರುತ್ತದೆ.

ಎ) ಪ್ರತಿಫಲಿತ ಧ್ವನಿ ಬಿ) ಪತನ ಕೋನ
ಸಿ) ಪ್ರತಿಧ್ವನಿತ ಶಬ್ದ ಡಿ) ಪ್ರತಿಫಲಿತ ಕಿರಣ

ಉತ್ತರ:– (ಡಿ) **ಪ್ರತಿಫಲಿತ ಕಿರಣ**

7) ಶ್ವಾಸನಾಳದ ಮೇಲ್ಭಾಗವು .... ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ಛ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮ್ರಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್
ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ) ಸಿಲಿಯಾ(Cilia)

8) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ–ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ............

ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲಿಯಸ್

ಉತ್ತರ:– ಬಿ) ಮೈಟೋಕಾಂಡ್ರಿಯಾ

9) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?

ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್

ಉತ್ತರ:– (ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

10) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

26) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಕ್ಕಿಂತಲೂ ಸಮಾಂತರವಾಗಿ ಜೋಡಿಸುವುದು ಅನುಕೂಲಕರ ಏಕೆ?

ಉತ್ತರ:– * ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾದ ವಿಭಿನ್ನ ಮೌಲ್ಯದ ವಿದ್ಯುತ್ ಪ್ರವಾಹ ಅಗತ್ಯವಿದೆ.

* ಸರಣಿ ಕ್ರಮದಲ್ಲಿ ಜೋಡಿಸಿದಾಗ ಯಾವುದಾದರೂ ಘಟಕ ವಿಫಲವಾದರೆ ಮಂಡಲವು ಮುರಿದು ಹೋಗುತ್ತದೆ. ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. ಆದರೆ ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.

* ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ವಿಭಿನ್ನ ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾಂತರ ಜೋಡಣೆ ಸಹಕಾರಿಯಾಗಿವೆ

27) ಅಮೀಬಾ ಜೀವ ಪೋಷಣೆಯ ಕುರಿತು ಬರೆಯಿರಿ

ಉತ್ತರ:– ಅಮೀಬಾವು ತಾತ್ಕಾಲಿಕ ಬೆರಳಿನಂತಹ ಜೀವಕೋಶದ ಮೇಲ್ಮೈ ಹೊರಚಾಚಿಕೆಗಳನ್ನು ಬಳಸಿ ಆಹಾರವನ್ನು ಒಳತೆಗೆದುಕೊಳ್ಳುತ್ತದೆ. ಈ ರಚನೆಗಳು ಆಹಾರ ಕಣಗಳನ್ನು ಆವರಿಸಿ ಬೆಸೆದು ಆಹಾರ ರಸದಾನಿಯನ್ನು ಉಂಟುಮಾಡುತ್ತದೆ. ಆಹಾರ ರಸದಾನಿಯೊಳಗೆ ಸಂಕೀರ್ಣ ಆಹಾರ ಪದಾರ್ಥಗಳು ವಿಭಜನೆಗೊಂಡು ಸರಳ ಆಹಾರ ಪದಾರ್ಥಗಳಾಗುತ್ತವೆ. ನಂತರ ಅವು ಕೋಶದ್ರವ್ಯಕ್ಕೆ ವಿಸರಣೆಗೊಳ್ಳುತ್ತವೆ. ಜೀರ್ಣವಾಗದೇ ಉಳಿದ ಪದಾರ್ಥಗಳು ಜೀವಕೋಶದ ಮೇಲ್ಮೈಗೆ ಚಲಿಸಿ ಹೊರಹಾಕಲ್ಪಡುತ್ತದೆ.



28) ಇವುಗಳಿಗೆ ಕಾರಣ ಕೊಡಿ

1) ಆಹಾರ ಸರಪಣಿಯುಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.

2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC MATHS

REVISION : MODEL QUESTIONS

22. Find the vector of magnitude 8 units in the direction of the vector $\vec{a} = 5\hat{i} - \hat{j} + 2\hat{k}$

Ans :– $|\vec{a}| = \sqrt{30}$

vector of magnitude 8 units $= 8\frac{\vec{a}}{|\vec{a}|} = 8\left(\frac{5\hat{i} - \hat{j} + 2\hat{k}}{\sqrt{30}}\right)$

$= \frac{40}{\sqrt{30}}\hat{i} - \frac{8}{\sqrt{30}}\hat{j} + \frac{16}{\sqrt{30}}\hat{k}$

23. Find the distance of the point (2, 3, -5) from the plane $\vec{r}\cdot(\hat{i} + 2\hat{j} - 2\hat{k}) = 9$

Ans :– Equation of plane is,

$$\left(\left(x\hat{i} + y\hat{j} + z\hat{k}\right)\cdot\left(\hat{i} + 2\hat{j} - 2\hat{k}\right)\right) - 9 = 0$$

$$\Rightarrow x + 2y - 2z - 9 = 0$$

$$d = \left|\frac{ax_1 + by_1 + cz_1 + d}{\sqrt{a^2 + b^2 + c^2}}\right|$$

$$d = \left|\frac{1(2) + 2(3) - 2(-5) - 9}{\sqrt{1^2 + 2^2 + 2^2}}\right| = \frac{9}{3} = 3$$

24. A die is thrown. If E is the event 'the number appearing is a multiple of 3' and F is the event 'the number appearing is even'. Find whether F and E are independent?

Ans:- Sample space S={1, 2, 3, 4, 5, 6}, E = {3, 6}, F ={2,4,6} and $E \cap F = \{6\}$

$P(E) = \frac{2}{6} = \frac{1}{3}$, $P(F) = \frac{3}{6} = \frac{1}{2}$ and $P(E \cap F) = \frac{1}{6}$

$P(E).P(F) = \frac{1}{3}\,\frac{1}{2} = \frac{1}{6}$

$P(E).\ P(F) = P(E \cap F)$

∴ F and E are independent events.

25. Verify whether the function $f : A \to B$ where $A = R - \{3\}$ and $B = R - \{1\}$ defined by $f(x) = \frac{x-2}{x-3}$ is one – one and on to or not. Give reason?

Ans:- $\forall x_1, x_2 \in R - \{3\}$

$f(x_1) = f(x_2)$

$\Rightarrow \frac{x_1 - 2}{x_1 - 3} = \frac{x_2 - 2}{x_2 - 3} \Rightarrow x_1 = x_2,$

f is one – one $\exists\, y \in R - \{1\}$, such that $\frac{x-2}{x-3} = y$

$x - 2 = y(x - 3) \Rightarrow x - 2 = xy - 3y$

$\Rightarrow x - xy = 2 - 3y \Rightarrow x(1 - y) = 2 - 3y$

$\Rightarrow x = \frac{2 - 3y}{1 - y}$

consider $f(x) = f\left(\frac{2-3y}{1-y}\right) = \frac{\frac{2-3y}{1-y} - 2}{\frac{2-3y}{1-y} - 3}$

(by taking LCM and simplify)

$f(x) = y$

∴ f in on to

consider $f(x) = f\left(\frac{2-3y}{1-y}\right) = \frac{\frac{2-3y}{1-y} - 2}{\frac{2-3y}{1-y} - 3}$

(by taking LCM and simplify)

$f(x) = y$

∴ f in on to

26. Prove that $\tan^{-1} x + \tan^{-1} y = \tan^{-1}\frac{x+y}{1-xy}$, where $xy < 1$

Ans:- Let $\tan^{-1} x = A \Rightarrow x = \tan A$

$\tan^{-1} y = B \Rightarrow x = \tan B$

$\tan(A + B) = \frac{\tan A + \tan B}{1 - \tan A \tan B}$

$A + B = \tan^{-1}\frac{x + y}{1 - xy}$

substitute the values of A and B

$\tan^{-1} x + \tan^{-1} y = \tan^{-1}\frac{x + y}{1 - xy}$

27. Express the matrix $A = \begin{bmatrix} 1 & 2 \\ 3 & 4 \end{bmatrix}$ as sum of symmetric and skew symmetric matrices

Ans :– $A = \frac{1}{2}(A + A') + \frac{1}{2}(A + A')$

$A' = \begin{bmatrix} 1 & 3 \\ 2 & 4 \end{bmatrix}$; $A + A' = \begin{bmatrix} 1 & 5 \\ 5 & 4 \end{bmatrix}$ and $A - A' = \begin{bmatrix} 0 & -1 \\ 1 & 0 \end{bmatrix}$

$\therefore \frac{1}{2}\begin{bmatrix} 1 & 5 \\ 5 & 4 \end{bmatrix} + \frac{1}{2}\begin{bmatrix} 0 & -1 \\ 1 & 0 \end{bmatrix} = \begin{bmatrix} 1 & 2 \\ 3 & 4 \end{bmatrix}$

28. If $y = \tan^{-1}\left[\frac{\sqrt{1+x^2} - 1}{x}\right]$, prove that $\frac{dy}{dx} = \frac{1}{2(1+x^2)}$

Ans :– Let $x = \tan\theta$, $y = \tan^{-1}\left[\frac{\sqrt{1+(\tan\theta)^2 - 1}}{\tan\theta}\right]$

$y = \tan^{-1}\left(\frac{\sec\theta - 1}{\tan\theta}\right) = \tan^{-1}\left(\tan\frac{\theta}{2}\right)$

$y = \frac{\theta}{2} \Rightarrow \frac{1}{2}\tan^{-1} x$ d.r.t.x

$\frac{dy}{dx} = \frac{1}{2(1+x^2)}$

ಸಾಲದ ಕಂತು ಕಟ್ಟದಿದ್ದಕ್ಕೆ ಮನೆ ಬಳಿ ಬಂದು ಅವಾಚ್ಯ ಪದ ಬಳಕೆ: ಕೊಣನೂರು ಠಾಣೆಯಲ್ಲಿ ದೂರು ದಾಖಲು

ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ): ಇಲ್ಲಿನ ಕಾಳೇನಹಳ್ಳಿಯ ರವಿ ಎಂಬುವರ ದೂರಿನ ಮೇರೆಗೆ, ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಕಂಪನಿಯ ಶಿವಕುಮಾರ್ ಮತ್ತು ಮನು ಎಂಬುವರನ್ನು ಕೊಣನೂರು ಪೊಲೀಸರು ಬಂಧಿಸಿದ್ದಾರೆ.

ರವಿ, ತಮ್ಮ ಪತ್ನಿ ರತ್ನಾ ಹೆಸರಿನಲ್ಲಿ ಕಂಪನಿಯ ರಾಮನಾಥಪುರ ಶಾಖೆಯಿಂದ ₹1 ಲಕ್ಷ ಸಾಲ ಪಡೆದಿದ್ದು, ಪ್ರತಿ 15 ದಿನಗಳಿಗೊಮ್ಮೆ ಕಂಪನಿಯ ಸಿಬ್ಬಂದಿ ಬಂದು ₹3,550 ಕಂತನ್ನು ವಸೂಲಿ ಮಾಡುತ್ತಿದ್ದರು.

‘ಜ.1 ರಂದು ಮಧ್ಯಾಹ್ನ ಬಂದ ಸಿಬ್ಬಂದಿಗೆ, ಕಂತು ಕಟ್ಟಲು ಎರಡು ದಿನ ಸಮಯಾವಕಾಶ ಕೇಳಿದ್ದೆ. ಆದರೆ, ಮನೆಯ ಬಾಗಿಲಿಗೆ ಅಡ್ಡ ನಿಂತ ಮನು, ಹಣ ಕಟ್ಟುವವರೆಗೆ ಹೋಗುವುದಿಲ್ಲ ಎಂದು ರಂಪಾಟ ಮಾಡಿದ್ದ. ಹಣ ಕಟ್ಟೋಕೆ ಯೋಗ್ಯತೆಯಿಲ್ಲವೆಂದರೆ ಏಕೆ ಸಾಲ ತೆಗೆದುಕೊಳ್ಳುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ’ ಎಂದು ರವಿ ದೂರಿನಲ್ಲಿ ಆರೋಪಿಸಿದ್ದಾರೆ.

‘ಮತ್ತೊಬ್ಬ ಸಿಬ್ಬಂದಿ ಶಿವಕುಮಾರ್ ಕೂಡ, ಅಲ್ಲಿಯೇ ಇದ್ದ ಮತ್ತಿಬ್ಬರು ಸಾಲಗಾರರಾದ ಶಶಿಕಲಾ ಮತ್ತು ಶಾಂತಮ್ಮ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ. ನಿನ್ನ ಹೆಂಡತಿ ಪಡೆದಿರುವ ಸಾಲದ ಹಣ ಕೊಡು ಎಂದು ಶಾಂತಮ್ಮ ಅವರ ಪತಿ ಕೃಷ್ಣೇಗೌಡರ ಕೈ ಹಿಡಿದು ಎಳೆದಾಡಿದ. ಸ್ಥಳೀಯರು ಮಧ್ಯಪ್ರವೇಶಿಸಿ ಅವರನ್ನು ಅಲ್ಲಿಂದ ಕಳುಹಿಸಿದ್ದರು’ ಎಂದು ತಿಳಿಸಿದ್ದಾರೆ.

‘ನಂತರ ಮನು ಮತ್ತು ಶಿವಕುಮಾರ್ ಪದೇ ಪದೇ ಮನೆಯ ಬಳಿ ಬಂದು ಸಾಲದ ಕಂತು ಕಟ್ಟುವಂತೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತ, ತೊಂದರೆ ನೀಡುತ್ತಿದ್ದಾರೆ’ ಎಂದು ರವಿ ಮಂಗಳವಾರ ದೂರು ನೀಡಿದ್ದಾರೆ.

ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿದ ಕೊಣನೂರು ಪಿಎಸ್‌ಐ ಗಿರೀಶ್ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಿದರು.

ಹಾಸನ ಜಿಲ್ಲೆಯ ಕಾಳೇನಹಳ್ಳಿಗೆ ಮಂಗಳವಾರ ಭೇಟಿ ನೀಡಿದ ಕೊಣನೂರು ಠಾಣೆಯ ಪಿಎಸ್‌ಐ ಗಿರೀಶ್ ಸ್ಥಳೀಯರಿಂದ ಮಾಹಿತಿ ಪಡೆದರು

ಮನೆ ಜಪ್ತಿ: ಆತ್ಮಹತ್ಯೆಗೆ ಮಹಿಳೆ ಯತ್ನ

ಹಲಗೂರು (ಮಂಡ್ಯ ಜಿಲ್ಲೆ): ‘ಸಾಲದ ಕಂತು ಪಾವತಿಸಿಲ್ಲ’ ಎಂದು ಖಾಸಗಿ ಫೈನಾನ್ಸ್ ಕಂಪನಿಯವರು ಮನೆಯನ್ನು ಜಪ್ತಿ ಮಾಡಿದ್ದರಿಂದ, ಸಮೀಪದ ಕೊನ್ನಾಪುರದಲ್ಲಿ ಮಂಗಳವಾರ ಅಂದಾನಯ್ಯ ಎಂಬವರ ಪತ್ನಿ ಪ್ರೇಮಾ (59) ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿದೆ. ಈ ಸಂಬಂಧ ಪ್ರಕರಣ ದಾಖಲಾಗಿಲ್ಲ.

ಮಳವಳ್ಳಿ ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿ ದಿನಗೂಲಿ ನೌಕರರಾಗಿರುವ ಪ್ರೇಮಾ, ಮನೆ ನಿರ್ಮಿಸಲು 2018ರಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಯೊಂದರಲ್ಲಿ ₹6 ಲಕ್ಷ ಸಾಲ ಪಡೆದಿದ್ದರು. ಸಾಲದ 7 ಕಂತುಗಳು ವಿಳಂಬವಾಗಿದ್ದರಿಂದ, ನ್ಯಾಯಾಲಯದ ಆದೇಶದ ಮೇರೆಗೆ ವಾರದ ಹಿಂದೆ ಕಂಪನಿ ಅಧಿಕಾರಿಗಳು, ಪೊಲೀಸ್ ಭದ್ರತೆಯಲ್ಲಿ ಮನೆಯನ್ನು ಮುಟ್ಟುಗೋಲು ಹಾಕಿಕೊಂಡಿದ್ದರು.

‘ಪ್ರೇಮಾ ಅವರು ಕುಟುಂಬದೊಂದಿಗೆ ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡಿದ್ದರು. ಈ ಮಧ್ಯೆ, ಚೀಟಿ ವ್ಯವಹಾರದಲ್ಲಿ ಪಡೆದಿದ್ದ ₹1 ಲಕ್ಷವನ್ನು ಒಂದು ವಾರದೊಳಗೆ ಪಾವತಿಸುವಂತೆ ಗಡುವು ನೀಡಿದ್ದರಿಂದ ತೀವ್ರ ಒತ್ತಡಕ್ಕೆ ಸಿಲುಕಿದ್ದರು’ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಶಿಕ್ಷಕಿ ಪುಷ್ಪಲತಾ ಶವ ಪತ್ತೆ

ಹೊನ್ನಾಳಿ (ದಾವಣಗೆರೆ ಜಿಲ್ಲೆ): ಭಾನುವಾರ ಮಧ್ಯಾಹ್ನದಿಂದ ಕಾಣೆಯಾಗಿದ್ದ ಇಲ್ಲಿನ ದುರ್ಗಿಗುಡಿ ಪ್ರದೇಶದ ನಿವಾಸಿ, ಸರ್ಕಾರಿ ಶಾಲೆಯ ಶಿಕ್ಷಕಿ ಪುಷ್ಪಲತಾ ಎಂ.ಟಿ. (46) ಅವರ ಶವ ಮಂಗಳವಾರ ಬೆಳಿಗ್ಗೆ ತುಂಗಭದ್ರಾ ನದಿಯಲ್ಲಿ ಪತ್ತೆಯಾಗಿದೆ.

‘ಫೈನಾನ್ಸ್ ಕಂಪನಿಯವರ ಕಿರುಕುಳದಿಂದ ಬೇಸತ್ತು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದು’ ಎಂದು ಸೋಮವಾರ ಹೇಳಿಕೆ ನೀಡಿದ್ದ ಪುಷ್ಪಲತಾ ಅವರ ಪತಿ ಹಾಲೇಶ್, ‘ಪತ್ನಿಯು ಕೈಕಾಲು ಮುಖ ತೊಳೆಯಲು ನದಿಗೆ ಇಳಿಯುವ ಸಂದರ್ಭ ಕಾಲು ಜಾರಿ ಬಿದ್ದು ಮುಳುಗಿ ಸಾವಿಗೀಡಾಗಿರಬಹುದು. ಅವರ ಸಾವಿನ ಕಾರಣದ ಬಗ್ಗೆ ಯಾವುದೇ ಅನುಮಾನವಿಲ್ಲ’ ಎಂದು ಮಂಗಳವಾರ ಪೊಲೀಸರಿಗೆ ಹೇಳಿದ್ದಾರೆ.

ಕಿರುಕುಳ: ‘ರಕ್ಷಣೆ’ಗೆ ಬುರ್ಖಾ

ಬಾಗಲಕೋಟೆ: ನವನಗರದಲ್ಲಿ ವ್ಯಕ್ತಿಯೊಬ್ಬರು ಸಾಲಗಾರರ ಕಾಟ ತಪ್ಪಿಸಿಕೊಳ್ಳಲು ಬುರ್ಖಾ ಧರಿಸಿದ್ದರು. ಸಾಲ ಪಡೆದು ಬುರ್ಖಾ ಧರಿಸಿ ಕಣ್ತಪ್ಪಿಸಿ ಓಡಾಡುತ್ತಿದ್ದ ಅವರ ಮೇಲೆ ಸಾಲ ನೀಡಿದವರು ಹಲ್ಲೆ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಸೆಕ್ಟರ್ 47ರ ಅಹ್ಮದ್ ಹಲವರಿಂದ ಸಾಲ ಪಡೆದಿದ್ದರು. ಸಾಲ ಮರುಪಾವತಿ ಸಾಧ್ಯವಾಗದ್ದರಿಂದ ಬುರ್ಖಾ ಧರಿಸಿ, ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದರು. ಬುರ್ಖಾ ಧರಿಸಿದ್ದು ತಿಳಿದ ಸಾಲ ಕೊಟ್ಟವರು, ಅವರನ್ನು ಹಿಡಿದು ಥಳಿಸಿದ್ದಾರೆ.

ಸಾಲ ತೀರಿಸದವರ ಮನೆಗೆ ಬೀಗ

ಚಾಮರಾಜನಗರ: ಸಾಲ ಮರುಪಾವತಿಸದಿದ್ದಕ್ಕೆ ಸಂತೇಮರಹಳ್ಳಿಯಲ್ಲಿ ರಾಜೇಶ್ ಎಂಬುವರ ಮನೆಗೆ ಜನ ಸ್ಮಾಲ್ ಫೈನಾನ್ಸ್ ಕಂಪನಿ ಬೀಗ ಹಾಕಿದೆ.

ಟೈಲರ್ ವೃತ್ತಿಯ ರಾಜೇಶ್ ₹15 ಲಕ್ಷ ಸಾಲ ಪಡೆದು ಮನೆ ಕಟ್ಟಿಕೊಂಡಿದ್ದರು. ಪ್ರತಿ ತಿಂಗಳು ₹ 20 ಸಾವಿರ ಕಂತು ಭರಿಸಬೇಕಿತ್ತು. ಈಚೆಗೆ ಅಪಘಾತದಲ್ಲಿ ಕೈಗೆ ಪೆಟ್ಟಾಗಿ, ಕಂತು ಪಾವತಿಸುವುದು ವಿಳಂಬವಾಗಿದ್ದರಿಂದ ಕಂಪನಿಯವರು ಕೋರ್ಟ್‌ನಿಂದ ಆದೇಶ ಪಡೆದು ಮನೆ ಜಪ್ತಿ ಮಾಡಿದ್ದಾರೆ.

‘ಪತ್ನಿ, ಮೂವರು ಮಕ್ಕಳು, ತಾಯಿ ಇರುವ ನಮ್ಮ ಕುಟುಂಬಕ್ಕೆ ಸೂರಿಲ್ಲದಂತಾಗಿದೆ. ಈಗಾಗಲೇ ಕಟ್ಟಿರುವ ₹6 ಲಕ್ಷದಷ್ಟು ಕಂತನ್ನು ಬಡ್ಡಿಗೆ ಜಮೆ ಮಾಡಿಕೊಳ್ಳಲಾಗಿದೆ. ಮತ್ತೆ ₹ 8 ಲಕ್ಷ ಕಟ್ಟುವಂತೆ ಒತ್ತಡ ಹಾಕುತ್ತಿದ್ದಾರೆ. ದುಡಿಯಲು ಸಾಧ್ಯವಾಗದೆ ಸಾಲ ಮರುಪಾವತಿ ಕಷ್ಟವಾಗಿದೆ’ ಎನ್ನುತ್ತಾರೆ ರಾಜೇಶ್.

‘ನ್ಯಾಯಾಲಯದ ಆದೇಶದ ಮೇರೆಗೆ ಪೊಲೀಸರ ಸಮ್ಮುಖದಲ್ಲಿ ಮನೆಯ ಜಪ್ತಿಯಾಗಿದೆ. ಪ್ರಕರಣವನ್ನು ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಳ್ಳಬೇಕು’ ಎಂದು ಪೊಲೀಸರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಸುತ್ತೂರು ಜಾತ್ರೆ... ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಮಂಗಳವಾರ ಶಿವರಾತ್ರೀಶ್ವರರ ರಥೋತ್ಸವ ಜಾನಪದ ಕಲಾತಂಡಗಳ ಮೆರುಗಿನಲ್ಲಿ ಅದ್ದೂರಿಯಾಗಿ ನೆರವೇರಿತು

ಪ್ರಜಾವಾಣಿ ಚಿತ್ರ:ಅನೂಪ್ ರಾಘ .ಟಿ.

ಉದ್ಯಮಿಗಳ ಮನೆ ಮೇಲೆ ಐ.ಟಿ ದಾಳಿ

ಬೆಳಗಾವಿ: ನಗರದ ವಿವಿಧೆಡೆ ನಾಲ್ವರು ಉದ್ಯಮಿಗಳ ಮನೆಗಳ ಮೇಲೆ ಐಟಿ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿ, ದಾಖಲೆಗಳನ್ನು ವಶಕ್ಕೆ ಪಡೆದರು.

ಜಿಲ್ಲೆಯಲ್ಲಿ ಎರಡು ಸಕ್ಕರೆ ಕಾರ್ಖಾನೆ, ಕಬ್ಬಿಣ– ಉಕ್ಕು ಉದ್ಯಮ, ಗ್ರಾನೈಟ್ ಉದ್ಯಮ ಹೊಂದಿರುವ ಇಬ್ಬರು ಸಹೋದರರು, ಕ್ಯಾಂಪ್ ಪ್ರದೇಶ ಹಾಗೂ ಗಣೇಶಪುರದಲ್ಲಿರುವ ಕಬ್ಬಿಣ– ಉಕ್ಕು ಉದ್ಯಮಿಗಳ ಮನೆ ಮೇಲೆ ದಾಳಿ ನಡೆಸಿತು. ಗೋವಾ, ಬೆಂಗಳೂರು ಅಧಿಕಾರಿಗಳು ಈ ದಾಳಿ ತಂಡದಲ್ಲಿದ್ದಾರೆ. ಈ ನಾಲ್ವರೂ ಉದ್ಯಮಿಗಳು ಬೇರೆ ಬೇರೆ ದೇಶಗಳಲ್ಲೂ ತಮ್ಮ ಉದ್ಯಮ ಸ್ಥಾಪಿಸಿದ್ದಾರೆ.

ನನಗೇಕೆ ಆತಂಕ: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸುವ ಬಗ್ಗೆ ನನಗೇಕೆ ಆತಂಕವಾಗಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಪ್ರಕರಣವನ್ನು ಸಿಬಿಐಗೆ ವಹಿಸಬಹುದೆಂಬ ಆತಂಕವಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, ‘ನಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ ಇದೆ. ಮುಡಾ ಪ್ರಕರಣವೇ ರಾಜಕೀಯ ಪ್ರೇರಿತ’ ಎಂದು ಹೇಳಿದರು.

‘ಜಾರಿ ನಿರ್ದೇಶನಾಲಯದ ನೋಟಿಸಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ತನಿಖೆ ನಡೆಯುತ್ತಿದ್ದು, ಸಿಬಿಐಗೆ ಪ್ರಕರಣವನ್ನು ವಹಿಸುವ ಬಗ್ಗೆ ಚರ್ಚೆ ನಡೆಯುತ್ತಿದ್ದು, ವಾದ ನಡೆಯುವ ಹಂತದಲ್ಲಿದೆ. ಈ ಹಂತದಲ್ಲಿ ಆತುರ ಮಾಡುವುದು ಸರಿಯಲ್ಲ ಎಂದು ನ್ಯಾಯಮೂರ್ತಿಗಳೇ ಹೇಳಿದ್ದಾರೆ’ ಎಂದರು.

ಮೈಕ್ರೊ ಫೈನಾನ್ಸ್ ಹಾವಳಿ ತಡೆಗಟ್ಟಲು ಸುಗ್ರೀವಾಜ್ಞೆ ಹೊರಡಿಸುವ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಶಾಸಕ ಜಿ.ಟಿ. ದೇವೇಗೌಡ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: ‘ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ತಮ್ಮ ಸಹೋದರಿಯ ಪುತ್ರ ಮಹೇಂದ್ರ ಹೆಸರಿನಲ್ಲಿ ದೇವನೂರು ಗ್ರಾಮದ ಸರ್ವೆ ನಂ.81/2 ರಲ್ಲಿ 2.22 ಎಕರೆ ಜಮೀನನ್ನು ಖರೀದಿಸಿ, ಅದಕ್ಕೆ ಪರಿಹಾರ ನೀಡಿಲ್ಲ ಎಂದು ಮುಡಾದಿಂದ 50:50 ಅನುಪಾತದಲ್ಲಿ ಅಕ್ರಮವಾಗಿ 19 ನಿವೇಶನಗಳನ್ನು ಪಡೆದಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು’ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಮಂಗಳವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಅವರಿಗೆ ದೂರು ನೀಡಿದ್ದಾರೆ.

ದೂರಿನೊಂದಿಗೆ ಜಮೀನಿಗೆ ಸಂಬಂಧಿಸಿದ ಕೆಲವು ದಾಖಲೆಗಳು ಹಾಗೂ ಕೆಲವು ಫೋಟೊಗಳನ್ನು ಅವರು ಸಾಕ್ಷ್ಯವಾಗಿ ನೀಡಿದ್ದಾರೆ. ‘2.22 ಎಕರೆ ಜಮೀನು ಮಹೇಂದ್ರ ಅವರ ಹೆಸರಿಗೆ ನೋಂದಣಿಯಾಗಿದೆ. ಅದರಲ್ಲಿ ಮನೆಗಳಿರುವುದು ಗಮನಕ್ಕೆ ಬಂದಿದ್ದರೂ ಕೃಷಿ ಭೂಮಿ ಎಂದು ಅಧಿಕಾರಿಗಳು ಖಾತೆ ಮಾಡಲು ಆದೇಶಿಸಿದ್ದಾರೆ. ನಂತರ ಈ ದಾಖಲೆಗಳನ್ನು ಆಧರಿಸಿ ಮುಡಾದಲ್ಲಿ ಮಹೇಂದ್ರ ಅವರ ಹೆಸರಿಗೆ ಶೇ 50: 50 ಅನುಪಾತದಲ್ಲಿ ಬದಲಿ ನಿವೇಶನಗಳನ್ನು ಪಡೆದಿದ್ದಾರೆ’ ಎಂದು ಕೃಷ್ಣ ದೂರಿನಲ್ಲಿ ಆರೋಪಿಸಿದ್ದಾರೆ.

ಜಿ.ಟಿ.ದೇವೇಗೌಡ

‘ಈ ಜಾಗ ಮುಡಾ ಬಡಾವಣೆಯಾಗಿದ್ದು, ಅಲ್ಲಿ ನಿವೇಶನದಾರರು 20 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದು ತಿಳಿದಿದ್ದರೂ, 2020ರ ಸೆ. 23ರಂದು ಮೈಸೂರಿನ ಅಂದಿನ ತಹಶೀಲ್ದಾರ್ ಕೆ.ಆರ್. ರಕ್ಷಿತ್ ಅವರು ಕೃಷಿ ಭೂಮಿ ಎಂದು ಖಾತೆ ಮಾಡಲು ಆದೇಶ ಹೊರಡಿಸಿ ಲೋಪ ಎಸಗಿದ್ದಾರೆ. ಅಕ್ರಮಕ್ಕೆ ಸಹಕರಿಸಿರುವ ಮುಡಾ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು’ ಎಂದು ಅವರು ದೂರಿನಲ್ಲಿ ಕೋರಿದ್ದಾರೆ.

ಹರಪನಹಳ್ಳಿ ತಾಲ್ಲೂಕು ನಂದಿಬೇವೂರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಮಂಗಳವಾರ ಬಿಸಿಯೂಟ ಕೊಂಡೊಯ್ದ ಸಿಬ್ಬಂದಿ ಪ್ರಜಾವಾಣಿ ಚಿತ್ರ

ಶಾಲೆಗೆ ಬಂತು ಬಿಸಿಯೂಟ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ನಂದಿ ಬೇವೂರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲೇ ಮಂಗಳವಾರದಿಂದ ಬಿಸಿಯೂಟದ ವ್ಯವಸ್ಥೆ ಕಲ್ಪಿಸಲಾಗಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ವೆಂಕಟೇಶ್ ರಾಮಚಂದ್ರಪ್ಪ, ಜಿಲ್ಲಾ ಬಿಸಿಯೂಟ ಯೋಜನಾಧಿಕಾರಿ ಹೊರಪೇಟೆ ಶೇಖರಪ್ಪ ಅವರು ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿದರು. 11 ವರ್ಷದಿಂದ ಆಗದೆ ಇದ್ದ ವ್ಯವಸ್ಥೆಗೆ ಚಾಲನೆ ನೀಡಿದರು.

‘ಹಳೆಯ ಕಟ್ಟಡದಲ್ಲಿ ಬಿಸಿಯೂಟ ತಯಾರಿಸಿಕೊಂಡು ತಳ್ಳುವ ಬಂಡಿ ಮೂಲಕ ಪಾತ್ರೆಗಳನ್ನು ಸಾಗಿಸಿ 4ರಿಂದ 7ನೇ ತರಗತಿಯ 185 ವಿದ್ಯಾರ್ಥಿಗಳಿಗೆ ಹೊಸ ಕಟ್ಟಡದಲ್ಲೇ ಬಿಸಿಯೂಟ ಬಡಿಸಲಾಯಿತು’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಲೇಪಾಕ್ಷಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಸಿಯೂಟಕ್ಕಾಗಿ ವಿದ್ಯಾರ್ಥಿಗಳು ರಾಜ್ಯ ಹೆದ್ದಾರಿ ಮೂಲಕ ಒಂದು ಕಿ.ಮೀ. ನಡೆದು ಹೋಗಬೇಕಾದ ಸ್ಥಿತಿ ಕುರಿತು ಜನವರಿ 28ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಒಳಮೀಸಲು: ತಮಿಳುನಾಡು ಮಾದರಿ ಅನುಸರಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡು ಅರುಂಧತಿಯಾರ್ ಸಮುದಾಯಕ್ಕೆ ಕಲ್ಪಿಸಿರುವ ಪ್ರತ್ಯೇಕ ಮೀಸಲಾತಿ ಮಾದರಿಯಲ್ಲೇ ಕರ್ನಾಟಕದಲ್ಲೂ ಒಳಮೀಸಲಾತಿ ನೀಡಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿದೆ.

ನ್ಯಾಯಮೂರ್ತಿ ನಾಗಮೋಹನದಾಸ್ ಅವರನ್ನು ಆಯೋಗದ ಕಚೇರಿಯಲ್ಲಿ ಭೇಟಿ ಮಾಡಿದ ಮಹಾಸಭಾದ ಅಧ್ಯಕ್ಷ ಮುತ್ತಣ್ಣ ವೈ. ಬೆಣ್ಣೂರ, ಉಪಾಧ್ಯಕ್ಷ ಆಲೂರು ನಿಂಗರಾಜ್, ಸಂಘಟನಾ ಸಂಚಾಲಕ ಶಿವಾನಂದ ಟವಳಿ, ರಾಜಪ್ಪ ಶಾಮನೂರ್, ಎಂ.ದುರುಗೇಶ್, ಕರಿಯಪ್ಪ, ಸಂವಿಧಾನ ಜಾರಿಗೆ ಬಂದು ಏಳೂವರೆ ದಶಕಗಳು ಕಳೆದರೂ ಅಸ್ಪೃಶ್ಯತೆಯ ಆಚರಣೆ ಸಂಪೂರ್ಣ ನಿವಾರಣೆಯಾಗಿಲ್ಲ. ಮಾದಿಗ ಮತ್ತು ಅದರ ಸಹವರ್ತಿ ಜಾತಿಗಳು ಇಂದಿಗೂ ಶೋಷಣೆಗೆ ಒಳಗಾಗುತ್ತಲೇ ಇವೆ. ಇಂತಹ ಸಮುದಾಯದ ಜನರಿಗೆ ಒಳಮೀಸಲಾತಿ ಮೂಲಕ ಮರುಜೀವ ನೀಡಬೇಕಿದೆ. ಅದಕ್ಕೆ ಪೂರಕವಾಗಿ ಸುಪ್ರೀಂ ಕೋರ್ಟ್ ತೀರ್ಪು ಬಂದಿದೆ. ಈ ಸಮಯದಲ್ಲಿ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಎ.ಜೆ. ಸದಾಶಿವ ಆಯೋಗ, ಮಾಧುಸ್ವಾಮಿ ಸಂಪುಟ ಉಪಸಮಿತಿ ವರದಿ ಆಧಾರದಲ್ಲಿ ತಮಿಳುನಾಡು ಮಾದರಿ ಮೀಸಲಾತಿ ನೀಡಲು ಅಗತ್ಯ ಶಿಫಾರಸು ಮಾಡಬೇಕು ಎಂದು ಕೋರಿದರು.

ಮೀಸಲಾತಿ ಹೆಸರಿನಲ್ಲಿ ಅರ್ಹ ಶೋಷಿತರಿಗೆ ಮೋಸವಾಗುತ್ತಿದೆ. ಅಧ್ಯಯನದ ಅಂಕಿ–ಅಂಶಗಳು ಇದನ್ನು ಸಾಬೀತುಮಾಡಿವೆ. 2019ರಲ್ಲಿ ರಚಿಸಿದ ನ್ಯಾ. ನಾಗಮೋಹನದಾಸ್ ಆಯೋಗದ ಶಿಫಾರಸಿನಂತೆ ಹಿಂದಿನ ಸರ್ಕಾರ ಎಸ್‌ಸಿ ಮೀಸಲಾತಿಯನ್ನು ಶೇ 17ಕ್ಕೆ ಹೆಚ್ಚಳ ಮಾಡಿತ್ತು. ಈಗ ಒಳ ಮೀಸಲಾತಿ ವರ್ಗೀಕರಣದ ಮೂಲಕ ನ್ಯಾಯ ದೊರಕಿಸಬೇಕು ಎಂದರು.

ಒಳಮೀಸಲಾತಿ ವಿರೋಧಿಸುವ ಪರಿಶಿಷ್ಟ ಜಾತಿಗಳನ್ನು ಪ್ರತ್ಯೇಕ ಗುಂಪಾಗಿಸಬೇಕು. ಮಾದಿಗ ಮತ್ತು ಇತರೆ 29 ಉಪ ಜಾತಿಗಳಿಗೆ ಅಗತ್ಯ ಮೀಸಲಾತಿ ನಿಗದಿ ಮಾಡಲು ಶಿಫಾರಸು ಮಾಡಬೇಕು ಎಂದು ಕೋರಿದರು.

ಮೂವರಿಗೆ ‘ಅರಿವೇ ಗುರು’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ವಿ.ವಿ ನೀಡುವ ‘ಅರಿವೇ ಗುರು’ ಪ್ರಶಸ್ತಿಗೆ ಕಲಾ ಕ್ಷೇತ್ರದಿಂದ ಪ್ರೊ.ಚಂದ್ರಶೇಖರ ಕಂಬಾರ, ಸಮಾಜ ವಿಜ್ಞಾನ ಕ್ಷೇತ್ರದಿಂದ ಪ್ರೊ.ವಿ.ಜಿ.ತಳವಾರ ಮತ್ತು ವಿಜ್ಞಾನ ಕ್ಷೇತ್ರದಿಂದ ಪ್ರೊ. ಎನ್. ಎಂ. ಬುಜುರ್ಕೆ ಆಯ್ಕೆಯಾಗಿದ್ದಾರೆ. ಪುರಸ್ಕಾರವು ತಲಾ ₹25 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ.



ಚಂದ್ರಶೇಖರ ಕಂಬಾರ

ವಿ.ಜಿ.ತಳವಾರ

ಎನ್.ಎಂ. ಬುಜುರ್ಕೆ

ವಿ.ವಿ.ಯ ಸುವರ್ಣ ಮಹೋತ್ಸವ ಭವನದಲ್ಲಿ ಜ.29ರ ಬೆಳಿಗ್ಗೆ 11ಕ್ಕೆ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ಬಿ. ಪರಮಶಿವಮೂರ್ತಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001

ಸ್ಥಿರಾಸ್ತಿಯ ಇ–ಹರಾಜಿಗೆ ಮರು ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis')

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

SHORT DESCRIPTION OF THE IMMOVABLE PROPERTY
Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004.
Clear Title: RTC stands in the name of Competent Authority and Auctioning Authority

Sl. No.	DETAILS OF THE PROPERTY (Clear Title by Court in order No. MISC No. 558/2023)	MINIMUM BID PRICE (Rs)	EMD (Rs)	Bid Increase Value (Rs)
1	All the piece and parcel of land measuring 06 Acres 24 guntas in Sy.No.54/1 of Honnidibba Village, Kittur Taluk (Previously Bylahongala Taluk), Belagavi District, Bounded on: East: Land belonging to Chambayya Guruvaiah, West: Land belonging to Aravida Havala, North: Land belonging to Basappa Dastikoppa, South: Land belonging to Gayarana. Google Map Link: https://maps. app.goo.gl/3EX1nEA7A5UwL9YK8 Latitude and Longitude: 15°38'27.7"N 74°44'55.0"E	66,11,715/-	6,62,000/-	67,000/-
2	All the piece and parcel of land measuring 02 Acres 33 guntas in Sy.No.53/2 of Honnidibba Village, Kittur Taluk (Previously Bylahongala Taluk), Belagavi District, Bounded on: East: Land belonging to Basavayya Guruvaiah, West: Land belonging to Nagavva Basavappa Kotagi, North: Land belonging to Shivayya Guruvaiah, South: Land belonging to Gayarana. Google map Link: https://maps.app.goo.gl/ewbhV6RBmEPSj2v18 Latitude and Longitude: 15°38'31.7"N 74°44'58.7"E	28,30,014/-	2,83,000/-	29,000/-
3	All the piece and parcel of land measuring 01 Acres 20 guntas in Sy.No.170/A (New Sy.No.170/7) of Balekundri K.H Village, Bagevadi Hobli, Belgavi Taluk, Belgavi District, Bounded on: East: Remaining land of purchaser, West: Land belonging to Kashappa Kulkarni, North: Naala, South: Remaining land of purchaser. Google Map Link: https://maps.app.goo.gl/MRUNp8YKV68DkWji7 Latitude and Longitude: 15°51'10.0"N 74°37'11.2"E	34,43,602/-	3,45,000/-	35,000/-
4	All the piece and parcel of land measuring 01 Acres 10 guntas in Sy.No.170/B, New Sy.No.170/3 (Phoded from Sy.No.170/A & a170/B) Balekundri K.H Village, Bagevadi Hobli, Belgavi Taluk, Belagavi District, Bounded on: East: Land belonging to Nagappa Pakirappa Kakati, West: Land belonging to Kashappa Kulkarni, North: Land belonging to Nagappa Pakirappa Kakati South: Remaining land. Google Map link: https://maps.app. goo.gl/8uVrZzmsuf6EKuXKA Latitude and Longitude: 15.850844, 74.614785	28,69,668/-	2,87,000/-	29,000/-
5	All the piece and parcel of land measuring 60*95= 5700 Sq.ft (including 1200 Sq.ft. cement Sheet out house), Grama Panchayat No. 95, Hindalaga Grama Panchayath, Belagavi Taluk, Belagavi District, Bounded on: East: Plot No.109, West: Plot No.94, North: Bhangimarga , South: Road	2,55,32,415/-	25,54,000/-	2,56,000/-
	(Clear Title by Court in order No. MISC No. 966/2023)			
6	All the piece and parcel of land in Re Sy.No 163/2, measuring 5 Acre 01 guntas of Tadasaluru Village, Murugodu Hobli, Savadatthi Taluk Belagavi District. Bounded on: East: Land of Sri Parameshwara Kattimani, West: Land of Sri Basappa C Gowdra, North: By Road, South: By Road. Google Map link: https://maps.app.goo.gl/NnzUJViU1ukRvmURA Latitude and Longitude: 15°55'28.0"N 74°54'14.3"E	1,17,45,812/-	11,75,000/-	1,18,000/-
	(Clear Title by Court in order No. MISC No. 202/2024)			
7	All the piece and parcel of the agriculture land bearing Resurvey No. 148/1 measuring to an extent of 3 Acre 25 guntas Situated at Mannuru Village, Unchaganva Hobli, Belagavi Taluk, Belagavi District and the property is bounded by: East: Land property of Sri Gundunagappa Chougale, West: By Government gairana land in RS No.147, North: By remaining Part of RS No.148/3, South: Land property of Sri Bhavku Annappa Mandolkar. Google Map link: https://maps.app.goo.gl/Ej4ERfFtNRpBN6Sy5 Latitude and Longitude: 15°54'45.8"N 74°27'20.9"E	79,75,000/-	7,98,000/-	80,000/-
8	All the piece and parcel of the agriculture land bearing Resurvey No. 148/2 measuring to an extent of 9 Acre 0 guntas Situated at Mannuru Village, Unchaganva Hobli, Belagavi Taluk, Belagavi District and the property is bounded by: East: Land property of Sri ramudevappa patil and balku Narayan Chougale and danappa appu chougale, West: By Government Road, North: By remaining Part of RS No.148/3, South: Land property of Sri Bhavku Annappa Mandolkar. Google Map link: https://maps.app. goo.gl/m9vST7xSMBy7hDd29 Latitude and Longitude: 15°54'38.6"N 74°27'22.7"E	1,98,00,000/-	19,80,000/-	1,98,000/-
9	All the piece and parcel of the agriculture land bearing Resurvey No. 148/3 measuring to an extent of 0 Acre 10 guntas Situated at Mannuru Village, Unchaganva Hobli, Belagavi Taluk, Belagavi District and the property is bounded by: East: Land owned by Smt. Prema Anand Appugol West: Land Property of Sri Bhavku Annappa Mandolkar, North: Land owned by Chougale, South: Land owned by Smt. Prema Anand Appugol. Google Map link: https://maps.app.goo.gl/3QaK4LmJpr8UYKiJ7 Latitude and Longitude: 15°54'52.0"N 74°27'21.1"E	5,50,000/-	55,000/-	6000/-

ಪ್ರಿ–ಬಿಡ್ ಮೀಟಿಂಗ್ ದಿನಾಂಕ ಸಮಯ ಮತ್ತು ಸ್ಥಳ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
3ನೇ ಮಾರ್ಚ್ 2025, ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಸ್ಥಳ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ,3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01,	4ನೇ ಮಾರ್ಚ್ 2025, ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ	6ನೇ ಮಾರ್ಚ್ 2025, ಸಂಜೆ 5.00 ಗಂಟೆಯೊಳಗೆ	7ನೇ ಮಾರ್ಚ್ 2025 ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸಹಿ/–

ಸ್ಥಳ: ಬೆಂಗಳೂರು
ದಿನಾಂಕ: 23–01–2025

DIPR/CP/4627/ZEN/2024-25 ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಜಗತ್ತಿನಲ್ಲಿ ಹೇಳುವವರಿಗಿಂತ ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.

–ಗಳಗನಾಥ

ಮೈಕ್ರೊ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣಕ್ಕೆ ಬಿಗಿ ಕ್ರಮ ಅಗತ್ಯ

ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಸಂಸ್ಥೆಗಳಿಂದ ಸಾಲ ಪಡೆದಿರುವವರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವುದು, ದೌರ್ಜನ್ಯ ತಾಳಲಾರದೇ ಸಾಲಗಾರರು ಆತ್ಮಹತ್ಯೆಗೆ ಯತ್ನಿಸಿರುವುದು ಮತ್ತು ಪ್ರಾಣ ಕಳೆದುಕೊಂಡಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಸರಣಿಯೋಪಾದಿಯಲ್ಲಿ ವರದಿಯಾಗಿವೆ. ಬಡವರು ಮತ್ತು ದುಡಿಯುವ ವರ್ಗದ ಜನರಲ್ಲಿ ಉಳಿತಾಯ ಮನೋಭಾವವನ್ನು ಉತ್ತೇಜಿಸಲು ಮತ್ತು ತುರ್ತು ಅಗತ್ಯಗಳಿಗೆ ಸಾಲ ಪಡೆಯಲು ನೆರವಾಗುವ ಉದ್ದೇಶದಿಂದ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಆರಂಭವಾದವು. ಬ್ಯಾಂಕ್‌ಗಳ ಜೊತೆ ಸಂಪರ್ಕ ಸಾಧಿಸಿ ವಹಿವಾಟು ನಡೆಸಲು ಸಾಧ್ಯವಾಗದ ದುರ್ಬಲ ವರ್ಗಗಳನ್ನೇ ಗುರಿಯಾಗಿಸಿಕೊಂಡು ಆರಂಭವಾದ ಈ ಸಂಸ್ಥೆಗಳು, ಆರಂಭದಲ್ಲಿ ಆರೋಗ್ಯ, ಶಿಕ್ಷಣ, ಮದುವೆ ವೆಚ್ಚ ಭರಿಸುವಂತಹ ತೀರಾ ಅಗತ್ಯಗಳಿಗೆ ಸಾಲ ಒದಗಿಸುತ್ತಿದ್ದವು. ಆದರೆ, ಈಗ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ವಹಿವಾಟಿನ ಸ್ವರೂಪವೇ ಬದಲಾಗಿದೆ. ರಾಜ್ಯದಲ್ಲಿ 1.09 ಕೋಟಿ ಖಾತೆಗಳ ಮೂಲಕ ₹59,367 ಕೋಟಿ ಮೊತ್ತದ ಸಾಲವನ್ನು 31 ನೋಂದಾಯಿತ ಮೈಕ್ರೊ ಫೈನಾನ್ಸ್ ಕಂಪನಿಗಳು ನೀಡಿವೆ ಎಂಬ ಅಂಕಿಅಂಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲೇ ಹಂಚಿಕೊಳ್ಳಲಾಗಿದೆ. ನೋಂದಾಯಿತವಲ್ಲದ ಇನ್ನೂ ಹಲವು ಕಂಪನಿಗಳು ರಾಜ್ಯದಲ್ಲಿ ಹಣಕಾಸು ವಹಿವಾಟು ನಡೆಸುತ್ತಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಕಡೆಗಣಿಸಿ ಒಂದಕ್ಕಿಂತ ಹೆಚ್ಚು ಬಾರಿ ಸಾಲ ನೀಡಲಾಗುತ್ತಿದೆ. ಮೈಕ್ರೊ ಫೈನಾನ್ಸ್ ಸಂಸ್ಥೆಗಳ ವಹಿವಾಟು ವಿಸ್ತರಣೆಯ ದಾಹ ಮತ್ತು ಸಾಲ ವಿತರಣೆಗೆ ನೌಕರರಿಗೆ ನೀಡುತ್ತಿರುವ ಗುರಿಯು ಸಮಸ್ಯೆ ಬಿಗಡಾಯಿಸಲು ಕಾರಣವಾಗುತ್ತಿವೆ. ಪರಿಣಾಮವಾಗಿ ಜನ ಸಾಲದ ಬಲೆಗೆ ಸಿಲುಕಿ, ಮರುಪಾವತಿಸಲಾಗದೇ ಒದ್ದಾಡುತ್ತಿದ್ದಾರೆ.

ಆರ್‌ಬಿಐ ಮಾರ್ಗಸೂಚಿಗಳನ್ನು ಮೀರಿ ಸಾಲದ ವಹಿವಾಟು ನಡೆಸುವ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ದಿಟ್ಟ ನಿಲುವನ್ನು ಆರ್‌ಬಿಐ ಮತ್ತು ರಾಜ್ಯ ಸರ್ಕಾರ ಪ್ರದರ್ಶಿಸಬೇಕು

ಸದ್ಯ ಇರುವ ಕಾನೂನುಗಳ ಪ್ರಕಾರ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾತ್ರ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಮೇಲೆ ನೇರ ನಿಯಂತ್ರಣ ಹೊಂದಿದೆ. ಆರ್‌ಬಿಐ ಮಾರ್ಗಸೂಚಿಯ ಪ್ರಕಾರ, ಈ ಸಂಸ್ಥೆಗಳು ಒಬ್ಬ ವ್ಯಕ್ತಿಗೆ ₹2 ಲಕ್ಷಕ್ಕಿಂತ ಹೆಚ್ಚು ಸಾಲ ನೀಡುವಂತಿಲ್ಲ. ಸಾಲ ವಿತರಣೆಯಲ್ಲಿ ಮಾತ್ರವಲ್ಲ, ವಸೂಲಾತಿಯಲ್ಲೂ ಈ ಸಂಸ್ಥೆಗಳು ಕಾನೂನುಬಾಹಿರ ಮಾರ್ಗಗಳನ್ನು ಅನುಸರಿಸುತ್ತಿವೆ ಎಂಬುದು ಬಹಿರಂಗವಾಗಿದೆ. ಆರ್‌ಬಿಐ ಅನುಮತಿಸಿರುವುದಕ್ಕಿಂತಲೂ ಹೆಚ್ಚಿನ ಮೊತ್ತದ ಬಡ್ಡಿ ವಿಧಿಸುತ್ತಿರುವುದು, ಮರುಪಾವತಿ ವಿಳಂಬದ ಕಾರಣಕ್ಕೆ ದುಬಾರಿ ದಂಡ ವಿಧಿಸುವುದು ಸೇರಿದಂತೆ ಹಲವು ವಿಧಾನಗಳ ಮೂಲಕ ಈ ಸಂಸ್ಥೆಗಳು ಸಾಲಗಾರರ ಮೇಲೆ ದೌರ್ಜನ್ಯ ನಡೆಸುತ್ತಿವೆ ಎಂಬ ದೂರುಗಳಿವೆ. ಸಾಲ ವಸೂಲಾತಿಗೆ ಕೆಲವು ಸಂಸ್ಥೆಗಳು ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳನ್ನೂ ಬಳಸಿಕೊಳ್ಳುತ್ತಿರುವ ಆರೋಪಗಳಿವೆ. ಸಾಲಗಾರರು ಮತ್ತು ಜಾಮೀನುದಾರರ ಮೇಲೆ ಹಲ್ಲೆ ನಡೆಸುವುದು, ಬೆದರಿಕೆ ಹಾಕುವ ಮೂಲಕ ಮರುಪಾವತಿಗೆ ಒತ್ತಡ ಹೇರುತ್ತಿರುವುದೂ ನಡೆಯುತ್ತಿದೆ. ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಕಿರುಕುಳ, ದೌರ್ಜನ್ಯ ಎದುರಿಸಲಾಗದೇ ಜನ ಹೊಲ–ಗದ್ದೆ, ತೋಟಗಳಲ್ಲೇ ರಾತ್ರಿ ಕಳೆಯುತ್ತಿರುವಂತಹ ಅಮಾನವೀಯ ಪ್ರಕರಣಗಳೂ ವರದಿಯಾಗಿವೆ. ಮೈಕ್ರೊ ಫೈನಾನ್ಸ್ ಸಂಸ್ಥೆಗಳನ್ನು ನಿಯಂತ್ರಿಸುವ ಕ್ರಮಗಳ ಅನುಪಸ್ಥಿತಿ ಹಾಗೂ ಮೇಲುಸ್ತುವಾರಿಯ ಕೊರತೆಯೇ ಈಗ ಸೃಷ್ಟಿಯಾಗಿರುವ ಬಿಕ್ಕಟ್ಟಿಗೆ ಕಾರಣ.

ಬ್ಯಾಂಕ್‌ಗಳ ಸಂಪರ್ಕದಿಂದ ದೂರ ಉಳಿದ ಜನರಲ್ಲಿ ಹಣಕಾಸು ಸಾಕ್ಷರತೆ ಮೂಡಿಸಿ, ಉಳಿತಾಯಕ್ಕೆ ಉತ್ತೇಜಿಸಿ, ತುರ್ತು ಸಂದರ್ಭಗಳಲ್ಲಿ ಸಾಲ ಒದಗಿಸುವುದು ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಮೂಲ ಉದ್ದೇಶ. ಬಹುತೇಕ ಸಂಸ್ಥೆಗಳು ಈ ಉದ್ದೇಶದಿಂದ ವಿಮುಖವಾಗಿದ್ದು, ಲಾಭವನ್ನಷ್ಟೇ ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿವೆ. ಇಲ್ಲಿಯೇ ಸಮಸ್ಯೆಯ ಮೂಲ ಇರುವುದು. ಈಗ ಈ ಸಂಸ್ಥೆಗಳನ್ನು ನಿಯಂತ್ರಿಸಲು ಹೊಸ ಕಾನೂನು ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಸಂಸ್ಥೆಗಳ ನೋಂದಣಿಯನ್ನು ಕಡ್ಡಾಯಗೊಳಿಸುವುದರ ಜೊತೆಗೆ, ಅವುಗಳ ಚಟುವಟಿಕೆಯನ್ನು ನಿಯಂತ್ರಿಸುವ ಪ್ರಸ್ತಾವ ಕರಡು ಮಸೂದೆಯಲ್ಲಿದೆ. ಹೊಸ ಕಾನೂನು ಜಾರಿಯಾದ ತಕ್ಷಣವೇ ಈ ಸಮಸ್ಯೆ ನಿಯಂತ್ರಣಕ್ಕೆ ಬರುತ್ತದೆ ಎಂದು ಖಚಿತವಾಗಿ ಹೇಳಲಾಗದು. ಹೊಸ ಹಾದಿಗಳ ಮೂಲಕ ಇದೇ ಸಂಸ್ಥೆಗಳು ಚಟುವಟಿಕೆ ವಿಸ್ತರಿಸಬಹುದು ಅಥವಾ ಸ್ಥಳೀಯವಾಗಿ ಬಡ್ಡಿ ವ್ಯಾಪಾರಿಗಳ ಹಾವಳಿ ಹೆಚ್ಚಲೂಬಹುದು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಹಾಯವಾಣಿ ತೆರೆದು, ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಕಿರುಕುಳದ ಕುರಿತ ದೂರುಗಳನ್ನು ದಾಖಲಿಸಿಕೊಳ್ಳುವುದಕ್ಕೂ ಮುಖ್ಯಮಂತ್ರಿ ಆದೇಶಿಸಿದ್ದಾರೆ. ಇವೆಲ್ಲವೂ ತಾತ್ಕಾಲಿಕ ಪರಿಹಾರವನ್ನಷ್ಟೇ ಒದಗಿಸುತ್ತವೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಖಾಸಗಿ ವಲಯದ ಬೃಹತ್ ಬ್ಯಾಂಕ್‌ಗಳು ಬಡವರು, ದುಡಿಯುವ ವರ್ಗದ ಜನರಿಗೆ ಸಾಲ ಒದಗಿಸುವ ವಿಚಾರದಲ್ಲಿ ಹೊಂದಿರುವ ಬಿಗಿ ನಿಲುವನ್ನು ಬದಲಿಸಿಕೊಳ್ಳದ ವಿನಾ ಶಾಶ್ವತ ಪರಿಹಾರ ದೊರಕದು. ಬ್ಯಾಂಕ್‌ಗಳನ್ನು ಆ ದಾರಿಗೆ ತರಬೇಕಾದ ಹೊಣೆಗಾರಿಕೆ ಸರ್ಕಾರದ ಮೇಲಿದೆ. ಸಹಕಾರಿ ಸಂಸ್ಥೆಗಳನ್ನೂ ಸಮರ್ಪಕವಾಗಿ ಬಳಸಿಕೊಂಡು, ದುರ್ಬಲರಿಗೆ ಸಾಲ ಒದಗಿಸುವುದಕ್ಕೆ ಮುಂದಾಗಬೇಕು. ಸುಲಭವಾಗಿ ಸಾಲ ದೊರಕುತ್ತದೆ ಎಂದು ಮರುಪಾವತಿಯ ಸಾಮರ್ಥ್ಯವನ್ನು ಮೀರಿ ಸಾಲ ಪಡೆಯುವುದರಿಂದ ಎದುರಾಗಬಹುದಾದ ಸಂಕಷ್ಟಗಳ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕೆಲಸವೂ ಆಗಬೇಕು. ಕಾನೂನು ಮತ್ತು ಆರ್‌ಬಿಐ ಮಾರ್ಗಸೂಚಿಗಳನ್ನು ಮೀರಿ ಸಾಲದ ವಹಿವಾಟು ನಡೆಸಿ, ಬಡವರನ್ನು ಶೋಷಿಸುವ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ದಿಟ್ಟ ನಿಲುವನ್ನು ಆರ್‌ಬಿಐ ಮತ್ತು ರಾಜ್ಯ ಸರ್ಕಾರ ಪ್ರದರ್ಶಿಸಬೇಕು.

ದಿನದ ಟ್ವೀಟ್

ಪರಿಸರ ವ್ಯವಸ್ಥೆಗೆ ಧಕ್ಕೆಯಾಗದಿರಲಿ

ಬೆಂಗಳೂರು ನಗರದಲ್ಲಿ ಉದ್ದೇಶಿತ ಸುರಂಗ ರಸ್ತೆ ನಿರ್ಮಾಣ ಯೋಜನೆಯನ್ನು ವಿರೋಧಿಸುತ್ತೇನೆ... ಈ ಯೋಜನೆಯು ಬೆಂಗಳೂರಿನ ಪರಿಸರ ವ್ಯವಸ್ಥೆಯನ್ನು ದೊಡ್ಡ ಮಟ್ಟದಲ್ಲಿ ಹಾಳು ಮಾಡುತ್ತದೆ... ಸಬ್ ಅರ್ಬನ್ (ಉಪನಗರ) ರೈಲು, ಮೆಟ್ರೊ ರೈಲು, ಕೋಚುಗಳು, ರಸ್ತೆಗುಂಡಿ ಸರಿಪಡಿಸುವಿಕೆ, ಪಾದಚಾರಿ ಮಾರ್ಗಗಳು, ನಾಗರಿಕರ ಸುರಕ್ಷತೆಗೆ ಆದ್ಯತೆ ಸಿಗಬೇಕಾಗಿದೆ.

ನಿರಂಜನ ರಾಜ್ ಅರಸ್

ಕಿಡಿನುಡಿ

ಮೈಕ್ರೊ ಫೈನಾನ್ಸ್ ಕಂಪನಿಗಳು ತಾವು ನೀಡುವ ಸಾಲಕ್ಕೆ ವಿಧಿಸುವ ಷರತ್ತುಗಳು, ನಿಯಮಗಳು ಮತ್ತು ಕಾನೂನಿನ ಅಂಶಗಳನ್ನು ತಿಳಿಸುವವರು ಯಾರು?! ತಿಳಿದುಕೊಂಡಿರುವವರು ಯಾರು?! ನನಗೆ ಗೊತ್ತಿರುವ ಮಹಿಳೆಯೊಬ್ಬರು ಸಂಘದಲ್ಲಿ ಸಾಲ ಮಾಡಿದ್ದರು. ದುರದೃಷ್ಟವಶಾತ್ ಆಕೆಯ ಕೊಲೆಯಾಯಿತು. ಸಾಲಕ್ಕೆ ವಿಮೆ ಇರುತ್ತದೆ, ಆಕೆಯ ಸಾಲ ಮನ್ನಾ ಆಗುತ್ತದೆ ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು. ಆದರೆ, ಯಾವ ವಿಮೆಯೂ ಇಲ್ಲ, ಸಾಲ ಮನ್ನಾವೂ ಇಲ್ಲ. ಪೂರ್ತಿ ಸಾಲ ತೀರಿಸಬೇಕೆಂದು ಹಟ ಹಿಡಿದು ಆಕೆಯ ಚಿಕ್ಕ ಮಕ್ಕಳಿಗೆ ಹಿಂಸೆ ನೀಡಿ ವಸೂಲು ಮಾಡಿದ್ದಾರೆ. ಇದು, ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಸಂಬಂಧಿಸಿದ ವಾಸ್ತವ.

ತಿಪ್ಪೇಸ್ವಾಮಿ ಜಿ.

25 ವರ್ಷಗಳ ಹಿಂದೆ

ಶನಿವಾರ, 29-1-2000

● **ಶಾಲಾ ದೇಣಿಗೆ: ತಜ್ಞರ ಸಮಿತಿ ರಚನೆಗೆ ಸೂಚನೆ**

ಬೆಂಗಳೂರು, ಜ. 28– ಕರ್ನಾಟಕ ಶಿಕ್ಷಣ ಕಾಯ್ದೆಯಲ್ಲಿ ಸೂಚಿಸಿರುವಂತೆ ಎರಡು ವಾರದಲ್ಲಿ ತಜ್ಞರ ಸಮಿತಿ ರಚಿಸಬೇಕೆಂದು ಹೈಕೋರ್ಟ್ ಇಂದು ಸರ್ಕಾರಕ್ಕೆ ಆದೇಶಿಸಿತು.

ಈ ಆದೇಶದ ಪಾಲನೆ ಬಗ್ಗೆ ಕೋರ್ಟ್‌ಗೆ ವರದಿ ಸಲ್ಲಿಸಬೇಕೆಂದು ಶಿಕ್ಷಣ ನಿರ್ದೇಶಕರಿಗೆ ಸೂಚನೆ ನೀಡಿತು.

ವಕೀಲರಾದ ಕೆ.ಎನ್. ಸುಬ್ಬಾರೆಡ್ಡಿ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಸಲ್ಲಿಸಿ, ಖಾಸಗಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ನೀಡುವ ವೇಳೆ ಭಾರಿ ಮೊತ್ತದ ವಂತಿಗೆ ಪಡೆಯುವುದಲ್ಲದೆ, ಹೆಚ್ಚಿನ ಮೊತ್ತದ ಶುಲ್ಕ ವಸೂಲಿ ಮಾಡುತ್ತಿದ್ದು, ಇದನ್ನು ನಿಲ್ಲಿಸಲು ಆದೇಶಿಸಬೇಕೆಂದು ಕೋರಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 29-1-1975

● **ಆಯೋಗದ ಕೆಲಸಕ್ಕೆ ಹಾನಿ: ಹಾವನೂರು**

ಬೆಂಗಳೂರು, ಜ. 28– ತಮ್ಮ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡಿರುವುದರ ಉದ್ದೇಶ ಹಿಂದುಳಿದ ವರ್ಗಗಳ ಆಯೋಗದ ಕೆಲಸಕ್ಕೆ ಹಾನಿಯನ್ನುಂಟು ಮಾಡುವುದು ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಎಲ್.ಜಿ. ಹಾವನೂರು ಆಪಾದಿಸಿದ್ದಾರೆ.

'ನಿಮ್ಮ ವಿರುದ್ಧ ಶಿಸ್ತಿನ ಕ್ರಮದ ಉದ್ದೇಶ ಹಿಂದುಳಿದ ವರ್ಗಗಳ ಆಯೋಗದ ಕೆಲಸಕ್ಕೆ ಹಾನಿಯನ್ನುಂಟು ಮಾಡುವುದೇ?' ಎಂದು ಇಂದು ಪತ್ರಿಕಾಗೋಷ್ಠಿಯಲ್ಲಿ ಕೇಳಲಾದ ಪ್ರಶ್ನೆಗೆ ಹಾವನೂರು ಉತ್ತರ ನೀಡುತ್ತಾ, 'ಅದೇ ನನ್ನ ಆಪಾದನೆ. ಕೆ.ಎಚ್. ಪಾಟೀಲರು ಮಂತ್ರಿಯಾಗಿದ್ದಾಗಲೇ ಆಯೋಗದ ರಚನೆಯನ್ನು ವಿರೋಧಿಸಿದರು. ನನ್ನ ಈ ಆಪಾದನೆಯನ್ನು ಅವರು ನಿರಾಕರಿಸಿಲ್ಲ' ಎಂದರು.

● **ನಗರ ಆಸ್ತಿ ಮಿತಿ ವಿಧೇಯಕ ಸಿದ್ಧ**

ನವದೆಹಲಿ, ಜ. 28– ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ನಗರ ಆಸ್ತಿ ಮಿತಿ ವಿಧೇಯಕ ಸಿದ್ಧವಾಗಿದ್ದು, ಅದನ್ನು ಮುಂದಿನ ಸಂಸತ್ ಅಧಿವೇಶನದಲ್ಲಿ ಮಂಡಿಸುವ ಸಂಭವವಿದೆ.

ಇದಕ್ಕೆ ಮೊದಲು, ಕರಡು ವಿಧೇಯಕವನ್ನು ರಾಜಕೀಯ ವ್ಯವಹಾರಗಳ ಸಮಿತಿಯಲ್ಲಿ ಚರ್ಚಿಸಲಾಗುವುದು ಎಂದು ತಿಳಿದುಬಂದಿದೆ.

ಪ್ರಕೃತಿಯ ನಾಶಕ್ಕೆ ಕಾರಣವಾಗುವ ಬೃಹತ್ ಯೋಜನೆಗಳ ಪ್ರಯೋಜನ ನಗಣ್ಯ

ದ್ವೇಷ ಬಿಡಿ, ಪರಿಸರ ಕಾಪಾಡಿ

ವಿಶ್ಲೇಷಣೆ

ಅ.ನ.ಯಲ್ಲಪ್ಪ ರೆಡ್ಡಿ

ಜಗತ್ತು ಅಣ್ವಸ್ತ್ರಗಳನ್ನು ಹೊಂದಬೇಕೇ ಬೇಡವೇ ಎಂಬ ಬಗ್ಗೆ ಪರ– ವಿರೋಧದ ಚರ್ಚೆಗಳು ಜಾಗತಿಕವಾಗಿ ತೀವ್ರಗತಿಯಲ್ಲಿ ನಡೆಯುತ್ತಿದ್ದ ಕಾಲಘಟ್ಟ ಅದು. ಭಾರತವೂ ಅದರಿಂದ ಹೊರತಾಗಿರಲಿಲ್ಲ. ಹೆಚ್ಚಿನವರು ದೇಶವು ಅಣ್ವಸ್ತ್ರವನ್ನು ಹೊಂದುವುದರ ವಿರುದ್ಧವಾಗಿದ್ದರು. ಆದರೆ ಜಾಗತಿಕ ನಾಯಕರು ಎನಿಸಿಕೊಂಡವರು ಅತ್ಯಾಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಅಣ್ವಸ್ತ್ರಗಳನ್ನೂ ಹೊಂದಲು ಉತ್ಸುಕರಾಗಿದ್ದರು. ಅವುಗಳಿಂದ ಸಾಮೂಹಿಕ ವಿನಾಶ ಸಾಧ್ಯ ಎಂಬುದು ತಿಳಿದಿದ್ದರೂ ಅವುಗಳನ್ನು ಹೊಂದುವ ಹಂಬಲ ಅವರನ್ನು ಬಿಟ್ಟಿರಲಿಲ್ಲ.

ಆ ಸಮಯದಲ್ಲಿ ನನ್ನ ವೃತ್ತಿ ಜೀವನದ ಉತ್ಕರ್ಷದ ಕಾಲದಲ್ಲಿದ್ದ ನನಗೆ, ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರೊಂದಿಗೆ ಒಡನಾಡುವ ಅವಕಾಶ ದೊರೆತಿತ್ತು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನೀತಿನಿಯಮಗಳ ಬಗ್ಗೆ ಮಾತ್ರವಲ್ಲದೆ ಅಣ್ವಸ್ತ್ರಗಳ ಸಾಧಕ–ಬಾಧಕದಂತಹ ಗಂಭೀರವಾದ ಸಂಗತಿಗಳ ಬಗ್ಗೆಯೂ ಅವರೊಂದಿಗೆ ಚರ್ಚೆ ನಡೆಸುತ್ತಿದ್ದೆ. ಜನಸಾಮಾನ್ಯರ ತೆರಿಗೆಯ ಹಣದಲ್ಲಿ ಇಂತಹ ಅನಾಹುತಕಾರಿ ಅಸ್ತ್ರಗಳನ್ನು ಹೊಂದುವುದು ಎಷ್ಟು ಸರಿ ಎಂಬಂತಹ ಮಾತುಕತೆಯೂ ನಮ್ಮ ನಡುವೆ ನಡೆಯುತ್ತಿತ್ತು.

ಎಂಬತ್ತರ ದಶಕದಲ್ಲಿ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು, ವಕೀಲರು ಹಾಗೂ ನ್ಯಾಯಾಧೀಶರ ರಾಷ್ಟ್ರ ಮಟ್ಟದ ಸಮಾವೇಶವೊಂದನ್ನು ಕಾರವಾರದಲ್ಲಿ ಏರ್ಪಡಿಸಿದ್ದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ಆ ಸಮಾವೇಶದಲ್ಲಿ ಆಡಿದ ಮಾತುಗಳು ಇಂದಿಗೂ ನನ್ನ ಮನಃಪಟಲದಲ್ಲಿ ಅಚ್ಚಳಿಯದೇ ಉಳಿದಿವೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಅಗತ್ಯ ಹಾಗೂ ಅದಕ್ಕೆ ಹೆಚ್ಚು ಒತ್ತು ನೀಡಬೇಕಾಗಿರುವುದರ ಕುರಿತು ಅವರು ಅಂದು ವಿಸ್ತೃತವಾಗಿ ಮಾತನಾಡಿದ್ದರು. ಸಾರ್ವಜನಿಕರ ಅಳಲನ್ನು ಆಲಿಸಲು ಕೋರ್ಟುಗಳು ಆದ್ಯತೆ ನೀಡಬೇಕು ಮತ್ತು ಗಂಭೀರವಾಗಿ ಆಲಿಸಬೇಕು, ಅದಕ್ಕೆ ತಕ್ಕಂತೆ ತಮ್ಮ ತೀರ್ಪುಗಳನ್ನು ಕೊಡಬೇಕು ಎಂದು ಅಂದು ಅವರು ಹೇಳಿದ್ದರು. ಅವರ ಮಾತುಗಳು ಪ್ರಾಯಶಃ ಈ ದಿಸೆಯಲ್ಲಿ ಒಂದು ರೀತಿ ಸಾಮಾಜಿಕವಾಗಿ ಕ್ರಾಂತಿಕಾರಿ ಬದಲಾವಣೆಯನ್ನು ತರಲು ಸಹಾಯಕವಾದವು. ಕಾರವಾರ ಸಮೀಪದ ಕೈಗಾದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಅಣು ವಿದ್ಯುತ್ ಸ್ಥಾವರಕ್ಕೆ ಅದಾಗಲೇ ಶಿವರಾಮ ಕಾರಂತ ಅವರು ಉಗ್ರ ವಿರೋಧ ವ್ಯಕ್ತಪಡಿಸಿದ್ದರು. ಆದರೆ ಅದೆಲ್ಲವನ್ನೂ ಮೀರಿ ಅಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಾಣಗೊಂಡಿತು. ತದನಂತರ ದಲ್ಲಿ ಅದು ಹೇಗೆ ಕಳಚೆ ಮತ್ತು ಬಾರೆ ಗ್ರಾಮಗಳನ್ನು ನುಂಗಿಹಾಕಿತು, ಪರಿಸರ ಎಷ್ಟು ಕಲುಷಿತವಾಯಿತು ಎಂಬಂತಹ ಸಂಗತಿಗಳು ಪರಿಸರದ ಬಗ್ಗೆ ಆಸಕ್ತಿ ಇರುವ ಎಲ್ಲರಿಗೂ ಗೊತ್ತೇ ಇವೆ.

ಎರಡನೇ ಮಹಾಯುದ್ಧದಲ್ಲಿ ಅಣುಬಾಂಬ್ ಪ್ರಯೋಗ ಮಾಡಿದ್ದರ ಪರಿಣಾಮ ಮತ್ತು ಆ ದುರಂತದಿಂದ ಹೊರಬರಲಾಗದೇ ಒದ್ದಾಡಿದ ಜನಸಮೂಹದ ಕಥೆ ನಮ್ಮ ಕಣ್ಣ ಮುಂದೆ ಇದೆ. ಈಗಿನ ವರದಿಗಳ ಪ್ರಕಾರ, ಅಮೆರಿಕ, ಚೀನಾ, ಭಾರತ, ಪಾಕಿಸ್ತಾನ, ಉತ್ತರ ಕೊರಿಯಾ ಸೇರಿದಂತೆ ವಿಶ್ವದ ಕೆಲವು ರಾಷ್ಟ್ರಗಳು ಇಂದು ಅಣುಬಾಂಬನ್ನು ಗುರಾಣಿಯಂತೆ ತಮ್ಮ ಬಳಿ ಇಟ್ಟುಕೊಂಡಿವೆ. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಗುಂಡಿ ಒತ್ತಿದರೆ ಸಾಕು, ತಮ್ಮ ಶತ್ರುರಾಷ್ಟ್ರದ ಪ್ರಮುಖ ನೆಲೆಗಳನ್ನು ಸುಟ್ಟು ಬೂದಿ ಮಾಡಬಲ್ಲ ಶಕ್ತಿ ಆ ಬಾಂಬುಗಳಿಗೆ ಇದೆ. ಇದಕ್ಕೆ ಹೊರತಾಗಿ ಸಹಸ್ರಾರು ಕ್ಷಿಪಣಿಗಳೂ ಈ ದೇಶಗಳ ಬಳಿ ಇವೆ. ಆದರೆ ಇವೆಲ್ಲ ಯಾಕೆ ಬೇಕು? ಈ ಸ್ವರ್ಗಸಮಾನ ಭೂಮಿಯನ್ನು ಹಾಳುಗೆಡವಿ, ಜನಜೀವನ ಸೇರಿದಂತೆ ಎಲ್ಲ ಪ್ರಾಣಿಸಂಕುಲ ಮತ್ತು ಜೈವಿಕ ವೈವಿಧ್ಯವನ್ನು ನಾಶ ಮಾಡಿಬಿಡಬಲ್ಲ ಅಣುಶಕ್ತಿ ನಮಗೆ ಬೇಕೆ? ಖಂಡಿತವಾಗಿ ಬೇಕಿಲ್ಲ. ಬೇಕಿರುವುದು ಪರಸ್ಪರ ಪ್ರೀತಿ, ಸೌಹಾರ್ದದ ನಡವಳಿಕೆ, ಅಲ್ಲವೇ?

ತಾನು ಇನ್ನೊಬ್ಬನಿಗಿಂತ ಬಲಾಢ್ಯನಾಗಬೇಕು ಎಂಬ ಹುಂಬ ಹಂಬಲದಲ್ಲಿ ಇಂತಹ ಅಪಾಯಕಾರಿ ಬೆಳವಣಿಗೆಗಳು ನಡೆಯುತ್ತಿವೆ. ಜಾನ್ ಮಿಲ್ಟನ್ ಎಂಬ ಕವಿ ಬಹಳ ಹಿಂದೆಯೇ ತನ್ನ 'ಪ್ಯಾರಡೈಸ್ ಲಾಸ್ಟ್' ಎಂಬ ಕೃತಿಯಲ್ಲಿ ಈ ಬಗೆಯ ಅಪಾಯಗಳ ಬಗ್ಗೆ ಬಹಳಷ್ಟು ಬರೆದಿದ್ದಾನೆ. ವಿಜ್ಞಾನಿ ಸ್ಟೀಫನ್ ಹಾಕಿಂಗ್ ಸಹ ಈ ಕುರಿತು ಎಚ್ಚರಿಕೆಯ ಮಾತುಗಳನ್ನು ಆಡಿದ್ದಾರೆ.

ಭೂಮಿತಾಯಿ ಪೊರೆಯುತ್ತಾ ಬಂದಿರುವ ಸಮಸ್ತ ಜೀವರಾಶಿಗಳನ್ನು, ಅದರಲ್ಲೂ ಮಹಿಳೆಯರು ಮತ್ತು ಮಕ್ಕಳನ್ನು ಗುರಿಯಾಗಿಸಿಕೊಂಡು ನಡೆಯಬಹುದಾದ ಅಣುದಾಳಿಗಳು ತಂದೊಡ್ಡಬಹುದಾದ ಘನಘೋರ ಪರಿಣಾಮಗಳು ಊಹೆಗೂ ನಿಲುಕದಂಥವು. ಈ ಸ್ವರ್ಗಸದೃಶ ಭೂಮಿಯಲ್ಲಿ ಎಲ್ಲ ಬಗೆಯ ಸಸ್ಯ-ವೃಕ್ಷ ಸಂಕುಲಗಳ ಜೊತೆಗೆ ಜೀವನವಿಧಾನಗಳು ರೂಪುಗೊಂಡು ಅಭಿವೃದ್ಧಿ ಹೊಂದುವುದಕ್ಕೆ ಕೋಟಿಗಟ್ಟಲೆ ವರ್ಷಗಳೇ ಸಂದಿವೆ. ಅದನ್ನು ಉಳಿಸಿ ಬೆಳೆಸಿ ಮುನ್ನಡೆಸುವುದರ ಬಗ್ಗೆ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಕಾರಾತ್ಮಕ ಚಿಂತನೆ ಆಗಬೇಕೇ ವಿನಾ ವಿನಾಶಕಾರಿ ಸಂಗತಿಗಳತ್ತ ಯಾರೂ ಗಮನ ಹರಿಸಬಾರದು.

ಅಣುಬಾಂಬುಗಳ ತಯಾರಿಕೆಗೆ ಬೃಹತ್ ರಾಷ್ಟ್ರಗಳು ಸಜ್ಜಾಗುತ್ತಿದ್ದ ಸಂದರ್ಭದಲ್ಲಿ 'ಇದನ್ನು ತಡೆಯಿರಿ, ನಿಷೇಧ ಹೇರಿ' ಎಂದು ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಮತ್ತು ತತ್ವಜ್ಞಾನಿ ಬರ್ಟ್ರಂಡ್ ರಸಲ್ ಮನವಿ ಮಾಡಿದ್ದರು. ಆದರೆ ಯಾರೂ ಅದನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಈಗಲೂ ತಮ್ಮ ರಾಜಕೀಯ ಲಾಭಕ್ಕಾಗಿ ಅಣುಬಾಂಬನ್ನು ದಾಳವಾಗಿ ಬಳಸುವುದರ ಮೂಲಕ ವಿಶ್ವದಲ್ಲಿ ತಾನು ಶಕ್ತಿಶಾಲಿ ಎಂದು ಬಿಂಬಿಸುವ ಹಪಹಪಿಯಲ್ಲೇ ಎಲ್ಲ ದೇಶಗಳೂ ಮುನ್ನುಗ್ಗುತ್ತಿವೆ. ಇದೊಂದು ಬಗೆಯ ಕ್ರೂರ ವ್ಯಂಗ್ಯ. ನಮ್ಮ ಇಂದಿನ ವಿಜ್ಞಾನಿಗಳ ಸಮೂಹ ಇಂತಹ ವಿಕೃತಿಗಳಿಗೆ ಏಕೆ ಬೆಂಬಲ ಕೊಡುತ್ತಿದೆಯೋ ಅರ್ಥವಾಗುತ್ತಿಲ್ಲ.

ಸ್ವಾರ್ಥ ಮತ್ತು ಸ್ವಪ್ರತಿಷ್ಠೆಯೇ ಮುಖ್ಯವಾಗಿರುವ ಈ ಕಾಲಘಟ್ಟದಲ್ಲಿ ಮಾನವೀಯತೆಯ ಉಳಿವಿಗೆ ಆದ್ಯತೆ ಕೊಡುವತ್ತ ಎಲ್ಲರೂ ಗಮನ ಹರಿಸಬೇಕಿದೆ. ಇಂದಿನ ಯುವಸಮೂಹ ಇಂತಹ ವಿಚಾರಗಳ ಬಗ್ಗೆ ದನಿ ಎತ್ತಬೇಕು ಮತ್ತು ಸಾಮಾಜಿಕವಾಗಿ ಸಕ್ರಿಯವಾಗಬೇಕು. ಅಣುಬಾಂಬುಗಳ ವಿಚಾರದಲ್ಲಿ ಚೀನಾ ದೇಶ ಇಡೀ ವಿಶ್ವಕ್ಕೇ ಸಂಚಕಾರ ತರಬಲ್ಲ ಅಪಾಯಕಾರಿ ದೇಶವೆಂದು ಬಿಂಬಿತವಾಗಿದೆ. 2025ನೇ ವರ್ಷವನ್ನು ಪ್ರವೇಶಿಸಿರುವ ಈ ಸಂದರ್ಭದಲ್ಲಿ ನಮ್ಮ ಘೋಷವಾಕ್ಯ 'ಇಡೀ ವಿಶ್ವವನ್ನು ಸಾಮೂಹಿಕ ವಿನಾಶದ ಅಪಾಯದಿಂದ ಕಾಪಾಡೋಣ, ಜನಕಂಟಕವಾಗಿರುವ ಯುದ್ಧೋನ್ಮಾದವನ್ನು ಹತ್ತಿಕ್ಕಿ ಶಾಂತಿ ಸ್ಥಾಪನೆ ಮಾಡೋಣ' ಎಂಬುದಾಗಬೇಕು.

ಇಷ್ಟೆಲ್ಲ ವಿಜ್ಞಾನ-ತಂತ್ರಜ್ಞಾನಗಳಿದ್ದರೂ ಲಾಸ್ ಏಂಜಲೀಸ್‌ನಲ್ಲಿ ಇತ್ತೀಚೆಗೆ ಕಾಳ್ಗಿಚ್ಚಿನಿಂದಾದ ದುರಂತವನ್ನು ತಪ್ಪಿಸಲು ಅಥವಾ ಪರಿಣಾಮಕಾರಿಯಾಗಿ ನಿಗ್ರಹಿಸಲು ಅಮೆರಿಕ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಅಂತಹದ್ದೊಂದು ಬೃಹತ್ ದುರಂತದಿಂದ ಆಗಿರುವ ಅಪಾಯ, ಅನಾಹುತ ವಿಶ್ವಸಮುದಾಯವನ್ನೇ ತಲ್ಲಣಗೊಳಿಸಿದೆ. ನಮ್ಮ ದೇಶದ ನೀಲಗಿರಿ ಜೀವವೈವಿಧ್ಯ ವನಗಳ ಬಗ್ಗೆಯೂ ನಾವು ಎಚ್ಚರ ವಹಿಸಬೇಕು. ಅಲ್ಲೆಲ್ಲ ಇಂತಹ ಅನಾಹುತಗಳು ಸಂಭವಿಸಿದರೆ ಆಗಬಹುದಾದ ಹಾನಿ ಊಹಿಸಲು ಅಸಾಧ್ಯ. ನಮ್ಮ ಸರ್ಕಾರಗಳು ಮತ್ತು ಸಂಬಂಧಪಟ್ಟ ಇಲಾಖೆಗಳು ಈ ವಿಷಯದಲ್ಲಿ ಮೌನವಾಗಿವೆ. ಆ ಮೌನ ಇನ್ನಷ್ಟು ಅಪಾಯಕಾರಿ.

ನಂದಿ ಬೆಟ್ಟದ ಪರಿಸರವನ್ನು ಕಾಪಾಡಿ ಎಂಬ ಕರೆಯೊಂದಿಗೆ ಜವಾಬ್ದಾರಿಯುತ ನಾಗರಿಕರ ಗುಂಪೊಂದು ಹೈಕೋರ್ಟಿನಲ್ಲಿ ಇತ್ತೀಚೆಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದೆ. ನಂದಿಬೆಟ್ಟವು ಅಪೂರ್ವ ಜೈವಿಕ ವೈವಿಧ್ಯದ ತಾಣವಾಗಿದ್ದು, ಇದನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಿ ಸಂರಕ್ಷಣೆ ಮಾಡಬೇಕಾಗಿದೆ.

ಭಾರತ ಸರ್ಕಾರ ಸಹ ಮನುಷ್ಯನ ದುರಾಸೆಗೆ ಪುಷ್ಟಿ ಕೊಡುವಂತಹ ನದಿ ತಿರುವು ಯೋಜನೆಗೆ ಕೈಹಾಕಿದೆ. ಇದರಿಂದ ನದಿ-ಬೆಟ್ಟಗಳು ಸಾಯುತ್ತವೆ, ಜಲಾನಯನ ಪ್ರದೇಶಗಳು ಬರಿದಾಗುತ್ತವೆ. ನಿಸರ್ಗಕ್ಕೆ ವಿರುದ್ಧವಾದ ಯಾವ ಪ್ರಕ್ರಿಯೆಯನ್ನು ನಡೆಸಿದರೂ ಅದು ಕೊಡುವ ಪ್ರತಿಫಲ ಶೂನ್ಯವಾಗಿರುತ್ತದೆ ಮತ್ತು ಮಾರಕವಾಗಿರುತ್ತದೆ. ವಿಚಿತ್ರ ಕಾಯಿಲೆಗಳಿಗೆ ಜನ ಗುರಿಯಾಗುತ್ತಾರೆ. ಇವೆಲ್ಲವೂ ವೈಜ್ಞಾನಿಕವಾಗಿ ನಡೆಯಬಹುದಾದ ಸಂಗತಿಗಳು. ಹಾಗಾಗಿ, ತಲೆಬುಡವಿಲ್ಲದ, ನಿಸರ್ಗವಿರೋಧಿ ಬೃಹತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಭೂಗರ್ಭ ಶಾಸ್ತ್ರಜ್ಞರು, ಜಲತಜ್ಞರು, ಪರಿಸರ ವಿಜ್ಞಾನಿಗಳ ಜೊತೆ ಸರ್ಕಾರಗಳು ಸಂಶೋಧನಾತ್ಮಕ ಚಿಂತನೆ ಮತ್ತು ಸಮಾಲೋಚನೆ ನಡೆಸಬೇಕು. ಇಲ್ಲದೇಹೋದರೆ ಭವಿಷ್ಯದಲ್ಲಿ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ವಿನಾಶಕಾರಿ ಯೋಜನೆಗಳಿಂದ ರಾಜಕಾರಣಿಗಳಿಗೆ ರುಷುವತ್ತು ಸಿಗಬಹುದು, ಗುತ್ತಿಗೆದಾರರು, ಎಂಜಿನಿಯರುಗಳು ದುಡ್ಡು ಮಾಡಿಕೊಳ್ಳಬಹುದೇ ವಿನಾ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನ ಆಗದು.

ಚುರುಮುರಿ

ಮೈಕ್ರೊ ಭಯಾಲಜಿ

● ಮಣ್ಣೆ ರಾಜು

ಚಟ್ನಹಳ್ಳಿಯಲ್ಲಿ ಹಲವು ಮನೆಗಳಿಗೆ ಬೀಗ ಬಿದ್ದಿತ್ತು. ಅಲ್ಲೊಂದು ಇಲ್ಲೊಂದು ಮನೆಯಲ್ಲಿ ವಯಸ್ಸಾದವರು, ಕೈಲಾಗದವರು ಉಳಿದಿದ್ದರು.

ಮೈಕ್ರೊ ಫೈನಾನ್ಸ್ ಸಂಸ್ಥೆಗಳಿಂದ ಸಾಲ ಪಡೆದವರು ತೀರಿಸಲಾಗದೆ, ಅವರ ಕಿರುಕುಳ ತಾಳಲಾಗದೆ ರಾತ್ರೋರಾತ್ರಿ ಹೆಂಡತಿ, ಮಕ್ಕಳೊಂದಿಗೆ ಊರು ಬಿಟ್ಟಿದ್ದರು. ಎಲ್ಲಿಗೆ ಹೋದರು, ಏನಾದರು ಅಂತ ಗೊತ್ತಿಲ್ಲ. ಕಾಣೆಯಾದವರ ಬಗ್ಗೆ ಕಂಪ್ಲೇಂಟ್ ಕೊಡುವವರೂ ಇಲ್ಲ.

ಪೊಲೀಸರು ಊರಿನಲ್ಲಿ ಗಸ್ತು ಮಾಡುತ್ತಿದ್ದರು. ವರದಿ ಮಾಡಲು ಸರ್ಕಾರಿ ಅಧಿಕಾರಿಗಳು ಚಟ್ನಹಳ್ಳಿಗೆ ಬಂದರು.

ಮನೆಯಲ್ಲಿದ್ದ ತಿಮ್ಮಜ್ಜ, ತಿಮ್ಮಜ್ಜಿ ಬಳಿಗೆ ಬಂದ ಅಧಿಕಾರಿಗಳು, 'ಯಾಕೆ ಜನ ಊರು ಬಿಟ್ಟಿದ್ದಾರೆ?' ಕೇಳಿದರು.

'ದೊಡ್ಡವರು ದೊಡ್ಡ ಸಾಲ ಮಾಡಿಕೊಂಡು ದೇಶ ಬಿಟ್ರು, ಸಣ್ಣವರು ಸಣ್ಣ ಸಾಲ ಮಾಡಿಕೊಂಡು ಊರು ಬಿಟ್ರು...' ತಿಮ್ಮಜ್ಜ ಒಗಟಿನಂಥಾ ಉತ್ತರ ಕೊಟ್ಟ.

'ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹೋಗಿದ್ದಾರೆ, ಹುಲ್ಲುನೀರಿಲ್ಲದೆ ಅವು 'ಅಂಬಾ...' ಅನ್ತಿವೆ...' ತಿಮ್ಮಜ್ಜಿಗೆ ಕರುಳು ಚುರುಕ್ ಅಂದಿತು.

'ಮೈಕ್ರೊ ಫೈನಾನ್ಸ್ ಕಂಪನಿಗಳ ಬಳಿ ಜನ ಸಾಲ ಮಾಡಬಾರದಾಗಿತ್ತು...' ಅಂದ್ರು ಅಧಿಕಾರಿ.

'ಸಾಲ ಕೊಡ್ತೀವಿ ತಗೊಳ್ಳಿ ಅಂತ ಮನೆ ಬಾಗಿಲಿಗೆ ಬಂದರೆ ಯಾರು ಬೇಡ ಅಂತಾರೆ? ಈಸ್ಕೊಂಡ್ರು, ಖರ್ಚು ಮಾಡಿಕೊಂಡ್ರು'.

'ಫೈನಾನ್ಸ್‌ನವರು ಜನರಿಗೆ ಕಿರುಕುಳ ಕೊಡ್ತಿದ್ರಾ?'

'ಕೊಡದೇ ಇರ್ತಾರಾ? ಹೆಂಡ್ತಿ ತಾಳಿ ಮಾರಿ ದುಡ್ಡು ಕೊಡು ಅಂದ್ರು, ಸತ್ಯ ಹರಿಶ್ಚಂದ್ರ ಹೆಂಡ್ತಿಮಕ್ಕಳನ್ನು ಮಾರಿ ವಿಶ್ವಾಮಿತ್ರನ ಸಾಲ ತೀರಿಸಿದ, ನೀವೂ ಹಾಗೇ ಮಾಡಿ ಅಂತ ಮನೆ ಮುಂದೆ ಕೂಗಾಡಿದರು. ನಮ್ಮೂರಿನವರು ಹೆಂಡ್ತಿ ಮಕ್ಕಳನ್ನು ಮಾರುವಂತಹ ಹರಿಶ್ಚಂದ್ರರಲ್ಲ ಸಾರ್' ತಿಮ್ಮಜ್ಜಿ ಹೇಳಿದಳು.

'ಕುಟುಂಬದ ಯಜಮಾನನಿಗೆ ಸಾಲ ನೀಡುವ 'ಸಾಲಲಕ್ಷ್ಮಿ' ಯೋಜನೆ ಜಾರಿ ಮಾಡಿ ಸಂಕಷ್ಟ ನಿವಾರಣೆ ಮಾಡಲು ಸರ್ಕಾರಕ್ಕೆ ಹೇಳಿ ಸಾರ್...' ತಿಮ್ಮಜ್ಜ ಮನವಿ ಮಾಡಿದ.

ಸಂಗತ

ರಾತ್ರಿ ಬಸ್ ಪ್ರಯಾಣ 'ಹೈರಾಣ'

ಸ್ತ್ರೀಯರು, ವೃದ್ಧರು, ಪದೇಪದೇ ಮೂತ್ರ ವಿಸರ್ಜನೆಗೆ ಹೋಗಬೇಕಾದಂಥ ಆರೋಗ್ಯ ಸಮಸ್ಯೆ ಇರುವವರ ಪಾಲಿಗೆ ರಾತ್ರಿ ಬಸ್ ಪ್ರಯಾಣ ಅಸಹನೀಯ ಆಗಬಾರದು

● ಎ.ಎಸ್. ನಾರಾಯಣರಾವ್

ಈಚೆಗೆ ಪರಿಚಿತರೊಬ್ಬರು ಸಿಕ್ಕಿದ್ದರು. ಮಾತಿನ ಮಧ್ಯದಲ್ಲಿ 'ಈಗ ನಾನು ರಾತ್ರಿ ಹೊತ್ತು ಬಸ್ಸಿನಲ್ಲಿ ಪ್ರಯಾಣಿಸೋದನ್ನೇ ಬಿಟ್ಟಿದ್ದೇನೆ' ಎಂದರು. 'ರಾತ್ರಿ ಆಗಾಗ ಎದ್ದು ಮೂತ್ರ ವಿಸರ್ಜನೆಗೆ ಹೋಗುವ ಅನಿವಾರ್ಯ ಇರುವವರಿಗೆ ಮತ್ತು ವಿಶೇಷವಾಗಿ ಮಹಿಳೆಯರ ಪಾಲಿಗೆ ರಾತ್ರಿ ಬಸ್ ಪ್ರಯಾಣ ನರಕವಾಗಿಬಿಟ್ಟಿದೆ' ಎಂದು ತಮ್ಮ ನಿರ್ಧಾರಕ್ಕೆ ಕಾರಣವನ್ನೂ ಕೊಟ್ಟರು.

ಅವರ ಮಾತಿನಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಅಲ್ಲದೇ ಅದು ಅವರೊಬ್ಬರದೇ ಅನುಭವವಲ್ಲ, ಬಹಳಷ್ಟು ಪ್ರಯಾಣಿಕರ ಅನುಭವವೂ ಹೌದು. ಮಧುಮೇಹದಂತಹ ಆರೋಗ್ಯ ಸಮಸ್ಯೆ ಇರುವವರು, ವಯಸ್ಸಾದವರು ಪದೇ ಪದೇ ಮೂತ್ರ ವಿಸರ್ಜನೆಗೆ ಹೋಗುವುದು ಸಹಜ. ಮಳೆಗಾಲ, ಚಳಿಗಾಲದಲ್ಲಿ ಆರೋಗ್ಯವಂತರಿಗೂ ಈ ತೊಂದರೆ ಬಾಧಿಸುತ್ತದೆ.

ರೈಲುಗಳಲ್ಲಾದರೆ ಶೌಚಾಲಯದ ವ್ಯವಸ್ಥೆ ಇದೆ. ಅಲ್ಲೇನೂ ಸಮಸ್ಯೆ ಇಲ್ಲ. ಆದರೆ ಬಸ್ಸುಗಳಲ್ಲಿ ಹಾಗಲ್ಲ. ಇತ್ತೀಚಿನ ವರ್ಷಗಳಲ್ಲಿ ಬೆರಳೆಣಿಕೆಯಷ್ಟು ಬಸ್ಸುಗಳಲ್ಲಿ ಶೌಚಾಲಯ ಅಳವಡಿಸಲಾಗಿದೆ. ನಮ್ಮ ರಾಜ್ಯದ ವಿಷಯಕ್ಕೆ ಬರುವುದಾದರೆ ಫ್ಲೈಬಸ್ ಎಂದು ಕರೆಯುವ ಕೆಎಸ್‌ಆರ್‌ಟಿಸಿಯ ವಿಮಾನ ನಿಲ್ದಾಣ ಸೇವೆ ಬಸ್ಸುಗಳಲ್ಲಿ ಮಾತ್ರ ಚಿಕ್ಕ ಶೌಚಾಲಯಗಳು ಅಥವಾ ವಾಷ್‌ರೂಮ್‌ಗಳಿವೆ. ಆದರೆ ಅತ್ಯಾಧುನಿಕ ಮತ್ತು ಅತ್ಯಂತ ಐಷಾರಾಮಿ ಎನ್ನುವ 'ಅಂಬಾರಿ ಉತ್ಸವ' ಸರಣಿಯ ಬಸ್ಸುಗಳಲ್ಲೇ ಇಂಥ ಸೌಕರ್ಯ ಇಲ್ಲ. ಅದರಲ್ಲೇ ಇಲ್ಲ ಎಂದ ಮೇಲೆ ಇನ್ನಿತರ ಬಸ್ಸುಗಳಲ್ಲಿ ಅದನ್ನು ನಿರೀಕ್ಷೆ ಮಾಡುವಂತೆಯೂ ಇಲ್ಲ.

ಅಲ್ಲ, ಬಸ್ಸುಗಳಲ್ಲಿ ಚಾಲಕರು– ನಿರ್ವಾಹಕರು ಇರುತ್ತಾರೆ, ಅವರೂ ಮನುಷ್ಯರೇ ತಾನೆ. ಅವರಿಗೂ ಜಲಬಾಧೆಗೆ ಹೋಗಬೇಕು ಅಂತ ಅನಿಸುತ್ತದೆ. ಆಗಾಗ ನಿಲ್ಲಿಸುತ್ತಾರಲ್ಲ, ಮತ್ತೇನು ತೊಂದರೆ ಎಂದು ಅನಿಸಬಹುದು. ಅದರಲ್ಲಿ ಎರಡು ಮಾತಿಲ್ಲ. ಆದರೆ ಸಮಸ್ಯೆ ಇಷ್ಟು ಸರಳವಾಗಿಲ್ಲ. ಅವರು ಬಸ್ ನಿಲ್ದಾಣಗಳಲ್ಲಿ, ಉಪಾಹಾರ ಗೃಹಗಳು ಇರುವಲ್ಲಿ ಅಥವಾ ಟೋಲ್ ಕೇಂದ್ರಗಳಲ್ಲಿ (ಎಲ್ಲ ಟೋಲ್‌ಗಳಲ್ಲೂ ಶೌಚಾಲಯಗಳಿವೆ) ನಿಯಮಿತವಾಗಿ ಕೊನೇ ಪಕ್ಷ ಮೂರು ತಾಸಿಗೊಮ್ಮೆಯಾದರೂ ನಿಲ್ಲಿಸಿದರೆ ಇಷ್ಟೆಲ್ಲ ಗೊಣಗಾಡುವ ಅಗತ್ಯವೇ ಬರುತ್ತಿರಲಿಲ್ಲ.

ಯಾಕೆಂದರೆ ಬಹಳಷ್ಟು ಬಸ್ಸುಗಳ ಚಾಲಕರು ವಾಹನ ನಿಲ್ಲಿಸುವುದು ಅವರಿಗೆ ತುರ್ತು ಇದ್ದಾಗ ಮಾತ್ರ. ಅದಕ್ಕೊಂದು ನಿರ್ದಿಷ್ಟ ಸಮಯ, ನಿರ್ದಿಷ್ಟ ಸ್ಥಳ ಅಂತ ಏನೂ ಇಲ್ಲವೇ ಇಲ್ಲ. ಎಲ್ಲೆಂದರಲ್ಲಿ ನಿಲ್ಲಿಸುತ್ತಾರೆ. ಇದರ ಪರಿಣಾಮ ಏನೆಂದರೆ, ರಾತ್ರಿ ವೇಳೆಯಲ್ಲಿ ಪ್ರಯಾಣಿಕರ ಅದರಲ್ಲೂ ಮಹಿಳಾ ಪ್ರಯಾಣಿಕರ ಕಷ್ಟ ಹೇಳತೀರದು. ಪುರುಷರಾದರೆ ಎಲ್ಲೆಂದರಲ್ಲಿ ದೇಹಬಾಧೆ ತೀರಿಸಿಕೊಳ್ಳಬಹುದು. ಆದರೆ ಮಹಿಳೆಯರು ಏನು ಮಾಡಬೇಕು? ರಾತ್ರಿ ಬಸ್ಸಿನಲ್ಲಿ ಪ್ರಯಾಣಿಸಲೇಬೇಕಾಗಿರುವ ಅನೇಕ ಮಹಿಳೆಯರು ಸಂಜೆ ನಂತರ ನೀರು ಕುಡಿಯುವುದನ್ನೇ ಬಿಡುತ್ತಾರೆ.

ಖಾಸಗಿ ಬಸ್ಸುಗಳ ವಿಚಾರ ಒತ್ತಟ್ಟಿಗಿರಲಿ, ಸರ್ಕಾರಿ ಒಡೆತನದ ಕೆಎಸ್‌ಆರ್‌ಟಿಸಿ, ಕಲ್ಯಾಣ ಕರ್ನಾಟಕ ಮತ್ತು ವಾಯವ್ಯ ಕರ್ನಾಟಕ ಸಾರಿಗೆ ನಿಗಮಗಳ ಬಸ್ಸುಗಳಲ್ಲಾದರೂ ಈ ವಿಷಯದಲ್ಲಿ ಬಡಪಾಯಿ ಪ್ರಯಾಣಿಕರ ಬಗ್ಗೆ ಕರುಣೆ ತೋರುತ್ತಾರೇನೋ ಎಂದರೆ ಅದೂ ಇಲ್ಲ. ಖಾಸಗಿಯವರಿಗೆ ಹೋಲಿಸಿದರೆ ಸರ್ಕಾರಿ ಬಸ್ಸುಗಳ ಸಂಖ್ಯೆ ಹಲವು ಪಟ್ಟು ಹೆಚ್ಚು. ಇವುಗಳಲ್ಲಿ ಪ್ರಯಾಣಿಸುವವರ ಪ್ರಮಾಣ ಕೂಡ ಅಧಿಕ. ಇವು ಮೇಲ್ಪಂಕ್ತಿ ಹಾಕಬೇಕಾಗಿತ್ತು. ಆದರೆ ಬೆರಳೆಣಿಕೆಯಷ್ಟು ಬಸ್ ಚಾಲಕ, ನಿರ್ವಾಹಕರನ್ನು ಹೊರತುಪಡಿಸಿದರೆ ಈ ನಿಗಮಗಳ ಬಹುತೇಕ ಬಸ್‌ಗಳಲ್ಲಿ ಪ್ರಯಾಣಿಕರ ಈ ಅತಿ ಮುಖ್ಯ ಅಗತ್ಯದ ಕಡೆ ಗಮನವನ್ನೇ ಕೊಡುತ್ತಿಲ್ಲ.

ಇರುವುದರಲ್ಲಿ ಒಂದಿಷ್ಟು ಸಮಾಧಾನದ ಸಂಗತಿ ಎಂದರೆ, ಬೆಂಗಳೂರು– ಕುಂದಾಪುರ ಮಾರ್ಗದಲ್ಲಿ ರಾತ್ರಿ ಸಂಚರಿಸುವ ಸರ್ಕಾರಿ ಬಸ್‌ಗಳು ಉಡುಪಿ, ಮಂಗಳೂರು, ಸಕಲೇಶಪುರ, ಮಡಿಕೇರಿ ಬಸ್ ನಿಲ್ದಾಣಗಳಲ್ಲಿ ಕೆಲ ಕಾಲ ನಿಲ್ಲುವ ಅಭ್ಯಾಸ ಮಾಡಿಕೊಂಡಿವೆ. ಇಲ್ಲಿ ಶೌಚಾಲಯ ವ್ಯವಸ್ಥೆಯೂ ಪರವಾಗಿಲ್ಲ. ಆದರೆ ಬೆಂಗಳೂರಿನಿಂದ ಶಿವಮೊಗ್ಗ ಕಡೆ ಮತ್ತು ಹುಬ್ಬಳ್ಳಿ, ಕಲಬುರಗಿ, ವಿಜಯಪುರದಂತಹ ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಮಾರ್ಗಗಳಲ್ಲಿ ಓಡಾಡುವ ಬಸ್‌ಗಳಲ್ಲಿ ಮಾತ್ರ ಯಮಯಾತನೆ. ದಾರಿ ಮಧ್ಯೆ ಬರುವ ಬಸ್ ನಿಲ್ದಾಣಗಳ ಒಳಗೆ ಇವು ಹೋಗುವುದೇ ಇಲ್ಲ. ಬಳ್ಳಾರಿಯಲ್ಲಿ ನಿಲ್ದಾಣದ ಹೊರಗೆ ನಿಲ್ಲಿಸುತ್ತಾರೆ. ಒಳಗೆ ಹೋಗಲು ಅದೇನು ಉದಾಸೀನವೋ ಗೊತ್ತಿಲ್ಲ. ರಾತ್ರಿ ಹೊತ್ತು ಬೇರೆ, ಬಸ್ ಎಲ್ಲಿ ಬಿಟ್ಟು ಹೋಗುತ್ತದೋ ಎಂಬ ಆತಂಕದಿಂದ ಪುರುಷ ಪ್ರಯಾಣಿಕರು ಧಡಬಡ ಇಳಿದು ರಸ್ತೆ ಪಕ್ಕದಲ್ಲೇ ದೇಹಬಾಧೆ ತೀರಿಸಿಕೊಂಡರೆ, ಮಹಿಳೆಯರು ಇಳಿಯುವ ಉಸಾಬರಿಯೇ ಬೇಡ ಎಂದು ಸುಮ್ಮನಾಗುತ್ತಾರೆ.

ಈ ಸಮಸ್ಯೆ ಸಂಬಂಧಿಸಿದವರ ಗಮನಕ್ಕೆ ಬರದಿರಲು ಮುಖ್ಯ ಕಾರಣ, ಜನಪ್ರತಿನಿಧಿಗಳು ಮತ್ತು ನಿಗಮಗಳ ಅಧಿಕಾರಿಗಳು ಬಸ್ಸುಗಳಲ್ಲಿ ಪ್ರಯಾಣಿಸುವುದು ಕಡಿಮೆ ಆಗಿರುವುದು. ಹಿಂದೆಲ್ಲ ಶಾಸಕರು ಬಸ್ಸುಗಳಲ್ಲೇ ಓಡಾಡುತ್ತಿದ್ದರು. ಈಗ ಅದು ಬಹಳ ಅಪರೂಪ. ಆದ್ದರಿಂದ ಇದರ ಪರಿಹಾರಕ್ಕೆ ಇರುವುದು ಒಂದೇ ದಾರಿ. ಪ್ರತಿ ಬಸ್ಸಿಗೂ ಕಡ್ಡಾಯವಾಗಿ ಶೌಚಾಲಯ ನಿಲುಗಡೆ ನಿಲ್ದಾಣವನ್ನು ನಿಗದಿಪಡಿಸಬೇಕು. ಅದು ಸಮರ್ಪಕವಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು.

ವಾಚಕರ ವಾಣಿ

ಬಿ.ಇಡಿ ಪಠ್ಯಕ್ರಮ: ಬೇಕು ಹೊಸ ವಿಧಾನ

ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರನ್ನು ರೂಪಿಸುವ ಬಿ.ಇಡಿ. ಶಿಕ್ಷಣದ ಪಠ್ಯಕ್ರಮವು ಇನ್ನೂ ಹಳೆಯ ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳನ್ನೇ ಅನುಸರಿಸುತ್ತಿದೆ. ಎರಡು ವರ್ಷದ ಕೋರ್ಸ್‌ನಲ್ಲಿ ಕಲಿಸುವ ವಿಷಯಗಳಿಗೂ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರು ಎದುರಿಸುವ ಸವಾಲುಗಳಿಗೂ ಹೊಂದಾಣಿಕೆಯೇ ಆಗುವುದಿಲ್ಲ. ಬಿ.ಇಡಿ. ಕೋರ್ಸ್ ಮುಗಿದ ಬಳಿಕ ಕರ್ತವ್ಯಕ್ಕೆ ಹಾಜರಾಗುವ ಯುವ ಶಿಕ್ಷಕರಿಗೆ ಶಿಕ್ಷಣ ವ್ಯವಸ್ಥೆಯ ನೈಜ ಕಲ್ಪನೆಯೇ ಇಲ್ಲದಿರುವುದು ಕಂಡುಬರುತ್ತಿದೆ.

ಶಾಲಾ ದಾಖಲಾತಿಗಳ ನಿರ್ವಹಣೆಯಿಂದ ಹಿಡಿದು ಮಕ್ಕಳು ಹಾಗೂ ಪಾಲಕರ ಮನಃಸ್ಥಿತಿಯನ್ನು ಅರಿಯುವಂತಹ ವಿಷಯಗಳಲ್ಲಿ ಅವರು ಸೋಲುತ್ತಿದ್ದಾರೆ. ತರಗತಿಯಲ್ಲಿ ಶೈಕ್ಷಣಿಕ ಮನೋವಿಜ್ಞಾನವನ್ನು ಓದುವುದಕ್ಕೂ ನೈಜ ಸನ್ನಿವೇಶದಲ್ಲಿ ಪ್ರಾಯೋಗಿಕವಾಗಿ ಎದುರಿಸುವುದಕ್ಕೂ ಬಹಳಷ್ಟು ವ್ಯತ್ಯಾಸ ಇರುತ್ತದೆ. ಪ್ರಶಿಕ್ಷಣಾರ್ಥಿಗಳಿಗೆ ಇಂದಿನ ಕಾಲಕ್ಕೆ ತಕ್ಕಂತೆ ಹೆಚ್ಚು ಪ್ರಾಯೋಗಿಕ ಶಿಕ್ಷಣವನ್ನು ಒದಗಿಸುವ ಸುಧಾರಿತ ಪಠ್ಯಕ್ರಮವನ್ನು ರೂಪಿಸಬೇಕು. ಇಲ್ಲದಿದ್ದರೆ ಕೋರ್ಸ್ ಮುಗಿದ ಬಳಿಕವೂ ಕಳಪೆ ಗುಣಮಟ್ಟದ ಶಿಕ್ಷಕರೇ ಸಿಗುವಂತಹ ಸ್ಥಿತಿ ಎದುರಾಗುತ್ತದೆ.

ಸುರೇಂದ್ರ ಪೈ, ಭಟ್ಕಳ

ಸಾಂಕೇತಿಕ ಅಭಿಮಾನವಷ್ಟೇ ಸಾಲದು

ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ 25 ಅಡಿ ಎತ್ತರದ ಭುವನೇಶ್ವರಿ ದೇವಿಯ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಡು–ನುಡಿಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವಂತೆ ಜನರಿಗೆ ಕರೆ ನೀಡಿರುವುದು ಒಳ್ಳೆಯ ವಿಚಾರ. ಇಷ್ಟೇ ಅಲ್ಲದೆ ಐ.ಟಿ, ಬಿ.ಟಿ ಕಂಪನಿಗಳು, ಶಾಲಾ ಕಾಲೇಜುಗಳು, ಕೈಗಾರಿಕೆಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಯನ್ನು ಕಡ್ಡಾಯಗೊಳಿಸಿರುವುದು, ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಕನ್ನಡದ ಬಗೆಗೆ ಅಭಿಮಾನಪೂರ್ವಕವಾಗಿ ಭಾಷಣ ಮಾಡಿ ಬರುವುದು ಎಲ್ಲವೂ ಮೆಚ್ಚುಗೆಗೆ ಅರ್ಹವಾಗುವ ಸಂಗತಿಗಳೇ ಹೌದು. ಆದರೆ ಇವೆಲ್ಲವೂ ಆಡಳಿತದ ಚುಕ್ಕಾಣಿ ಹಿಡಿದ ನಾಯಕ ಮಾಡಲೇಬೇಕಾದ ಕರ್ತವ್ಯಗಳು ಹಾಗೂ ನಾಡಿನ ಬಗೆಗೆ ಅವರಿಗೆ ಇರಬೇಕಾದ ಅಭಿಮಾನದ ಒಂದು ಸಂಕೇತವಷ್ಟೇ.

ಕನ್ನಡ ಮತ್ತು ಕರ್ನಾಟಕದ ಏಳಿಗೆಗಾಗಿ ಸರ್ಕಾರದಿಂದಲೇ ಆಗಬೇಕಾದ ಹತ್ತಾರು ಕೆಲಸಗಳಿವೆ, ಬಗೆಹರಿಸಬೇಕಾದ ಹಲವು ಸಮಸ್ಯೆಗಳಿವೆ. ಸರ್ಕಾರಿ ಶಾಲೆಗಳನ್ನು ಉತ್ತಮಗೊಳಿಸಿ, ಶಿಕ್ಷಣವು ಖಾಸಗಿಯವರ ಸ್ವತ್ತಾಗುವುದನ್ನು ತಡೆಯುವುದು, ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ, ರೈತರ ಜಮೀನುಗಳು ಪರಕೀಯರ ಪಾಲಾಗದಂತೆ ಭೂಸುಧಾರಣೆ, ಗಡಿ ಭಾಗದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತಹ ಕರ್ನಾಟಕ ಕೇಂದ್ರಿತವಾದ ಹಲವಾರು ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ. ಆಗಷ್ಟೇ ಈ ಎಲ್ಲಾ ಸಾಂಕೇತಿಕ ಭಾವನಾತ್ಮಕ ಆಚರಣೆಗಳಿಗೆ ಅರ್ಥ ಬರುವುದು.

ನಾಗರಾಜ ಮಾದೇಗೌಡ, ಕನಕಪುರ

ಸಕಾಲದಲ್ಲಿ ಪುಸ್ತಕ ಒದಗಿಸೋಣ

ಪರೀಕ್ಷೆ ನಂತರ ಪುಸ್ತಕಗಳನ್ನು ತೂಕಕ್ಕೆ ಹಾಕದೆ ವಿನಿಮಯ ಮಾಡಿಕೊಳ್ಳುವ ರೂಢಿ ಬೆಳೆಸಿಕೊಳ್ಳಬೇಕು ಎಂಬ ಯೋಗಾನಂದ ಅವರ ಲೇಖನ (ಸಂಗತ, ಜ. 28) ಸಮಂಜಸವಾಗಿದೆ. ಆದರೆ ಹೆಚ್ಚಿನವರು ಪುಸ್ತಕಗಳನ್ನು ತೂಕಕ್ಕೆ ಹಾಕುವುದನ್ನು ಕಂಡರೆ ಖೇದವೆನಿಸುತ್ತದೆ. ಸಿರುಗುಪ್ಪ ತಾಲ್ಲೂಕಿನ ಭೈರಗಾಮದಿನ್ನೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕನಾಗಿದ್ದ ವೇಳೆ, 'ಆಂಧ್ರದ ಕನ್ನಡ ಶಾಲೆಗಳಲ್ಲಿ ಪಠ್ಯಪುಸ್ತಕಗಳ ಅಭಾವ' ಎಂಬ ಪತ್ರಿಕಾ ವರದಿಯನ್ನು ಓದಿದ್ದೆ. ಅದನ್ನು ಆಧರಿಸಿ, ಆ ವರ್ಷದ ಪರೀಕ್ಷೆ ಮುಗಿದ ನಂತರ ಎಲ್ಲ ತರಗತಿಗಳ ಮಕ್ಕಳಿಂದ ಹಳೆಯ ಪಠ್ಯಪುಸ್ತಕಗಳನ್ನು ಸಂಗ್ರಹಿಸಿ, ಗಡಿನಾಡಿನ ಶಾಲೆಗಳಿಗೆ ರವಾನಿಸಿದ್ದೆವು. ಈ ಮೂಲಕ ಅಲ್ಲಿನ ಮಕ್ಕಳ ಓದಿಗೆ ಸಹಕರಿಸಿದ್ದೆವು.

ಇಂತಹ ಕಾರ್ಯವನ್ನು ರಾಜ್ಯದ ಎಲ್ಲ ಶಾಲೆಗಳೂ ಮಾಡಬೇಕು. ಸಕಾಲಕ್ಕೆ ಪುಸ್ತಕ ಒದಗದ ನಾಡಿನ ಶಾಲೆಗಳ ಮಕ್ಕಳಿಗೆ ಅಂತಹ ಪುಸ್ತಕಗಳನ್ನು ಒದಗಿಸಿದರೆ ಅವರ ಕಲಿಕೆಗೆ ಅದರಿಂದ ನೆರವಾಗುತ್ತದೆ. ಈ ನಿಯಮವನ್ನು ನಾವು ಅನುಸರಿಸಿ ಯಶಸ್ವಿಯಾಗಿದ್ದೆವು.

ಆರ್.ಪಿ.ಮಂಜುನಾಥ್, ಬಿ.ಜಿ.ದಿನ್ನೆ, ಬಳ್ಳಾರಿ

ಶಬ್ದಮಾಲಿನ್ಯಕ್ಕೆ ಬೀಳಲಿ ಕಡಿವಾಣ

'ಧ್ವನಿವರ್ಧಕಗಳ ಬಳಕೆಯು ಯಾವುದೇ ಧರ್ಮದ ಅಗತ್ಯ ಭಾಗವಲ್ಲ' ಎಂಬ ಬಾಂಬೆ ಹೈಕೋರ್ಟ್ ಆದೇಶ ಅತ್ಯಂತ ಸ್ವಾಗತಾರ್ಹ. ಧ್ವನಿವರ್ಧಕಗಳ ಅತಿಯಾದ ಬಳಕೆಯಿಂದ ವಿಪರೀತ ಶಬ್ದಮಾಲಿನ್ಯವಾಗಿ ದೈಹಿಕ, ಮಾನಸಿಕ ಕಾಯಿಲೆಗಳು ಉಂಟಾಗುವುದನ್ನು ವೈದ್ಯಕೀಯ ದಾಖಲೆಗಳೇ ದೃಢಪಡಿಸಿವೆ. ಕೆಲವು ಕಡೆ ಹೃದಯಸ್ತಂಭನದಿಂದ ವೇದಿಕೆಯ ಮೇಲೆಯೇ ಕಲಾವಿದರು ಮೃತಪಟ್ಟಿದ್ದನ್ನೂ ಮಾಧ್ಯಮಗಳು ವರದಿ ಮಾಡಿವೆ. ಪಟ್ಟಣದ ಹೃದಯ ಭಾಗದಲ್ಲಿರುವ ನನ್ನ ಮನೆಯ ಹತ್ತಿರ ಗಣೇಶ ಚತುರ್ಥಿಯ ಪ್ರಯುಕ್ತ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವು ಕಿವಿಯ ತಮಟೆ ಹರಿಯುವ ರೀತಿಯಲ್ಲಿ ನಡೆಯುತ್ತಿತ್ತು. ಶಬ್ದಮಾಲಿನ್ಯದಿಂದ ಉಂಟಾಗುವ ದುಷ್ಪರಿಣಾಮದ ಕುರಿತು ಆಯೋಜಕರಿಗೆ ತಿಳಿಸಿದಾಗ, ಅವರು ನನ್ನ ಸಲಹೆಯನ್ನು ಸ್ವೀಕರಿಸಿ, ಧ್ವನಿವರ್ಧಕದ ಶಬ್ದವನ್ನು ಅತ್ಯಂತ ಮಿತಗೊಳಿಸಿದರು.

ಕೆಲವು ದೇವಸ್ಥಾನಗಳು ಮತ್ತು ಮಸೀದಿಗಳಲ್ಲಿ ನಸುಕಿನ ನಾಲ್ಕು ಗಂಟೆ ಸುಮಾರಿಗೇ ಧ್ವನಿವರ್ಧಕ ಮೊಳಗಲು ಪ್ರಾರಂಭವಾಗುತ್ತದೆ. ಇದರಿಂದ ನಸುಕಿನಲ್ಲಿ ಓದುವ ವಿದ್ಯಾರ್ಥಿಗಳು, ವಯೋವೃದ್ಧರು, ಸಕ್ಕರೆ ನಿದ್ದೆಯಲ್ಲಿರುವ ಶಿಶುಗಳಿಗೆ ಆಗುವ ತೊಂದರೆ ಊಹಾತೀತ. ಧರ್ಮದ್ವೇಷಕ್ಕೂ ಧ್ವನಿವರ್ಧಕ ಆಯುಧದಂತೆ ಬಳಕೆ ಆಗುತ್ತಿರುವುದು ವಿಪರ್ಯಾಸದ ಸಂಗತಿ. 'ಅವರು ಮಾಡುತ್ತಾರೆ, ನಾವೇಕೆ ಮಾಡಬಾರದು' ಎನ್ನುವ ಕೆಳಪಂಕ್ತಿಯ ನಡೆಯೇ ನಮಗೆ ಮಾದರಿಯಾಗಿದೆ. ಅಂತೂ ಕೋರ್ಟ್ ಆದೇಶವನ್ನು ಎಲ್ಲ ಧರ್ಮದವರೂ ಪಾಲಿಸುವ ಮೂಲಕ ಜಾಗತಿಕ ಪಿಡುಗಾದ ಶಬ್ದಮಾಲಿನ್ಯಕ್ಕೆ ಕಡಿವಾಣ ಬೀಳಲಿ. ದೇವರು ಇಷ್ಟಪಡುವುದು ನಿಶ್ಶಬ್ದವನ್ನೇ ವಿನಾ ಶಬ್ದವನ್ನಲ್ಲ. ಎಲ್ಲ ಧರ್ಮಗಳ ಮಹಾತ್ಮರೂ ಒಂದಿಲ್ಲೊಂದು ರೀತಿಯಲ್ಲಿ ಇದನ್ನೇ ಹೇಳಿದ್ದಾರೆ!

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ ಪಿಡುಗಿನ ನಂತರ ಶಿಕ್ಷಣ ಕ್ಷೇತ್ರದ ಸ್ಥಿತಿಗತಿ • ವಾರ್ಷಿಕ ವರದಿಯಲ್ಲಿ ಹಲವು ವಿಚಾರ ಪ್ರಸ್ತಾಪ

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕುಸಿತ

ನವದೆಹಲಿ (ಪಿಟಿಐ): ಕೋವಿಡ್–19 ಪಿಡುಗಿನ ವೇಳೆ, ದೇಶದ ಹಲವು ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಳಗೊಂಡಿತ್ತು. ನಂತರದ ವರ್ಷಗಳಲ್ಲಿ ದಾಖಲಾತಿಯಲ್ಲಿ ಕ್ರಮೇಣ ಇಳಿಕೆ ಕಂಡುಬಂದಿದೆ. 6–14 ವರ್ಷ ವಯೋಮಾನದ ಮಕ್ಕಳ ದಾಖಲಾತಿ ಪ್ರಮಾಣವು 2018ರಲ್ಲಿ ಇದ್ದಮಟ್ಟಕ್ಕೆ ತಲುಪಿದೆ.

ಮಂಗಳವಾರ ಬಿಡುಗಡೆಯಾಗಿರುವ ಶಿಕ್ಷಣ ಸ್ಥಿತಿಗತಿಯ ವಾರ್ಷಿಕ ವರದಿ (ಎಎಸ್‌ಇಆರ್) ಯಲ್ಲಿ ಈ ಅಂಶ ಹೇಳಲಾಗಿದೆ.

ಕೋವಿಡ್–19 ಪಿಡುಗಿನ ವೇಳೆ ಮಕ್ಕಳು ಕಲಿಕಾ ನಷ್ಟ ಎದುರಿಸಿದ್ದರು. ತದನಂತರ, ಪರಿಹಾರಕ್ಕೆ ಬೋಧನ ಸೇರಿದಂತೆ ಹಲವು ಕ್ರಮಗಳ ಫಲವಾಗಿ, ಮಕ್ಕಳ ಕಲಿಕೆಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ. ಪ್ರಾಥಮಿಕ ಹಂತದ ಕಲಿಕಾ ಮಟ್ಟವು, ಈ ಹಿಂದಿನ ವರ್ಷಗಳಲ್ಲಿ ಇದ್ದ ಮಟ್ಟಕ್ಕಿಂತಲೂ ಉತ್ತಮಗೊಂಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

'ಪ್ರಥಮ್' ಎಂಬ ಎನ್‌ಜಿಒ ಈ ಸಮೀಕ್ಷೆ ನಡೆಸಿದೆ.

ಸ್ಮಾರ್ಟ್‌ಫೋನ್ ಬಳಕೆ

14–16 ವರ್ಷ ವಯೋಮಾನದ ಮಕ್ಕಳ ಪೈಕಿ ಶೇ 82ರಷ್ಟು ಮಕ್ಕಳಿಗೆ ಸ್ಮಾರ್ಟ್‌ಫೋನ್ ಬಳಕೆ ಬಗ್ಗೆ ಗೊತ್ತಿದೆ. ಸಮೀಕ್ಷೆ ನಡೆದಿದ್ದ ಹಿಂದಿನ ವಾರದ ಅವಧಿಯಲ್ಲಿ ಶೇ 57ರಷ್ಟು ಮಕ್ಕಳು ಸ್ಮಾರ್ಟ್‌ಫೋನ್ ಅನ್ನು ಶೈಕ್ಷಣಿಕ ಉದ್ದೇಶಕ್ಕೆ ಬಳಸಿದ್ದರೆ, ಸಾಮಾಜಿಕ ಜಾಲತಾಣ ವೀಕ್ಷಣೆಗೆ ಬಳಸಿದ್ದಾಗಿ ಶೇ 76ರಷ್ಟು ಮಕ್ಕಳು ಹೇಳಿದ್ದಾರೆ.

ದಾಖಲಾತಿಯಲ್ಲಿ ಏರಿಳಿತ

2006ರಲ್ಲಿ ಖಾಸಗಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಶೇ 18.7ರಷ್ಟಿತ್ತು. ಇದು 2014ರಲ್ಲಿ ಶೇ 30.8ಕ್ಕೆ ಏರಿಕೆಯಾಗಿತ್ತಲ್ಲದೇ, 2018ರಲ್ಲಿಯೂ ಇಷ್ಟೇ ಪ್ರಮಾಣದಲ್ಲಿ ಇತ್ತು. ಕೋವಿಡ್–19 ಪಿಡುಗು ಕಾಣಿಸಿಕೊಂಡ ವರ್ಷಗಳಲ್ಲಿ ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಕಂಡುಬಂತು.

2018ರಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಶೇ 65.6ರಷ್ಟಿದ್ದದ್ದು, 2022ರಲ್ಲಿ 72.9ಕ್ಕೆ ಏರಿತು. ಆದರೆ, ನಂತರದ ವರ್ಷಗಳಲ್ಲಿ ದಾಖಲಾತಿ ಪ್ರಮಾಣ ಕುಸಿದಿದ್ದು, 2024ರಲ್ಲಿ ಇದು ಶೇ 66.8ಕ್ಕೆ ಇಳಿದಿತ್ತು.

ದಾಖಲಾತಿ ಪ್ರಮಾಣವು 2018ರಲ್ಲಿ ಇದ್ದ ಮಟ್ಟಕ್ಕೆ ಸಂಪೂರ್ಣವಾಗಿ ಮರಳಿದೆ. ಬೇರೆ ಬೇರೆ ಕ್ಷೇತ್ರಗಳ ಆರ್ಥಿಕತೆಯೂ ಮತ್ತೆ ಹಳಿಗೆ ಬಂದಿರುವುದನ್ನು ನೋಡಿದಾಗ, ಶೈಕ್ಷಣಿಕ ರಂಗದಲ್ಲಿನ ಈ ಬದಲಾವಣೆ ಅಚ್ಚರಿ ಮೂಡಿಸುವುದಿಲ್ಲ

6,49,491 ಸಮೀಕ್ಷೆಯ ಭಾಗವಾಗಿದ್ದ ಗ್ರಾಮೀಣ ಭಾಗದ ಮಕ್ಕಳ ಸಂಖ್ಯೆ

17,997 ಸಮೀಕ್ಷೆ ನಡೆಸಲಾದ ಗ್ರಾಮಗಳ ಸಂಖ್ಯೆ

605 ಸಮೀಕ್ಷೆಗೊಳಪಟ್ಟ ಜಿಲ್ಲೆಗಳ ಸಂಖ್ಯೆ

ವರದಿಯ ಪ್ರಮುಖ ಅಂಶಗಳು

ಓದುವ ಸಾಮರ್ಥ್ಯ

ರಾಷ್ಟ್ರ ಮಟ್ಟಕ್ಕೆ ಸಂಬಂಧಿಸಿದಂತೆ, 2014ರಲ್ಲಿ 3ನೇ ತರಗತಿ ಮಕ್ಕಳ ಪೈಕಿ 2ನೇ ತರಗತಿ ಪಠ್ಯ ಓದುವ ಸಾಮರ್ಥ್ಯ ಹೊಂದಿದ್ದವರ ಸಂಖ್ಯೆ ಶೇ 23.6ರಷ್ಟಿತ್ತು. ಈ ಪ್ರಮಾಣ 2018ರಲ್ಲಿ ಶೇ 27.3ಕ್ಕೆ ಹೆಚ್ಚಳವಾಯಿತು. ಓದುವ ಸಾಮರ್ಥ್ಯ ಹೊಂದಿದ್ದ ಮಕ್ಕಳ ಸಂಖ್ಯೆ 2022ರಲ್ಲಿ ಶೇ 20.5ಕ್ಕೆ ಕುಸಿಯಿತು. ಆದರೆ, 3ನೇ ತರಗತಿ ಮಕ್ಕಳಲ್ಲಿ ಓದುವ ಸಾಮರ್ಥ್ಯದಲ್ಲಿ ಮತ್ತೆ ಸುಧಾರಣೆ ಕಂಡುಬಂದಿದ್ದು, ಶೇ 27.1ರಷ್ಟು ಮಕ್ಕಳು ನಿರರ್ಗಳವಾಗಿ ಓದಬಲ್ಲವರಾಗಿದ್ದಾರೆ.

ಕೆಲ ರಾಜ್ಯಗಳಿಂದ ಉತ್ತಮ ಸಾಧನೆ

ಬೋಧನೆ– ಕಲಿಕೆ ಪ್ರಕ್ರಿಯೆಯಲ್ಲಿ ಕೆಲ ರಾಜ್ಯಗಳು ಉತ್ತಮ ಸಾಧನೆ ದಾಖಲಿಸಿವೆ. ಕೆಲ ರಾಜ್ಯಗಳು ಕೋವಿಡ್–19 ಪಿಡುಗಿನ ಮುನ್ನ ಇದ್ದ ಕಲಿಕಾ ಮಟ್ಟಕ್ಕಿಂತಲೂ ಹೆಚ್ಚಿನ ಸುಧಾರಣೆ ದಾಖಲಿಸಿದ್ದರೆ, ಇನ್ನೂ ಕೆಲ ರಾಜ್ಯಗಳಲ್ಲಿ ಸುಧಾರಣೆ ಕಂಡುಬರಬೇಕಿದೆ.

ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಹಾಗೂ ತಮಿಳುನಾಡಿನಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ.

ಪ್ರೌಢಶಾಲೆ: ಶೇ 94.5 ಡಿಜಿಟಲ್ ಸಾಕ್ಷರತೆ

ಬೆಂಗಳೂರು: ಕರ್ನಾಟಕ ಪ್ರೌಢಶಾಲೆಗಳ ಶೇ 94.5ರಷ್ಟು ಮಕ್ಕಳು ಡಿಜಿಟಲ್ ಸಾಕ್ಷರತೆಗೆ ತೆರೆದುಕೊಂಡಿದ್ದು, ಸ್ಮಾರ್ಟ್‌ಫೋನ್, ಅಂತರ್ಜಾಲ ಮಾಧ್ಯಮ ಅವಕಾಶಗಳಿಂದಾಗಿ ಸರ್ಕಾರಿ ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂದು ಮಂಗಳವಾರ ಬಿಡುಗಡೆಯಾದ ಶಿಕ್ಷಣ ಸ್ಥಿತಿಗತಿಯ ವಾರ್ಷಿಕ ವರದಿ–2024 (ಎಎಸ್‌ಇಆರ್) ಹೇಳಿದೆ.

ನಗರ ಪ್ರದೇಶಗಳ ಕಲಿಕಾ ಗುಣಮಟ್ಟ ಸಾಕಷ್ಟು ಸುಧಾರಿಸಿದ್ದರೂ ಗ್ರಾಮೀಣ ಕರ್ನಾಟಕದ ಖಾಸಗಿ ಹಾಗೂ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 3ನೇ ತರಗತಿಯ ಶೇ 7.1 ಮಕ್ಕಳಿಗೆ ಒಂದೂ ಅಕ್ಷರ ಓದಲು ಬರುತ್ತಿಲ್ಲ. ಶೇ 21.5ರಷ್ಟು ಮಕ್ಕಳು ಒಂದನೇ ತರಗತಿಯ ಪಾಠ ಹಾಗೂ ಶೇ 15.9ರಷ್ಟು ಮಕ್ಕಳು ಎರಡನೇ ತರಗತಿಯ ಪಾಠವನ್ನಷ್ಟೇ ಓದಲು ಸಮರ್ಥರಿದ್ದಾರೆ. ಹಿಂದಿನ ಸಮೀಕ್ಷೆಗಳಿಗೆ ಹೋಲಿಸಿದರೆ ಈಗ ಕಲಿಕಾ ಸಾಮರ್ಥ್ಯದಲ್ಲಿ ಸ್ವಲ್ಪ ಸುಧಾರಣೆಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ದಾಖಲಾತಿಯಲ್ಲಿ ಕುಸಿತ: ಸರ್ಕಾರಿ ಶಾಲೆಗಳಲ್ಲಿ 6ರಿಂದ 14 ವರ್ಷಗಳ ನಡುವಿನ ದಾಖಲಾತಿ ಕುಸಿದಿದೆ. 2022ರಲ್ಲಿ ಶೇ 76 ಇತ್ತು. ಅದು 2024ರಲ್ಲಿ ಶೇ 71ಕ್ಕೆ ಇಳಿಕೆಯಾಗಿದೆ. ಶೇ 83ರಷ್ಟು ಶಾಲೆಗಳು 60ಕ್ಕಿಂತ ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿವೆ. ಪೂರ್ವ ಪ್ರಾಥಮಿಕ ಹಂತದಲ್ಲಿ ದಾಖಲಾತಿ ಪ್ರಮಾಣ ಹೆಚ್ಚಿದೆ. ನಾಲ್ಕು ವರ್ಷ ವಯಸ್ಸಿನ ಮಕ್ಕಳ ದಾಖಲಾತಿ ಪ್ರಮಾಣ ಶೇ 95 ದಾಟಿದೆ ಎಂದು ವರದಿ ವಿವರಿಸಿದೆ.

14ರಿಂದ 16ರ ವಯೋಮಾನದ ಶೇ 70ರಷ್ಟು ಮಕ್ಕಳು ಸಾಮಾಜಿಕ ಜಾಲತಾಣ ಬಳಕೆಯಲ್ಲಿ ಸಕ್ರಿಯರಾಗಿದ್ದಾರೆ. ಶೇ 52ರಷ್ಟು ಮಕ್ಕಳು ಸಾಮಾಜಿಕ ಜಾಲತಾಣ ನಿರ್ವಹಿಸುವಷ್ಟು ಸಮರ್ಥರಾಗಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

'ಬಂಧಿತ ಬಾಂಗ್ಲಾ ವ್ಯಕ್ತಿಯ ವಿರುದ್ಧ ಬಲವಾದ ಸಾಕ್ಷ್ಯ'

ಅಮೀನ್ ಫಕೀರ್

ಸೈಫ್ ಅಲಿ ಖಾನ್

ಮುಂಬೈ (ಪಿಟಿಐ): 'ಬಾಲಿವುಡ್ ನಟ ಸೈಫ್ ಅಲಿ ಖಾನ್ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತನಾಗಿರುವ ಬಾಂಗ್ಲಾದೇಶದ ವ್ಯಕ್ತಿಯ ವಿರುದ್ಧ ಬಲವಾದ ಸಾಕ್ಷ್ಯ ಪುರಾವೆಗಳಿವೆ' ಎಂದು ಮುಂಬೈ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಸೈಫ್ ಅಲಿಖಾನ್ ಅವರು ಇದೇ ಜ.16ರಂದು ಮುಂಬೈನ ಬಾಂದ್ರಾದಲ್ಲಿರುವ ಅವರ ನಿವಾಸದಲ್ಲಿ ಹಲ್ಲೆಗೆ ಒಳಗಾಗಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸರು ಠಾಣೆ ಜಿಲ್ಲೆಯಲ್ಲಿ ಆರೋಪಿ, ಶರೀಫುಲ್ ಇಸ್ಲಾಂ ಶೆಹಜಾದ್ ಮೊಹಮ್ಮದ್ ರೋಹಿಲ್ಲಾ ಅಮೀನ್ ಫಕೀರ್ (30) ಉರುಫ್ ವಿಜಯ್ ದಾಸ್ ಖಾನ್‌ನನ್ನು ಬಂಧಿಸಿದ್ದಾರೆ.

ತನಿಖೆಯ ಪ್ರಗತಿ ಕುರಿತು ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಂಟಿ ಪೊಲೀಸ್ ಆಯುಕ್ತ (ಪಶ್ಚಿಮ ವಿಭಾಗ) ಪರಮ್‌ಜೀತ್ ದಹಿಯಾ, 'ಕ್ರೈಂ ಬ್ರ್ಯಾಂಚ್ ತಂಡದ ಜೊತೆಗೂಡಿ ಡಿಸಿಪಿ ವಲಯ -9ರ ತಂಡವು 'ಅತ್ಯುತ್ತಮ ಪುರಾವೆ ಆಧರಿಸಿಯೇ ಆರೋಪಿಯನ್ನು ಬಂಧಿಸಿದೆ. ಆತನ ವಿರುದ್ಧ ದೈಹಿಕ ಹಾಗೂ ತಂತ್ರಜ್ಞಾನ ಆಧರಿತ ಪ್ರಬಲವಾದ ಸಾಕ್ಷ್ಯಗಳಿವೆ' ಎಂದು ವಿವರಿಸಿದರು.

ತನಿಖೆ ಕುರಿತಂತೆ ವ್ಯಾಪಕ ಟೀಕೆ– ವ್ಯತಿರಿಕ್ತ ವರದಿಗಳು ಪ್ರಕಟಗೊಂಡಿದ್ದರಿಂದ ಪೊಲೀಸರು ಈ ಸ್ಪಷ್ಟನೆ ನೀಡಿದ್ದಾರೆ.

'ದಾಳಿ ಆತನ ಜೊತೆ ಬೇರೆಯವರು ಕೈ ಜೋಡಿಸಿರುವ ಕುರಿತು ಇದುವರೆಗೂ ಪೊಲೀಸರಿಗೆ ಯಾವುದೇ ಸುಳಿವು ಸಿಕ್ಕಿಲ್ಲ. ಆದರೂ, ಕೃತ್ಯದ ಬಳಿಕ ಆತ ಸಂಪರ್ಕಿಸಿದ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ' ಎಂದು ಅವರು ವಿವರಿಸಿದರು.

'ಆರೋಪಿಯ ಬೆರಳಚ್ಚನ್ನು ಸಂಗ್ರಹಿಸಿ ಸಿಐಡಿಗೆ ಕಳುಹಿಸಿಕೊಡಲಾಗಿದೆ. ಈ ಕುರಿತು ಇದುವರೆಗೂ ಯಾವುದೇ ವರದಿ ಕೈ ಸೇರಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಸಿಎಂ ಸ್ಪಷ್ಟನೆ: ಈ ಬಗ್ಗೆ ಪ್ರತಿಕ್ರಿಯಿಸಿರುವ ಗೃಹ ಖಾತೆ ಹೊಂದಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಈ ಪ್ರಕರಣದಲ್ಲಿ ಪೊಲೀಸರು ಸರಿಯಾಗಿ ತನಿಖೆ ನಡೆಸುತ್ತಿದ್ದಾರೆ. ಅವರು ಎಲ್ಲ ಮಾಹಿತಿಗಳನ್ನು ಕಲೆಹಾಕುತ್ತಿದ್ದು, ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿದ್ದಾರೆ' ಎಂದು ತಿಳಿಸಿದ್ದಾರೆ.

ಷರಿಯಾ ಬೇಡವೆಂದ ಮಹಿಳೆ, ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರಕ್ಕೆ ಸೂಚನೆ

ನವದೆಹಲಿ (ಪಿಟಿಐ): ಷರಿಯಾ ಕಾನೂನಿನ ಬದಲು ತನಗೆ ಭಾರತೀಯ ಉತ್ತರಾಧಿಕಾರ ಕಾಯ್ದೆಯನ್ನು ಅನ್ವಯಗೊಳಿಸಬೇಕು ಎಂಬ ಕೋರಿಕೆಯೊಂದಿಗೆ ಮುಸ್ಲಿಂ ಮಹಿಳೆಯೊಬ್ಬರು ಸಲ್ಲಿಸಿರುವ ಅರ್ಜಿಯ ಕುರಿತು ಅಭಿಪ್ರಾಯ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚನೆ ನೀಡಿದೆ.

ಕೇರಳದ ಆಳಪ್ಪುಳದ ಸಫಿಯಾ ಪಿ.ಎಂ. ಅವರು ಸಲ್ಲಿಸಿರುವ ಅರ್ಜಿಯು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಕೆ.ವಿ. ವಿಶ್ವನಾಥನ್ ಅವರು ಇರುವ ತ್ರಿಸದಸ್ಯ ಪೀಠದ ಎದುರು ಬಂದಿತ್ತು. ಸಫಿಯಾ ಅವರು 'ಕೇರಳದ ಮಾಜಿ ಮುಸ್ಲಿಮರು' ಸಂಘಟನೆಯ ಪ್ರಧಾನ ಕಾರ್ಯದರ್ಶಿ.

ಅರ್ಜಿಯಲ್ಲಿ ಬಹಳ ಆಸಕ್ತಿಕರವಾದ ಪ್ರಶ್ನೆಯನ್ನು ಎತ್ತಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. 'ಅರ್ಜಿದಾರ ಮಹಿಳೆಯು ಹುಟ್ಟಿನಿಂದ ಮುಸ್ಲಿಂ. ಆದರೆ ಷರಿಯಾದಲ್ಲಿ ತನಗೆ ನಂಬಿಕೆ ಇಲ್ಲ, ಅದು ಪ್ರತಿಗಾಮಿ ಕಾನೂನು ಎಂದು ಅವರು ಹೇಳುತ್ತಿದ್ದಾರೆ' ಎಂದು ಮೆಹ್ತಾ ವಿವರಿಸಿದರು.

ಅರ್ಜಿಗೆ ಪ್ರತಿಯಾಗಿ ಕೇಂದ್ರವು ಪ್ರಮಾಣಪತ್ರ ಸಲ್ಲಿಸಬೇಕು ಎಂದು ಪೀಠ ಸೂಚಿಸಿತು. ಇದಕ್ಕಾಗಿ ಕೇಂದ್ರಕ್ಕೆ ನಾಲ್ಕು ವಾರಗಳ ಸಮಯ ನೀಡಿತು.

ತಾನು ಇಸ್ಲಾಂ ಧರ್ಮವನ್ನು ತೊರೆದಿಲ್ಲವಾದರೂ, ತನಗೆ ಈಗ ಧರ್ಮದಲ್ಲಿ ನಂಬಿಕೆ ಇಲ್ಲ ಎಂದು ಅರ್ಜಿದಾರ ಮಹಿಳೆ ಹೇಳಿದ್ದಾರೆ. ಸಂವಿಧಾನದ 25ನೆಯ ವಿಧಿಯ ಅಡಿಯಲ್ಲಿ ತನಗೆ ಧರ್ಮದಲ್ಲಿ 'ನಂಬಿಕೆ ಹೊಂದದೆ ಇರುವ ಹಕ್ಕು' ಕೂಡ ಇರಬೇಕು ಎಂದು ಕೋರಿದ್ದಾರೆ.

ಮುಸ್ಲಿಂ ವೈಯಕ್ತಿಕ ಕಾನೂನಿನ ಪ್ರಕಾರ ನಡೆದುಕೊಳ್ಳುವ ಬಯಕೆ ಇಲ್ಲದವರಿಗೆ ದೇಶದ ಧರ್ಮನಿರಪೇಕ್ಷ ಕಾನೂನುಗಳಿಗೆ ಅನುಗುಣವಾಗಿ ನಡೆದುಕೊಳ್ಳುವ, ಉತ್ತರಾಧಿಕಾರದ ವಿಚಾರದಲ್ಲಿ ಭಾರತೀಯ ಉತ್ತರಾಧಿಕಾರ ಕಾಯ್ದೆಯನ್ನು ಪಾಲಿಸುವ ಅವಕಾಶ ಇರಬೇಕು ಎಂದು ಸಫಿಯಾ ಕೋರಿದ್ದಾರೆ.

ಷರಿಯಾ ಕಾನೂನಿನ ಪ್ರಕಾರ ಮುಸ್ಲಿಂ ಮಹಿಳೆಯರು ಆಸ್ತಿಯಲ್ಲಿ ಮೂರನೆಯ ಒಂದರಷ್ಟು ಹಕ್ಕು ಹೊಂದಿರುತ್ತಾರೆ. ಅರ್ಜಿದಾರ ಮಹಿಳೆಯು ಮುಸ್ಲಿಂ ವೈಯಕ್ತಿಕ ಕಾನೂನಿನ ಪಾಲನೆ ಮಾಡಬೇಕಿಲ್ಲ ಎಂಬ ಘೋಷಣೆಯು ಕೋರ್ಟ್‌ನಿಂದ ಬರಬೇಕು. ಇಲ್ಲದಿದ್ದರೆ ಆಕೆಯ ತಂದೆಗೆ ಆಸ್ತಿಯಲ್ಲಿ ಮೂರನೆಯ ಒಂದಕ್ಕಿಂತ ಹೆಚ್ಚಿನ ಪಾಲನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ಸಫಿಯಾ ಪರ ವಕೀಲರು ಹೇಳಿದರು.

'ವ್ಯಭಿಚಾರದ ಆರೋಪವೊಂದೇ ಡಿಎನ್‌ಎ ಪರೀಕ್ಷೆಗೆ ಆಧಾರವಾಗದು'

ನವದೆಹಲಿ: ವ್ಯಭಿಚಾರದ ಆರೋಪವನ್ನಷ್ಟೇ ಆಧಾರವಾಗಿ ಇರಿಸಿಕೊಂಡು ಡಿಎನ್‌ಎ ಪರೀಕ್ಷೆ ನಡೆಸಬೇಕು ಎಂಬ ಆದೇಶ ನೀಡುವುದರಿಂದ ವ್ಯಕ್ತಿಯ ಘನತೆಯ ಬದುಕಿನ ಹಕ್ಕು ಮತ್ತು ಖಾಸಗಿತನದ ಹಕ್ಕಿಗೆ ಧಕ್ಕೆ ಆಗುತ್ತದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಈ ಮಾತು ಹೇಳಿದೆ. ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 112ನ್ನು ಉಲ್ಲೇಖಿಸಿರುವ ಪೀಠವು, ವಿವಾಹ ಸಂಬಂಧವು ಚಾಲ್ತಿಯಲ್ಲಿ ಇರುವಷ್ಟು ಕಾಲ, ಪತ್ನಿಯಿಂದ ಜನಿಸಿದ ಮಗುವಿಗೆ ಆಕೆಯ ಪತಿಯೇ ತಂದೆ ಎಂಬ ಬಲವಾದ ನಂಬಿಕೆ ಇರುತ್ತದೆ ಎಂದು ಹೇಳಿದೆ.

'ಮಗುವಿನ ಹುಟ್ಟಿನ ಬಗ್ಗೆ ಅನಗತ್ಯವಾದ ಯಾವುದೇ ಪ್ರಶ್ನೆಗಳು ಬರಬಾರದು ಎಂಬ ಉದ್ದೇಶದಿಂದ ಈ ತತ್ವವನ್ನು ರೂಪಿಸಲಾಗಿದೆ. ಮಗುವಿನ ಹುಟ್ಟಿನ ಬಗ್ಗೆ ಪ್ರಶ್ನೆ ಎತ್ತುವ ವ್ಯಕ್ತಿಯು, ಪತಿ–ಪತ್ನಿಯ ನಡುವೆ ಸಂಬಂಧವೇ ಇರಲಿಲ್ಲ ಎಂಬ ನೆಲೆಯಲ್ಲಿ ಮಾತ್ರವೇ ತನ್ನ ಆರೋಪವನ್ನು ಸಾಬೀತು ಮಾಡಬಹುದು' ಎಂದು ಪೀಠ ಸ್ಪಷ್ಟಪಡಿಸಿದೆ.

ಮಗು ವಿವಾಹಜನ್ಯ ಹೌದೇ ಎಂಬ ಪ್ರಶ್ನೆಯನ್ನು ಹೊಂದಿರುವ ಪ್ರಕರಣಗಳಲ್ಲಿ ಮಗುವಿನ ಘನತೆ ಮತ್ತು ಖಾಸಗಿತನವನ್ನು ರಕ್ಷಿಸಬೇಕಾಗುತ್ತದೆ ಎಂದು ಪೀಠವು ಹೇಳಿದೆ.

'ನದಿಗೆ ವಿಷ': ದಾಖಲೆ ಕೇಳಿದ ಇ.ಸಿ

ನವದೆಹಲಿ (ಪಿಟಿಐ): ಯಮುನಾ ನದಿಗೆ ಹರಿಯಾಣ ಸರ್ಕಾರವು ವಿಷಕಾರಿ ರಸಾಯನಿಕಗಳನ್ನು ಬೆರೆಸಲು ಯತ್ನಿಸಿದೆ ಎಂದು ತಾವು ಮಾಡಿರುವ ಆರೋಪಕ್ಕೆ ಪೂರಕ ಸಾಕ್ಷ್ಯಗಳನ್ನು ಬುಧವಾರ ರಾತ್ರಿ 8ರ ಒಳಗೆ ಒದಗಿಸಬೇಕು ಎಂದು ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್ ಅವರಿಗೆ ಚುನಾವಣಾ ಆಯೋಗವು (ಇ.ಸಿ.) ತಾಕೀತು ಮಾಡಿದೆ.

ಒಂದು ವೇಳೆ ಸಾಕ್ಷ್ಯ ಒದಗಿಸಲು ವಿಫಲರಾದರೆ, ರಾಷ್ಟ್ರೀಯ ಭಾವೈಕ್ಯ ಕದಡಲು ಹಾಗೂ ಸೌಹಾರ್ದಕ್ಕೆ ಭಂಗ ಪಡಿಸಲು ಯತ್ನಿಸಿದ ಆರೋಪದ ಮೇಲೆ ಅವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅವಕಾಶವಿದೆ ಎಂದೂ ಇ.ಸಿ. ಹೇಳಿದೆ.

ನದಿಗೆ ಬೆರೆಸಿದ್ದಾರೆ ಎಂದು ಹೇಳಿರುವ ರಸಾಯನಿಕ ಪದಾರ್ಥದ ಸ್ವರೂಪವೇನು, ಎಷ್ಟು ವ್ಯಾಪ್ತಿವರೆಗೆ ಅದು ಹರಡಬಹುದು ಎನ್ನುವ ಮಾಹಿತಿಯನ್ನು ಸಮರ್ಪಕ ದಾಖಲೆಗಳ ಸಹಿತ ಒದಗಿಸಬೇಕು. ದೆಹಲಿ ಜಲಮಂಡಳಿಯ ಎಂಜಿನಿಯರ್‌ಗಳು ಸಮಯಕ್ಕೆ ಸರಿಯಾಗಿ ಆಗಬಹುದಾಗಿದ್ದ ಅನಾಹುತ ತಪ್ಪಿಸಿದರು ಎಂಬ ತಮ್ಮ ಹೇಳಿಕೆಗೆ ಪೂರಕ ಮಾಹಿತಿಯನ್ನೂ ಒದಗಿಸಬೇಕು ಎಂದು ಕೇಜ್ರಿವಾಲ್ ಅವರನ್ನು ಚುನಾವಣಾ ಆಯೋಗವು ಕೇಳಿದೆ.

ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಕೇಜ್ರಿವಾಲ್ ನೀಡಿದ ಹೇಳಿಕೆಯ ಕುರಿತು ಆಯೋಗಕ್ಕೆ ದೂರು ಸಲ್ಲಿಸಿದ್ದವು.

ಎಎಪಿ ವಿರುದ್ಧ ಬಿಜೆಪಿ ವಾಗ್ದಾಳಿ

ನವದೆಹಲಿ (ಪಿಟಿಐ): 'ದೆಹಲಿಯಲ್ಲಿ ಜನತೆಗೆ ಪೂರೈಕೆ ಆಗುತ್ತಿರುವ ನೀರು' ಈಗ ವಿಧಾನಸಭೆ ಚುನಾವಣೆಗೆ ಚರ್ಚೆ ವಸ್ತುವಾಗಿದೆ. ಎಎಪಿ ವಿರುದ್ಧ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದಾರೆ.

> ವಿಷ ಮಿಶ್ರಿತ ನೀರುಪೂರೈಕೆ ಕುರಿತ ಹೇಳಿಕೆಗೆ ಅರವಿಂದ ಕೇಜ್ರಿವಾಲ್ ದಾಖಲೆ ನೀಡಲಿ. ಸುಳ್ಳು ಹೇಳುವುದರಲ್ಲಿ ಕೇಜ್ರಿವಾಲ್ ಅವರಿಗೆ ಸರಿಸಾಟಿ ಯಾರೂ ಇಲ್ಲ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

'ಬಿಜೆಪಿ ನೇತೃತ್ವದ ಹರಿಯಾಣ ಸರ್ಕಾರ ಜನರ ಕೊಲ್ಲಲು, ಎಎಪಿ ದೂಷಿಸಲು ದೆಹಲಿಗೆ 'ವಿಷ ಮಿಶ್ರಿತ' ನೀರು ಪೂರೈಸಿತ್ತು' ಎಂದು ಅರವಿಂದ ಕೇಜ್ರಿವಾಲ್ ಆರೋಪಿಸಿದ್ದರು.

'ದೆಹಲಿ ನನಗೆ ಮನೆ ಇದ್ದಂತೆ. ವಿಷಮಿಶ್ರಿತ ನೀರು ಏಕೆ ಪೂರೈಸಲಿ. ಕೇಜ್ರಿವಾಲ್ ದೊಡ್ಡ ಸುಳ್ಳು ಹೇಳಿದ್ದಾರೆ' ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಪ್ರತಿಕ್ರಿಯಿಸಿದ್ದಾರೆ.

ಹೇಳಿಕೆ ಆಧಾರರಹಿತ: 'ದೆಹಲಿಗೆ ವಿಷ ಮಿಶ್ರಿತ ನೀರು ಪೂರೈಕೆ' ಕುರಿತ ಕೇಜ್ರಿವಾಲ್‌ರ ಹೇಳಿಕೆ ಆಧಾರರಹಿತ' ಎಂದು ದೆಹಲಿ ಜಲ ಮಂಡಳಿ (ಡಿಜೆಬಿ) ಸಿಇಒ ಶಿಲ್ಪಾ ಶಿಂದೆ ಅವರು ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ.

ಮರದ ಮೆಟ್ಟಿಲು ಕುಸಿದು 7 ಜನ ಸಾವು

ಲಖನೌ: ಉತ್ತರ ಪ್ರದೇಶದ ಬಘಪತ್ ಜಿಲ್ಲೆಯ ಬರೌತ್‌ನಲ್ಲಿ ಜೈನ ಸಮುದಾಯದ ಧಾರ್ಮಿಕ ಕಾರ್ಯಕ್ರಮದಲ್ಲಿ ನಿರ್ಮಿಸಲಾಗಿದ್ದ ತಾತ್ಕಾಲಿಕ ಮರದ ಮೆಟ್ಟಿಲುಗಳು ಕುಸಿದು 7 ಜನರು ಸಾವಿಗೀಡಾಗಿದ್ದು, 75 ಮಂದಿ ಗಾಯಗೊಂಡಿರುವ ಘಟನೆ ಮಂಗಳವಾರ ನಡೆದಿದೆ.

ಶ್ರೀ ದಿಗಂಬರ ಜೈನ ಪದವಿ ಕಾಲೇಜಿನಲ್ಲಿ ಭಗವಾನ್ ಆದಿನಾಥರ ಅಭಿಷೇಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇಲ್ಲಿ ನಿರ್ಮಿಸಲಾಗಿದ್ದ 65 ಅಡಿಯ ತಾತ್ಕಾಲಿಕ ಮೆಟ್ಟಿಲುಗಳು ಕುಸಿದ ಪರಿಣಾಮ ಅದರ ಮೇಲೆ ನಿಂತಿದ್ದ ಭಕ್ತರು ಕೆಳಗೆ ಬಿದ್ದಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಕಾರ್ಯಕ್ರಮ ಆಯೋಜನೆಗೆ ಅನುಮತಿ ಪಡೆಯಲಾಗಿತ್ತು. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಾಕುಂಭಮೇಳ: ಮೌನಿ ಅಮಾವಾಸ್ಯೆ ಇಂದು

ಕುಂಭಮೇಳ: 'ಪವಿತ್ರ ಸ್ನಾನ'ಕ್ಕೆ ಭಕ್ತಸಾಗರ

ಪ್ರಜಾವಾಣಿ ವಾರ್ತೆ

ಲಖನೌ: ಮೌನಿ ಅಮಾವಾಸ್ಯೆ ದಿನವಾದ ಬುಧವಾರ ತ್ರಿವೇಣಿ ಸಂಗಮದಲ್ಲಿ ಮಿಂದೇಳಲು ಅಪಾರ ಭಕ್ತಸಾಗರವೇ ಪ್ರಯಾಗ್‌ರಾಜ್‌ನಲ್ಲಿ ಜಮಾಯಿಸಿದೆ.

ಮಹಾಕುಂಭಮೇಳದ ಎರಡನೇ 'ಪವಿತ್ರ ಸ್ನಾನ' ಇದಾಗಿದ್ದು, ಮಂಗಳವಾರ ರಾತ್ರಿಯೇ ಆರಂಭಗೊಂಡಿದೆ. ಮೌನಿ ಅಮಾವಾಸ್ಯೆಯಂದು 10 ಕೋಟಿ ಭಕ್ತರು ಸಂಗಮದಲ್ಲಿ ಮಿಂದೇಳುವ ನಿರೀಕ್ಷೆಯಿದೆ.

ಸಂಗಮದ ಸುತ್ತಮುತ್ತ ಕಣ್ಣು ಹಾಯಿಸಿದಷ್ಟು ದೂರ ಜನಸಾಗರವೇ ಸೇರಿದೆ. ಮಂಗಳವಾರವೇ ಅಸಂಖ್ಯಾತ ಭಕ್ತರು ಪ್ರಯಾಗ್‌ರಾಜ್‌ನಲ್ಲಿ ಬೀಡುಬಿಟ್ಟಿದ್ದು, ಜನದಟ್ಟಣೆ ನಿಯಂತ್ರಿಸಲು ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದತ್ತ (ಗಂಗಾ, ಯಮುನಾ, ಸರಸ್ವತಿ ನದಿ ಸೇರುವ ಸ್ಥಳ) ಅಸಂಖ್ಯಾತ ಜನರು ಸೇರುತ್ತಿದ್ದಾರೆ.

ತ್ರಿವೇಣಿ ಮಾರ್ಗ, ಕಾಳಿ ಮಾರ್ಗ, ನಾಗ್ ವಾಸುಕಿ ರಸ್ತೆ, ಝೂಸಿ ರಸ್ತೆ, ಸಂಗಮ್ ಬೌಡ್ ರಸ್ತೆ ಸೇರಿದಂತೆ ಹಲವು ರಸ್ತೆಗಳು ಕಿಕ್ಕಿರಿದ ಜನರಿಂದ ತುಂಬಿವೆ.

ಕುಂಭಮೇಳದ ಸ್ಥಳವನ್ನು 'ವಾಹನರಹಿತ ವಲಯ' ಎಂದು ಘೋಷಿಸಲಾಗಿದೆ. ಕಳೆದ ಎರಡು ದಿನದಲ್ಲಿ ಸುಮಾರು ಮೂರು ಕೋಟಿ ಭಕ್ತರು ತ್ರಿವೇಣಿ ಸಂಗಮದಲ್ಲಿ 'ಪವಿತ್ರ ಸ್ನಾನ' ಮಾಡಿದ್ದಾರೆ. ಕಳೆದ 17 ದಿನಗಳಲ್ಲಿ 15 ಕೋಟಿಗೂ ಹೆಚ್ಚು ಯಾತ್ರಾರ್ಥಿಗಳು ಪವಿತ್ರ ಸ್ನಾನ ಮಾಡಿದ್ದಾರೆ ಎಂದು ರಾಜ್ಯ ಸರ್ಕಾರ ಮಂಗಳವಾರ ತಿಳಿಸಿದೆ.

ಕಳೆದ ಎರಡು ದಿನಗಳಿಂದಲೂ ವಾರಾಣಸಿ, ಅಯೋಧ್ಯೆಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದಾರೆ.



ಮೌನಿ ಅಮಾವಾಸ್ಯೆಯಂದು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲು ಪ್ರಯಾಗ್‌ರಾಜ್‌ನಲ್ಲಿ ಮಂಗಳವಾರವೇ ಜಮಾಯಿಸಿದ್ದ ಭಕ್ತ ಸಾಗರ–ಪಿಟಿಐ ಚಿತ್ರ

ರೈಲಿಗೆ ಕಲ್ಲು ತೂರಿದ ಭಕ್ತರು

ಛತ್ತರಪುರ: ಪ್ರಯಾಗ್‌ರಾಜ್‌ಗೆ ತೆರಳುತ್ತಿದ್ದ ಎರಡು ರೈಲುಗಳ ಮೇಲೆ ಮಹಾಕುಂಭಮೇಳಕ್ಕೆ ತೆರಳಬೇಕಿದ್ದ ಭಕ್ತರು ಕಲ್ಲು ತೂರಿದ್ದಾರೆ.

ಬೋಗಿಗಳಲ್ಲಿದ್ದ ಪ್ರಯಾಣಿಕರು ಬಾಗಿಲು ತೆರೆಯದಿದ್ದರಿಂದ ಆಕ್ರೋಶಗೊಂಡ ಸ್ಥಳೀಯ ಭಕ್ತರು ಕಲ್ಲು ತೂರಿದ್ದಾರೆ. ಛತ್ತರಪುರ ಮತ್ತು ಹರ್ಪಲಪುರ ರೈಲು ನಿಲ್ದಾಣದಲ್ಲಿ ಸೋಮವಾರ ರಾತ್ರಿ ಘಟನೆ ನಡೆದಿದೆ. ಇಂತಹ ಘಟನೆಗಳನ್ನು ತಪ್ಪಿಸಲು ಭದ್ರತೆ ಒದಗಿಸಲಾಗುವುದು. ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ವಿಶೇಷ ರೈಲು ಗಳನ್ನು ಓಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಪ್ರಧಾನ ಕಛೇರಿ : " ಕೆ.ಎಸ್.ಎಫ್.ಸಿ" ಭವನ, ನಂ.1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು–560052, ದೂರವಾಣಿ: 080–22282507, ವೆಬ್‌ಸೈಟ್ : www.ksfc.karnataka.gov.in
ಸಂಖ್ಯೆ:ಕರಾಹಸಂ/ಪ್ರ.ಕ/ಆಡಳಿತ/ಹೊರಗುತ್ತಿಗೆ/5/2024–25 ದಿನಾಂಕ : 29.01.2025
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಪ್ರಧಾನ ಕಛೇರಿ, ಬೆಂಗಳೂರಿನಲ್ಲಿ House Keeping Personnel, Security Guards/Supervisor, and Drivers & Peons ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ಒಂದು ವರ್ಷದ ಅವಧಿಗೆ ಏಜೆನ್ಸಿಗಳಿಂದ ಇ–ಟೆಂಡರ್‌ಗಳನ್ನು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸಮಯಾನುಸಾರ ಘಟನೆಗಳ ವಿವರ (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 27.02.2025 ಸಂಜೆ 4 ಘಂಟೆ** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 01.03.2025** ಆಸಕ್ತಿವುಳ್ಳವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ಮೂಲಕ ಟೆಂಡರ್ ವಿವರಗಳನ್ನು ಡೌನ್‌ಲೋಡ್ ಮಾಡಿ ಅವುಗಳನ್ನು ಭರ್ತಿ ಮಾಡಿ ಇದೇ ವೆಬ್‌ಸೈಟ್ ಮೂಲಕ ಸಲ್ಲಿಸಬೇಕಾಗಿರುತ್ತದೆ. ಇ.ಎಂ.ಡಿ ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ವಿದ್ಯುನ್ಮಾನ ಮೂಲಕವೇ ಸಲ್ಲಿಸತಕ್ಕದ್ದು. ಟೆಂಡರ್ ಪ್ರಕ್ರಿಯೆಯಲ್ಲಿ ಏನಾದರೂ ಬದಲಾವಣೆಗಳಿದ್ದರೆ, ಇದೇ ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ವಿವರಗಳಿಗಾಗಿ ಸಂಪರ್ಕಿಸಿ ವ್ಯವಸ್ಥಾಪಕರು (ಆಡಳಿತ) 080–22282507.
ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿ ಮತ್ತು ಆ)

ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ ನಿಯಮಿತ.
(ಕರ್ನಾಟಕ ಸರ್ಕಾರದ ಉದ್ಯಮ)
ನಂ.16/ಡಿ, 05ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಕಛೇರಿ ದೂರವಾಣಿ ಸಂಖ್ಯೆ: 080–22374848. ಮೊಬೈಲ್ ಸಂಖ್ಯೆ:7899899039
ಸಂಖ್ಯೆ: ಕರಾಕಾಅನಿ–16/2024–25 ದಿನಾಂಕ: 28/01/2025
ಇ–ಟೆಂಡರ್ (ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ ನಿಯಮಿತ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿದೆ.
ವಿವರಗಳಿಗೆ https://kpp.karnataka.gov.in/eportal/index.seam ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ.
KPP PORTAL TENDER NUMBER : KSKDCL/2024-25/SE0001
ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:08.02.2025, 16.00 ಗಂಟೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ:10.02.2025 , 11.00ಗಂಟೆ,
ಆರ್ಥಿಕ ಬಿಡ್ ತೆರೆಯುವ ದಿನಾಂಕ:15.02.2025, 11.00ಗಂಟೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು(ಪ್ರ), ಕರಾಕಾಅನಿ
ವಾ.ಸಾ.ಸಂ.ಇ/ವಾಪ್ರ/4622/ಆಕಾರ್/2024–25

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ ಅಂಬೇಡ್ಕರ್ ವಿಧಿ, ಬೆಂಗಳೂರು–560001, ದೂರವಾಣಿ ಸಂ:080–22032754,
ಇ–ಮೇಲ್ ಐಡಿ: diregov.rdprgov.in, rdprrecruitmentgmail.com
ಸಂ: ಗ್ರಾಅಪ/09/ಇ–ಆಡಳಿತ/2025 ದಿನಾಂಕ: 28.01.2025
ಪ್ರಕಟಣೆ
ಇ–ಆಡಳಿತ ಕಛೇರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಈ ಕೆಳಕಂಡ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
Technical Consultant-01
ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು 11/02/2025 ರೊಳಗೆ ಈ ಕೆಳಗೆ ತಿಳಿಸಲಾಗಿರುವ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ.
ವಿಳಾಸ: ನಿರ್ದೇಶಕರು, ಇ–ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು–560001
ಅರ್ಜಿ ನಮೂನೆ, ಅರ್ಹತೆ ಮತ್ತು ಅನುಭವದ ಕುರಿತು ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ಜಾಲತಾಣ **https://www.rdpr.karnataka.gov.in** ವನ್ನು ವೀಕ್ಷಿಸುವುದು.
ಸದರಿ ಹುದ್ದೆಯು 02 ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಇರುತ್ತದೆ.
ಸಹಿ/– ನಿರ್ದೇಶಕರು, ಇ–ಆಡಳಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ವಾ.ಸಾ.ಸಂ.ಇ/ವಾಪ್ರ/4621/ಆಕಾರ್/2024–25

ಕರ್ನಾಟಕ ಸರಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ, ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ
ದೂರವಾಣಿ :08182–223900 e-mail: dcfsfsmg@gmail.com
ಕ್ರಸಂ: ಎ3/ಬಿಯುಡಿ/ಕೆಎಸ್‌ಎಫ್/ಸಿಆರ್–01/2024–25 ದಿ: 27.01.2025
ವಿಷಯ :– ಇ–ಹರಾಜಿಗೆ ಸಂಬಂಧಿಸಿದ ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ಸಾಮಾಜಿಕ ಅರಣ್ಯ ವಿಭಾಗ, ವ್ಯಾಪ್ತಿಯ ತೀರ್ಥಹಳ್ಳಿ ತಾಲ್ಲೂಕು ಯೋಗಿನರಸಿಪುರದ ಬೊಬ್ಬಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದಲ್ಲಿ ನಿಂತ ಅಕೇಶಿಯಾ ಮರಗಳನ್ನು ದಿನಾಂಕ:04.03.2025 ರಂದು ಇ–ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕ ನಿಗಧಿಪಡಿಸಲಾಗಿರುತ್ತದೆ. ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆಯ ಸಂಖ್ಯೆ:ಎ3/ಬಿಯುಡಿ/ಕೆಎಸ್‌ಎಫ್/ಸಿಆರ್–01/2024–25 ದಿನಾಂಕ:27.01.2025 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ ಅಥವಾ ವಲಯ ಅರಣ್ಯಾಧಿಕಾರಿಗಳ ಕಛೇರಿ, ಅಲ್ಕೋಳ, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಇ–ಹರಾಜಿನ ಕುರಿತು ವಿವರಗಳನ್ನು https://www.mstcecommerce.com ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಇ–ಹರಾಜಿಗೆ ಇಟ್ಟಿರುವ ನಿಂತ ಅಕೇಶಿಯಾ ಮರಗಳ ವಿವರ
(Standing Acacia Trees)
ಕ್ರ.ಸಂ. 1. ಹರಾಜಿಗೆ ಇಟ್ಟಿರುವ ಮರಗಳಿರುವ ಸ್ಥಳ: ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಯೋಗಿನರಸಿಪುರ ಗ್ರಾಮದ ಬೊಬ್ಬಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ **ಹರಾಜಿನ ದಿನಾಂಕ:** 04–03–2025 ಬೆಳಗ್ಗೆ 11 ರಿಂದ ಸಂಜೆ 4–00 **ಅಕೇಶಿಯಾ ಮರಗಳ ಸಂಖ್ಯೆ:** 5320 **ಅಂದಾಜು ಪರಿಮಾಣ:** ಒಟ್ಟು 5320 ಮರಗಳು (ಎಲ್ಲಿ ಹೇಗಿದೆಯೋ ಹಾಗೆ) ನಾಟಾ = 296.655 ಘ.ಮೀ. ಫೈರ್‌ವುಡ್ 1377.86 ಘ.ಮೀ. ಪೋಲ್ಸ್ = 1864 ಸಂ
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/24–25/170/01/1519

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ.16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ದೂರವಾಣಿ: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: **kerc-ka@nic.in** ವೆಬ್‌ಸೈಟ್ : **https://kerc.karnataka.gov.in**
ಸಂಖ್ಯೆ: ಕವಿನಿಆ/ಕೆಇಜಿಸಿ/ಕೆಇಡಿಸಿ/2024–25/1380 ದಿನಾಂಕ: 27.01.2025
ಸೂಚನೆ
ವಿಷಯ: ಕರಡು–ಕರ್ನಾಟಕ ವಿದ್ಯುಚ್ಛಕ್ತಿ ಗ್ರಿಡ್ (ಜಾಲ) ಸಂಹಿತೆ ಮತ್ತು ವಿತರಣಾ ಸಂಹಿತೆ 2024.
ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಮಯಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 23.01.2025 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ **https://kerc.karnataka.gov.in** ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.
ಆಸಕ್ತರು ಸದರಿ ಕರಡು ಷರತ್ತುಗಳ ಬಗ್ಗೆ ಅಭಿಪ್ರಾಯ/ವಿಮರ್ಶೆ/ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ **ದಿನಾಂಕ: 21.02.2025 ರೊಳಗೆ** ಲಿಖಿತವಾಗಿ ಸಲ್ಲಿಸಬಹುದು.
ವಾಸಾಸಂಇ/ಉನಿ-ಸಿ.ಪಿ/4616/ಕೆಎಸ್‌ಎಂಸಿಎ/2024-25 **ಸಹಿ/- ಕಾರ್ಯದರ್ಶಿ**

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ –577126.
ಇ ಮೇಲ್:–dcfkoppa@gmail.com ದೂರವಾಣಿ:08265–221266
ಸಂಖ್ಯೆ:ಟಿಬಿಆರ್:ಹರಾಜು:ಸಿಆರ್:28/2024–25 ದಿನಾಂಕ: 17–01–2025
ಅರಣ್ಯ ಉತ್ಪನ್ನಗಳ ಇ–ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ
ಕೊಪ್ಪ ವಿಭಾಗದ ಸಂಗಮೇಶ್ವರಪೇಟೆ ಮತ್ತು ನರಸಿಂಹರಾಜಪುರ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ದಾಸ್ತಾನು ಇರುವ ಅರಣ್ಯ ಉತ್ಪನ್ನಗಳನ್ನು ದಿನಾಂಕ:17–02–2025 ರಿಂದ 20–02–2025 ರಂದು ಇ–ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆ ಸಂಖ್ಯೆ ಟಿಬಿಆರ್:ಹರಾಜು:ವಿವ: 28/2024–25, ದಿನಾಂಕ:17–01–2025ರಲ್ಲಿ ತಿಳಿಸಿರುವ ಎಲ್ಲಾ ಷರತ್ತಿಗೊಳಪಟ್ಟು ಹರಾಜಿನಲ್ಲಿ 'ಭಾಗವಹಿಸಬಹುದಾಗಿದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಇ–ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್ ಸೈಟ್ www.msteecommerce.com & www.etimber.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ, ಕೊಪ್ಪ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560008.
ದೂ.ಸಂ: 080–25037203/25037214
ದಿನಾಂಕ: 28.01.2025
ಇ–ಟೆಂಡರ್ ಪ್ರಕಟಣೆ
ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಎಲ್‌ಪಿಎಸ್‌ಸಿ ಕ್ಯಾಂಪಸ್ ಬೆಂಗಳೂರು ಇಲ್ಲಿ ಬಾಹ್ಯಾಕಾಶ ನೌಕೆಯ ಪ್ರೊಪಲ್ಷನ್ ಸಿಸ್ಟಮ್ ಮತ್ತು ಟೆಸ್ಟ್ ಫೆಸಿಲಿಟಿ (SPS-ITF)ನಿರ್ಮಾಣ–(ಸಿವಿಲ್ ಕಾಮಗಾರಿ)
ಟೆಂಡರ್ ಪ್ರಕಟಣೆ ಸಂಖ್ಯೆ	ಎಲ್‌ಪಿಎಸ್‌ಸಿಬಿ/ಸಿಎಂಡಿ/01/1001/ಸಿ/ಎಂಜೆ/001/2024–25 ದಿನಾಂಕ: 27.01.2025
ಅಂದಾಜು ಮೊತ್ತ	₹ 507.80 ಲಕ್ಷಗಳು
ಪೂರ್ಣಗೊಳಿಸುವ ಅವಧಿ	8 (ಎಂಟು) ತಿಂಗಳು
ಮಾರಾಟದ ಅವಧಿ	30.01.2025 ರಿಂದ 13.02.2025 ರವರೆಗೆ
ಇಎಂಡಿ	₹ 10,15,600/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು **www.tenderwizard.com/ISRO** ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ **www.isro.gov.in, www.lpsc.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.
ಸಹಿ/– ಮುಖ್ಯಸ್ಥರು, ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–1,
ಸಂ. SFS/ADA-2/6/2024-25 ದಿನಾಂಕ: 02.01.2025
Request for Proposal ಅಧಿಸೂಚನೆ
ವಿಷಯ: 2025ರ ಮುಂಗಾರು ಹಂಗಾಮಿಗೆ ಇಲಾಖಾ ಕಾರ್ಯಕ್ರಮಗಳಿಗೆ ಬಿತ್ತನೆ ಬೀಜ ಸರಬರಾಜು ಮಾಡುವ ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಲು Request for Proposal ಕರೆಯುವ ಬಗ್ಗೆ.
2025ರ ಮುಂಗಾರು ಹಂಗಾಮಿಗೆ ಇಲಾಖಾ ಕಾಯಕ್ರಮಗಳಿಗೆ ಅವಶ್ಯವಿರುವ ಭತ್ತ, ರಾಗಿ, ಸಜ್ಜೆ, ಜೋಳ, ಮೆಕ್ಕೆಜೋಳ, ತೃಣ ಧಾನ್ಯಗಳು, ತೊಗರಿ, ಹೆಸರು, ಉದ್ದು, ಅಲಸಂದೆ, ಶೇಂಗಾ, ಸೋಯಾಅವರೆ, ಹರಳು, ಹುರಳಿ, ಅವರೆ, ಹತ್ತಿ ಮತ್ತು ಸೂರ್ಯಕಾಂತಿ ಬೆಳೆಗಳ ಪ್ರಮಾಣಿತ/ನಿಜಚೀಟಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಬಿತ್ತನೆ ಬೀಜ ಉತ್ಪಾದನಾ ಸಂಸ್ಥೆಗಳಿಂದ Request for Proposal ಆಹ್ವಾನಿಸಲಾಗಿದೆ. ಸದರಿ Request for Proposal ಕನ್‌ಸೈನ್‌ಮೆಂಟ್ (Consignment) ಆಧಾರದ ಮೇಲೆ ಬೇಡಿಕೆ ಇರುವ ಬಿತ್ತನೆ ಬೀಜಗಳ ಮೂಲವನ್ನು ಗುರುತಿಸಲು ಕರೆಯಲಾಗಿದೆ.
ಇಚ್ಛೆಯುಳ್ಳ ಸರಬರಾಜುದಾರರು Request for Proposal ಅರ್ಜಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಅಂತರ್‌ಜಾಲದಿಂದ ಉಚಿತವಾಗಿ ಪಡೆಯಬಹುದಾಗಿದೆ. ಸದರಿ Request for Proposalನಲ್ಲಿ ಭಾಗವಹಿಸಲಿಚ್ಛಿಸುವ ಬೀಜ ಸರಬರಾಜುದಾರರು ಇ–ಆಡಳಿತ ಕೇಂದ್ರ, ನಾಲ್ಕನೇ ಮಹಡಿ, ಶ್ರೀ ಅರವಿಂದ ಭವನ, ಮೈಥಿಕ್ ಸೊಸೈಟಿ ಕಾಂಪೌಂಡ್, ನೃಪತುಂಗ ರಸ್ತೆ, ಬೆಂಗಳೂರು–560001 ರವರಲ್ಲಿ ನೋಂದಣಿ ಮಾಡಿಸಿ DSC Key ಅಥವಾ ಇ–ಟೋಕನ್ ಪಡೆಯಬೇಕಾಗಿದೆ.
Request for Proposal ಅರ್ಜಿಗಳು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲ: https://kppp.karnataka.gov.in ನಲ್ಲಿ ದಿನಾಂಕ: 20–01–2025 ರಿಂದ ಲಭ್ಯವಾಗುತ್ತದೆ. Request for Proposal ಸಂಖ್ಯೆ. AD/2024-25/IND0093 ಸದರಿ Request for Proposalನ್ನು ಅಂತರ್ ಜಾಲದ (online) ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 19–02–2025, ಸಮಯ ಸಂಜೆ 5.00 ಗಂಟೆ.
ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 24–02–2025 ರಂದು ಬೆಳಿಗ್ಗೆ: 11.00 ಗಂಟೆಗೆ ಸಂಭ್ರಮ ಸಭಾಂಗಣ, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು.
ಸಹಿ/– ಕೃಷಿ ನಿರ್ದೇಶಕರು
DIPR/CP/4629/Zen/2024-25

ಬೂಮ್ರಾಗೆ ವರ್ಷದ ಕ್ರಿಕೆಟಿಗ ಕಿರೀಟ

ಶರವೇಗದ ಸರದಾರನಿಗೆ ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ಪ್ರಶಸ್ತಿ

ಜಸ್‌ಪ್ರೀತ್ ಬೂಮ್ರಾ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಶರವೇಗದ ಸರದಾರ ಜಸ್‌ಪ್ರೀತ್ ಬೂಮ್ರಾ ಅವರು ಅಂತರ-ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

2024ರಲ್ಲಿ 'ಕೌಶಲದಲ್ಲಿ ಶ್ರೇಷ್ಠತೆ, ನಿಖರತೆ ಮತ್ತು ನಿರಂತರ ಸಾಮರ್ಥ್ಯ ಪ್ರದರ್ಶನ'ವನ್ನು ಎಲ್ಲ ಮಾದರಿಯ ಕ್ರಿಕೆಟ್‌ನಲ್ಲಿಯೂ ತೋರಿದ ಆಟಗಾರ ಬೂಮ್ರಾ.

'ಜಸ್‌ಪ್ರೀತ್ ಬೂಮ್ರಾ ಅವರು 2024ರಲ್ಲಿ ಅತ್ಯಮೋಘ ಸಾಧನೆ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಪ್ರತಿಷ್ಠಿತ ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವರ್ಷದ ಶ್ರೇಷ್ಠ ಕ್ರಿಕೆಟಿಗ ಗೌರವವನ್ನು ಅವರಿಗೆ ಐಸಿಸಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಲಾಗುವುದು. ಅವರು ದೀರ್ಘ ಮತ್ತು ಚುಟುಕು ಕ್ರಿಕೆಟ್ ಮಾದರಿಗಳಲ್ಲಿ ತಮ್ಮ ಎದುರಾಳಿಗಳ ಮುಂದೆ ಪಾರಮ್ಯ ಮೆರೆದಿದ್ದಾರೆ' ಎಂದು ಐಸಿಸಿ ಪ್ರಕಟಣೆಯಲ್ಲಿ ಶ್ಲಾಘಿಸಿದೆ.

ಬೂಮ್ರಾ ಅವರು ಈ ಸಾಧನೆ ಮಾಡಿದ ಭಾರತದ ಐದನೇ ಆಟಗಾ-ರನಾಗಿದ್ದಾರೆ. ಈ ಮೊದಲು ರಾಹುಲ್ ದ್ರಾವಿಡ್ (2004), ಸಚಿನ್ ತೆಂಡೂಲ್ಕರ್ (2010), ಆರ್. ಅಶ್ವಿನ್ (2016) ಮತ್ತು ವಿರಾಟ್ ಕೊಹ್ಲಿ (2017, 2018) ಅವರಿಗೆ ಈ ಪ್ರಶಸ್ತಿ ಒಲಿದಿತ್ತು.

'ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಬೂಮ್ರಾ ಅವರು ದಾಖಲೆಯ 907 ಅಂಕಗಳನ್ನು ಗಳಿಸಿದ್ದಾರೆ. ಈ ಐತಿಹಾಸಿಕ ಸಾಧನೆ ಮಾಡಿದ ಭಾರತದ ಏಕೈಕ ಬೌಲರ್ ಅವರಾಗಿದ್ದಾರೆ' ಎಂದು ಐಸಿಸಿ ಬಣ್ಣಿಸಿದೆ.

'ವಿಶ್ವದ ಸರ್ವಶ್ರೇಷ್ಠ ವೇಗದ ಬೌಲರ್ ಆಗಿ ಅವರು ಈ ವರ್ಷ ಗುರುತಿಸಿಕೊಂಡಿದ್ದಾರೆ' ಎಂದೂ ಪ್ರಕಟಣೆಯಲ್ಲಿ ಹೇಳಲಾಗಿದೆ.

ಹೋದ ವರ್ಷ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಲು ಅವರ ಅಮೋಘ ಬೌಲಿಂಗ್ ಬಹಳಷ್ಟು ಕಾರಣವಾಗಿತ್ತು. ಅವರು ಆ ಟೂರ್ನಿಯಲ್ಲಿ 15 ವಿಕೆಟ್ ಗಳಿಸಿದ್ದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಅವರು 200 ಕ್ಕೂ ಹೆಚ್ಚು ವಿಕೆಟ್‌ಗಳನ್ನು ಅತಿ ವೇಗವಾಗಿ ಗಳಿಸಿದ ಸಾಧನೆಯನ್ನೂ ಮಾಡಿದ್ದಾರೆ.

ಬೂಮ್ರಾ ಅವರು ಈ ವರ್ಷ ಟೆಸ್ಟ್ ಕ್ರಿಕೆಟ್‌ನಲ್ಲಿ 71 ವಿಕೆಟ್‌ಗಳನ್ನು 13 ಪಂದ್ಯಗಳಿಂದ ಗಳಿಸಿದ್ದಾರೆ. ಈ ಸಾಧನೆ ಮಾಡಿದ ಭಾರತದ ಎರಡನೇ ಬೌಲರ್ ಅವರಾಗಿದ್ದಾರೆ. ಕಪಿಲ್ ದೇವ್ ಅವರು 1983ರಲ್ಲಿ 100 ವಿಕೆಟ್ ಗಳಿಸಿದ್ದರು.

ಬೂಮ್ರಾ ಅವರು ಈಚೆಗೆ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಐದು ಪಂದ್ಯಗಳಿಂದ 32 ವಿಕೆಟ್‌ಗಳನ್ನು ಗಳಿಸಿದ್ದರು.

ಟಿ20 ವಿಶ್ವಕಪ್ ವಿಜಯವೇ ವಿಶೇಷ

'ಈ ಪ್ರಶಸ್ತಿ ಗಳಿಸಿರುವುದು ನನ್ನ ಪಾಲಿಗೆ ಬಹಳ ಹೆಮ್ಮೆಯ ವಿಷಯ. ಬಾಲ್ಯದಲ್ಲಿ ನನ್ನ ನೆಚ್ಚಿನ ಕ್ರಿಕೆಟ್ ತಾರೆಗಳು ಈ ಪ್ರತಿಷ್ಠಿತ ಪ್ರಶಸ್ತಿ ಜಯಿಸುವುದನ್ನು ನೋಡುತ್ತಿದ್ದೆ. ಈಗ ನಾನು ಅದನ್ನು ಸ್ವೀಕರಿಸುತ್ತಿರುವುದು ಬಹಳ ಸಂತಸದ ಸಂಗತಿ' ಎಂದು ಜಸ್‌ಪ್ರೀತ್ ಬೂಮ್ರಾ ಹೇಳಿದ್ದಾರೆ.

'ಟಿ20 ವಿಶ್ವಕಪ್ ಜಯಿಸಿದ್ದು ನನಗೆ ಅವಿಸ್ಮರಣೀಯ ಸಂಗತಿಯಾಗಿದೆ. ಆದ್ದರಿಂದ ವರ್ಷದ ಸಾಧನೆಗಳಲ್ಲಿ ನಾನು ಮೊದಲಿಗೆ ಆಯ್ಕೆ ಮಾಡಿಕೊಳ್ಳುವುದು ಈ ವಿಶ್ವಕಪ್ ಸಾಧನೆಯನ್ನೇ' ಎಂದು ಪ್ರತಿಕ್ರಿಯಿಸಿದ್ದಾರೆ.

'ಈ ಪ್ರಶಸ್ತಿಯನ್ನು ನಾನು ಬಹಳ ಸಂತೋಷ ಹಾಗೂ ಗೌರವದಿಂದ ಸ್ವೀಕರಿಸುವೆ. ಆದರೆ ನನ್ನ ಕಾಲುಗಳ ನೆಲದ ಮೇಲೆ ಇರುವಂತೆ ನೋಡಿಕೊಳ್ಳುವೆ. ಮತ್ತಷ್ಟು ಸಾಧನೆಯತ್ತ ಪ್ರಯತ್ನಿಸುವೆ' ಎಂದು ನುಡಿದರು.

ಅಮೇಲಿಯಾ ಕೆರ್ 'ಐಸಿಸಿ ವರ್ಷದ ಮಹಿಳಾ ಕ್ರಿಕೆಟರ್'

ಅಮೇಲಿ ಕೆರ್

ದುಬೈ (ಪಿಟಿಐ): 2023ರಲ್ಲಿ ತೋರಿದ ಅಮೋಘ ಆಟಕ್ಕಾಗಿ ನ್ಯೂಜಿಲೆಂಡ್‌ನ ಆಲ್‌ರೌಂಡರ್ ಅಮೇಲಿಯಾ ಕೆರ್ ಅವರು ಐಸಿಸಿ ವರ್ಷದ ಮಹಿಳಾ ಕ್ರಿಕೆಟರ್ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಗೌರವಕ್ಕೆ ನೀಡಲಾಗುವ ಹೇಹೊ ಫ್ಲಿಂಟ್ ಟ್ರೋಫಿ ಗೆದ್ದುಕೊಂಡ ನ್ಯೂಜಿಲೆಂಡ್‌ನ ಮೊದಲ ಆಟಗಾರ್ತಿ ಎನಿಸಿದ್ದಾರೆ.

ಲಾರಾ ವೋಲ್ವಾರ್ಟ್, ಚಮಾರಿ ಅಟಪಟ್ಟು ಮತ್ತು ಅನ್ನಾಬೆಲ್ ಸದರ್‌ಲ್ಯಾಂಡ್ ಅವರ ಪೈಪೋಟಿಯನ್ನು ಎದುರಿಸಿದ 24 ವರ್ಷ ವಯಸ್ಸಿನ ಮೆಲೀ ಕೆರ್ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಸ್ಫೋಟಕ ಇನಿಂಗ್ಸ್ ಆಡುವ ಕೆರ್, ಉಪಯುಕ್ತ ಲೆಗ್ ಸ್ಪಿನ್ನರ್ ಆಗಿದ್ದಾರೆ. 2017ರಲ್ಲಿ ರಚೆಲ್ ಹೇಹೊ ಫ್ಲಿಂಟ್ ಟ್ರೋಫಿಯನ್ನು ಈ ಹಿಂದೆ ಮೂವರಷ್ಟೇ ಪಡೆದಿದ್ದಾರೆ. ಆಸ್ಟ್ರೇಲಿಯಾದ ಎಲಿಸ್ ಪೆರಿ, ಭಾರತದ ಸ್ಮೃತಿ ಮಂದಾನ ಮತ್ತು ಇಂಗ್ಲೆಂಡ್‌ನ ನಾಟ್ ಶಿವರ್ ಬ್ರಂಟ್ ಆ ಮೂವರು. ಮೂರೂ ಮಂದಿ ತಲಾ ಎರಡು ಬಾರಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಮೂರನೇ ಟಿ20 ಪಂದ್ಯ ಗೆದ್ದ ಇಂಗ್ಲೆಂಡ್ • ವರುಣ್‌ಗೆ 5 ವಿಕೆಟ್ ಗೊಂಚಲು

ಮಿಂಚಿದ ಲಿಯಾಮ್, ಡಕೆಟ್


ಬಿರುಸಿನ ಅರ್ಧ ಶತಕ ಗಳಿಸಿದ ಇಂಗ್ಲೆಂಡ್‌ನ ಆರಂಭ ಆಟಗಾರ ಬೆನ್ ಡಕೆಟ್ (ಪಿಟಿಐ ಚಿತ್ರ); ವರುಣ್ ಚಕ್ರವರ್ತಿ ಅವರನ್ನು ಅಭಿನಂದಿಸಿದ ನಾಯಕ ಸೂರ್ಯಕುಮಾರ್ ಯಾದವ್ (ಎಎಫ್‌ಪಿ ಚಿತ್ರ)

ರಾಜ್‌ಕೋಟ್ (ಪಿಟಿಐ): ಆರಂಭ ಆಟಗಾರ ಬೆನ್ ಡಕೆಟ್ ಅವರ ಸೊಗಸಾದ ಅರ್ಧ ಶತಕ, ಲಿಯಾಮ್ ಲಿವಿಂಗ್‌ಸ್ಟೋನ್ ಉಪಯುಕ್ತ ಆಟ, ನಂತರ ಬೌಲರ್‌ಗಳ ಉತ್ತಮ ಪ್ರದರ್ಶನದ ನೆರವಿನಿಂದ ಇಂಗ್ಲೆಂಡ್ ತಂಡ ಮೂರನೇ ಟಿ20 ಪಂದ್ಯದಲ್ಲಿ ಮಂಗಳವಾರ ಭಾರತ ತಂಡದ ಮೇಲೆ 26 ರನ್‌ಗಳ ಜಯ ಪಡೆಯಿತು.

ತನ್ಮೂಲಕ ಐದು ಪಂದ್ಯಗಳ ಸರಣಿಯನ್ನು ಜೀವಂತವಾಗಿರಿಸಿಕೊಡಿತು. ಸರಣಿಯ ಹಿನ್ನಡೆಯನ್ನು 1–2ಕ್ಕೆ ಇಳಿಸಿತು.

ನಿರಂಜನ್ ಶಾ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟ್ ಮಾಡಲು ಕಳಹಿಸಲ್ಪಟ್ಟ ಇಂಗ್ಲೆಂಡ್ ತಂಡವು, ವರುಣ್ ಚಕ್ರವರ್ತಿ (24ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ನಡುವೆಯೂ 9 ವಿಕೆಟ್‌ಗೆ 171 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ಆರಂಭದಲ್ಲಿ ಡಕೆಟ್ (51; 28ಎಸೆತ, 4X7, 6X2) ಅವರ ಬಿರುಸಿನ ಅರ್ಧಶತಕ ಮತ್ತು ಕೊನೆಯಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ (43; 24ಎ, 4X1, 6X5) ಅವರ ಉಪಯುಕ್ತ ಆಟ ಇದಕ್ಕೆ ಕಾರಣವಾಯಿತು.

ಭಾರತ ಉತ್ತಮ ಆರಂಭ ಪಡೆಯಲಿಲ್ಲ. ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಸಂಜು ಸ್ಯಾಮ್ಸನ್ ಮೂರನೇ ಸಲ ಜೋಫ್ರಾ ಆರ್ಚರ್ ಅವರಿಗೆ ವಿಕೆಟ್ ತೆತ್ತರು. ಆರಂಭ ಆಟಗಾರ ಅಭಿಷೇಕ್ ಶರ್ಮಾ (24) ಆರಂಭದಲ್ಲಿ ಕೆಲಕಾಲ ಅಬ್ಬರಿಸಿದರು. ನಂತರ ಹಾರ್ದಿಕ್ ಪಾಂಡ್ಯ (40, 35ಎ, 4X1, 6X2) ಚೇತರಿಕೆಯ ಆಟ ತೋರಿದರೂ, ರನ್ ವೇಗ ನಿರೀಕ್ಷಿಸಿದಷ್ಟು ಹೆಚ್ಚಲಿಲ್ಲ. ಇನ್ನೊಂದು ಕಡೆ ಬ್ಯಾಟರ್‌ಗಳು ರನ್‌ಗಳಿಸುವ ವೇಗದಲ್ಲಿ ವಿಕೆಟ್‌ಗಳನ್ನು ನೀಡಿದರು.

ಇದಕ್ಕೆ ಮೊದಲು, ದೀರ್ಘಕಾಲದ ನಂತರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮೊಹಮ್ಮದ್ ಶಮಿ ಪುನರಾಗಮನ ಮಾಡಿದರೂ ವಿಕೆಟ್ ಪಡೆಯಲು ವಿಫಲರಾದರು. ವರುಣ್ ಚಕ್ರವರ್ತಿ ಅವರ ಸ್ಪಿನ್ ಸುಳಿಯಲ್ಲಿ ಕೊಚ್ಚಿ ಹೋಗಬೇಕಿದ್ದ ಇಂಗ್ಲೆಂಡ್ ತಂಡಕ್ಕೆ ಡಕೆಟ್ ಅರ್ಧಶತಕದ ಮೂಲಕ ಆಸರೆಯಾದರು.

ಮೊಹಮ್ಮದ್ ಶಮಿ

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಫಿಲ್ ಸಾಲ್ಟ್ ವಿಕೆಟ್ ಉರುಳಿಸುವಲ್ಲಿ ಹಾರ್ದಿಕ್ ಯಶಸ್ವಿಯಾದರು. ಡಕೆಟ್ ಜೊತೆಗೂಡಿದ ನಾಯಕ ಬಟ್ಲರ್ (24; 22ಎ) ಇನಿಂಗ್ಸ್‌ಗೆ ಚೇತರಿಕೆ ನೀಡಲು ಪ್ರಯತ್ನಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು.

ಇನ್ನೊಂದೆಡೆ ಮಧ್ಯಮ ಹಂತದಲ್ಲಿ ವರುಣ್ ಗೂಗ್ಲಿ ಎಸೆತಗಳ ಕೌಶಲ ತೋರಿ ಪ್ರವಾಸಿ ತಂಡವನ್ನು ಕಾಡಿದರು. ಈ ನಡುವೆಯೂ ಲಿವಿಂಗ್‌ಸ್ಟೋನ್ ಮಿಂಚಿದರು. ಅವರಿಗೆ ಹಾರ್ದಿಕ್ ಪಾಂಡ್ಯ ಪೆವಿಲಿಯನ್ ಹಾದಿ ತೋರಿದರು. ವರುಣ್ ಅವರೊಂದಿಗೆ ರವಿ ಬಿಷ್ಣೋಯಿ ಕೂಡ ಉತ್ತಮವಾಗಿ ಬೌಲಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು:
ಇಂಗ್ಲೆಂಡ್: 20 ಓವರ್‌ಗಳಲ್ಲಿ 9ಕ್ಕೆ171 (ಬೆನ್ ಡಕೆಟ್ 51, ಜೋಸ್ ಬಟ್ಲರ್ 24, ಲಿಯಾಮ್ ಲಿವಿಂಗ್‌ಸ್ಟೋನ್ 43, ಹಾರ್ದಿಕ್ ಪಾಂಡ್ಯ 33ಕ್ಕೆ2, ವರುಣ ಚಕ್ರವರ್ತಿ 24ಕ್ಕೆ5); **ಭಾರತ:** 20 ಓವರುಗಳಲ್ಲಿ 9 ವಿಕೆಟ್‌ಗೆ 146 (ಅಭಿಷೇಕ್ ಶರ್ಮಾ 24, ಹಾರ್ದಿಕ್ ಪಾಂಡ್ಯ 40; ಜೋಫ್ರಾ ಆರ್ಚರ್ 33ಕ್ಕೆ2, ಬ್ರೈಡನ್ ಕರ್ಸ್ 29ಕ್ಕೆ2, ಜೇಮಿ ಓವರ್ಟನ್ 23ಕ್ಕೆ3).
ಪಂದ್ಯದ ಆಟಗಾರ: ವರುಣ್ ಚಕ್ರವರ್ತಿ

ಕಣಕ್ಕಿಳಿದ ಮೊಹಮ್ಮದ್ ಶಮಿ

ವೇಗಿ ಮೊಹಮ್ಮದ್ ಶಮಿ ಅವರು 14 ತಿಂಗಳುಗಳ ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಕಣಕ್ಕಿಳಿದರು. ಅವರು 3 ಓವರ್ ಬೌಲಿಂಗ್ ಮಾಡಿದರು. 25 ರನ್ ಕೊಟ್ಟರು. ಆದರೆ ಅವರಿಗೆ ಒಂದೂ ವಿಕೆಟ್ ಒಲಿಯಲಿಲ್ಲ. ಅವರು ಕೆಲವು ಎಸೆತಗಳಲ್ಲಿ ಸುಮಾರು 140 ಕಿ.ಮೀ ವೇಗದಲ್ಲಿ ಹಾಕಿದರು. ಆರಂಭದ ಸ್ಪೆಲ್‌ನಲ್ಲಿ ಎರಡು ಓವರ್ ಹಾಕಿದರು. ನಂತರ 19ನೇ ಓವರ್ ಹಾಕಿದರು. ಅದರಲ್ಲಿ ಅವರು 11 ರನ್ ಕೊಟ್ಟರು.ಶಮಿ ಅವರು ತಮ್ಮ ಹಿಮ್ಮಡಿಯ ಗಾಯದ ಶಸ್ತ್ರಚಿಕಿತ್ಸೆಯಿಂದಾಗಿ ದೀರ್ಘ ಕಾಲದಿಂದ ಆರೈಕೆಯಲ್ಲಿದ್ದರು. 2023ರ ನವೆಂಬರ್‌ನಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಅವರು ಆಡಿದ ನಂತರ ಅವರು ಕಣಕ್ಕಿಳಿದಿರಲಿಲ್ಲ. ಶಮಿ ಆಡಿದ್ದರಿಂದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರಿಗೆ ವಿಶ್ರಾಂತಿ ನೀಡಲಾಯಿತು.

'2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತ ಬದ್ಧ'

ಡೆಹ್ರಾಡೂನ್‌ನಲ್ಲಿ ರಾಷ್ಟ್ರೀಯ ಕ್ರೀಡೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ಡೆಹ್ರಾಡೂನ್‌ನಲ್ಲಿ ಮಂಗಳವಾರ ರಾಷ್ಟ್ರೀಯ ಕ್ರೀಡೆಗಳ ಉದ್ಘಾಟನೆ ವೇಳೆ ನೃತ್ಯ ಪ್ರದರ್ಶನ ನಡೆಯಿತು. ಪಿಟಿಐ ಚಿತ್ರ

ಡೆಹ್ರಾಡೂನ್ (ಪಿಟಿಐ): ವೈಭವೋಪೇತ ಅಲ್ಲದಿದ್ದರೂ ವರ್ಣರಂಜಿತ ಸಮಾರಂಭದಲ್ಲಿ 38ನೇ ರಾಷ್ಟ್ರೀಯ ಕ್ರೀಡೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಲ್ಲಿ ಚಾಲನೆ ನೀಡಿದರು. ಈ ವೇಳೆ 2036ರ ಒಲಿಂಪಿಕ್ ಆತಿಥ್ಯ ವಹಿಸುವುದಕ್ಕೆ ಭಾರತದ ಬದ್ಧತೆಯನ್ನು ಮೋದಿ ಪುನ-ರುಚ್ಚರಿಸಿದರು.

ಸಮಾರಂಭದಲ್ಲಿ ಉತ್ತರಾಖಂಡದ ಧಾರ್ಮಿಕ ಪರಂಪರೆ, ಜೀವವೈವಿಧ್ಯ ಸಾರುವ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ಪಥಸಂಚಲನದ ನಂತರ ಕ್ರೀಡಾ ಜ್ಯೋತಿ ಸ್ವೀಕರಿಸಿದ ಮೋದಿ, ನಂತರ ಕ್ರೀಡಾಕೂಟದ ಅಧಿಕೃತ ಆರಂಭವನ್ನು ಸಾರಿದರು.

ಸುಮಾರು 10,000 ಕ್ರೀಡಾಪಟುಗಳು ಇಲ್ಲಿ 32 ವಿವಿಧ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಡೆಹ್ರಾಡೂನ್ ಕೇಂದ್ರ ವಾಗಿಟ್ಟುಕೊಂಡು ರಾಜ್ಯದ ಏಳು ನಗರಗಳಲ್ಲಿ ವಿವಿಧ ಸ್ಪರ್ಧೆಗಳು ನಡೆಯಲಿವೆ.

ಫೆಬ್ರುವರಿ 14ರವರೆಗೆ ನಡೆಯುವ ಈ ಕ್ರೀಡೆಗಳಲ್ಲಿ 450 ಚಿನ್ನದ ಪದಕಗಳಿಗೆ, ಇಷ್ಟೇ ಸಂಖ್ಯೆಯ ಬೆಳ್ಳಿ, ಕಂಚಿನ ಪದಕಗಳಿಗೆ ಪೈಪೋಟಿ ನಡೆಯಲಿದೆ.

'ನಿಮ್ಮ ಸಾಮರ್ಥ್ಯವೃದ್ಧಿಗೆ ನಾವು ಶ್ರಮಿಸುತ್ತೇವೆ. ನಿಮಗೆ ಬೆಂಬಲವಾಗಿ ನಿಲ್ಲುತ್ತೇವೆ. ದೇಶದ ಅಭಿವೃದ್ಧಿಗೆ ಕ್ರೀಡೆ ಬಹು ಮುಖ್ಯ ಅಂಶವಾಗಿದೆ ಎಂದು ನಾವು ಪರಿಗಣಿಸುತ್ತೇವೆ' ಎಂದು ಅಥ್ಲೀಟ್‌ಗಳನ್ನುದ್ದೇಶಿಸಿ ಮೋದಿ ತಿಳಿಸಿದರು.

'ಏಕ್ ಭಾರತ್, ಶ್ರೇಷ್ಠ ಭಾರತ್'ನ ಪರಿಕಲ್ಪನೆಯ ಸೊಬಗು ಇಲ್ಲಿ ಮೇಳೈಸಿದೆ ಎಂದು ಮೋದಿ ಬಣ್ಣಿಸಿದರು.

'ಬೊಜ್ಜು ಬೆಳೆಯದಂತೆ ನೋಡಿಕೊಳ್ಳಿ, ಆಹಾರದಲ್ಲಿ ಎಣ್ಣೆಯ ಪ್ರಮಾಣ ಕಡಿಮೆ ಮಾಡಿ. ನಿಮ್ಮ ದಿನಚರಿಯಲ್ಲಿ ನಡಿಗೆ, ವ್ಯಾಯಾಮಕ್ಕೆ ಸ್ಥಾನವಿರಲಿ' ಎಂದು ಮೋದಿ ಆರೋಗ್ಯ ಕಾಪಾಡಲು ಕೆಲವು ಸೂತ್ರಗಳನ್ನು ಮುಂದಿಟ್ಟರು.

'ತಾಂಡವ್' ಹೆಸರಿನಲ್ಲಿ ಶಾಸ್ತ್ರೀಯ ನೃತ್ಯದ ನಂತರ ಉದ್ಘಾಟನೆ ನಡೆಯಿತು. ಬಾಲಿವುಡ್ ಗಾಯಕ ಜುಬಿನ್ ನೌಟಿಯಾಲ್ ಅವರು ಹಾಡು ಹಾಡಿ ರಂಜಿಸಿದರು. ಕೊರೆಯುವ ಚಳಿಯ ನಡುವೆಯೂ ರಾಜೀವ ಗಾಂಧಿ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗದಲ್ಲಿ ಅಂದಾಜು 25000 ಪ್ರೇಕ್ಷಕರು ಕಾರ್ಯಕ್ರಮ ವೀಕ್ಷಿಸಿದರು.

ಉತ್ತರಾಖಂಡ ರಾಜ್ಯಪಾಲ ಜನರಲ್ ಗುರ್ಮಿತ್ ಸಿಂಗ್, ಕ್ರೀಡಾ ಖಾತೆ ರಕ್ಷಾ ಖಡ್ಸೆ, ಉತ್ತರಾಖಂಡ ಕ್ರೀಡಾ ಸಚಿವೆ ರೇಖಾ ಆರ್ಯ ಮತ್ತಿತರರು ಗಣ್ಯರಲ್ಲಿ ಒಳಗೊಂಡಿದ್ದರು. ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ, ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ ಮುಖ್ಯಸ್ಥ ಕ್ರಿಸ್ ಜೆಂಕಿನ್ಸ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಇದೇ ರಾಜ್ಯದ ಅಲ್ಮೋರಾದರಾದ ಬ್ಯಾಡ್ಮಿಂಟನ್ ತಾರೆ ಲಕ್ಷ್ಯ ಸೇನ್ ಕ್ರೀಡಾ ಜ್ಯೋತಿಯನ್ನು ವೇದಿಕೆಗೆ ತಂದು ಮೋದಿ ಅವರಿಗೆ ಹಸ್ತಾಂತರಿಸಿದರು. ಸೇನ್ ಕ್ರೀಡಾಪಟುಗಳಿಗೆ ಪ್ರಮಾಣ ಬೋಧಿಸಿದರು.

ಕಳರಿಪಯಟ್ಟು, ಯೋಗಾಸನ, ಮಲ್ಲಕಂಭ ಮತ್ತು ರ‍್ಯಾಫ್ಟಿಂಗ್ – ಇವು ಈ ಬಾರಿಯ ಪ್ರದರ್ಶನ ಕ್ರೀಡೆಗಳಾಗಿವೆ. ಕ್ರೀಡೆಗಳನ್ನು ಪರಿಸರ ಸ್ನೇಹಿಯಾಗಿಸಲು ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಲಾಗಿದೆ.

ನಾಯಕತ್ವ ಬೇಡವೆಂದ ವಿರಾಟ್ ಕೊಹ್ಲಿ

ನವದೆಹಲಿಯ ಅರುಣ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದ ವಿರಾಟ್ ಕೊಹ್ಲಿ ಅವರು ತಮ್ಮ ಹಳೆಯ ಮಿತ್ರ, ಕ್ರಿಕೆಟಿಗ ಶಾವೇಜ್ ಅವರನ್ನು ಭೇಟಿಯಾದ ಕ್ಷಣ –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ರೇಲ್ವೆಸ್ ತಂಡದ ಎದುರು ಇದೇ 30ರಿಂದ ನಡೆಯಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ದೆಹಲಿ ತಂಡದ ನಾಯಕತ್ವ ವಹಿಸಿಕೊಳ್ಳಲು ವಿರಾಟ್ ಕೊಹ್ಲಿ ಸಮ್ಮತಿಸಲಿಲ್ಲ. ಸದ್ಯ ತಂಡವನ್ನು ಮುನ್ನಡೆಸುತ್ತಿರುವ ಆಯುಷ್ ಬಡೋನಿ ಅವರೇ ನಾಯಕರಾಗಿ ಮುಂದುವರಿಯಲಿ ಎಂದು ಹೇಳಿದ್ದಾರೆ.

12 ವರ್ಷಗಳ ನಂತರ ಅವರು ರಣಜಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿದ್ದಾರೆ. ಅದಕ್ಕಾಗಿ ಮಂಗಳವಾರ ಅಭ್ಯಾಸ ಆರಂಭಿಸಿದರು. ತಮ್ಮ ತವರು ದೆಹಲಿ ತಂಡದ ಆಟಗಾರರೊಂದಿಗೆ ತಾಲೀಮು ನಡೆಸಿದರು.

'ತಂಡದ ನಾಯಕತ್ವವನ್ನು ವಹಿಸಿಕೊಳ್ಳುವಂತೆ ವಿರಾಟ್ ಅವರನ್ನು ಕೇಳಿದೆವು. ಆದರೆ ಅವರು ಆಯುಷ್ ಅವರೇ ಮುಂದುವರಿಯಬೇಕು ಎಂದಷ್ಟೇ ತಿಳಿಸಿದರು' ಎಂದು ಡಿಡಿಸಿಎ ಮೂಲಗಳು ತಿಳಿಸಿವೆ.

ಕೊಹ್ಲಿ ಅವರು ಆಡುತ್ತಿರುವುದರಿಂದ ಈ ಪಂದ್ಯದ ನೇರಪ್ರಸಾರವನ್ನು ಜಿಯೊ ಸಿನಿಮಾ ಆ್ಯಪ್ ನೀಡಲಿದೆ.

ಬಿಸಿಸಿಐ ನಿಯಮದ ಪ್ರಕಾರ ರಣಜಿ ಟೂರ್ನಿ ಸುತ್ತಿನಲ್ಲಿರುವ ಮಹತ್ವದ ಪಂದ್ಯವನ್ನು ಟಿ.ವಿ ಮತ್ತು ಆ್ಯಪ್‌ನಲ್ಲಿ ನೇರಪ್ರಸಾರ ಮಾಡಲಾಗುತ್ತದೆ. ಈ ಸುತ್ತಿನಲ್ಲಿ ಕರ್ನಾಟಕ ಮತ್ತು ಹರಿಯಾಣ ಪಂದ್ಯವನ್ನು ನೇರಪ್ರಸಾರ ಮತ್ತು ಲೈವ್ ಸ್ಟ್ರೀಮ್ ಮಾಡಲು ನಿಗದಿಯಾಗಿದೆ.

ಪಂಜಾಬ್ –ಬಂಗಾಲ ಮತ್ತು ಬರೋಡಾಜಮ್ಮು ಕಾಶ್ಮೀರ ತಂಡಗಳ ನಡುವಣ ಪಂದ್ಯಗಳನ್ನು ಆ್ಯಪ್ ಮೂಲಕ ಲೈವ್ ಸ್ಟ್ರೀಮ್ ಮಾಡಲಾಗುತ್ತಿದೆ. ಈ ವೇಳಾಪಟ್ಟಿಯು ಪೂರ್ವನಿಗದಿಯಾಗಿರುತ್ತದೆ. ಒಂದೊಮ್ಮೆ ಕೊಹ್ಲಿ ಆಡದೇ ಹೋಗಿದ್ದರೆ ಈ ಪಂದ್ಯವು ನೇರಪ್ರಸಾರಗೊಳ್ಳುವ ಸಾಧ್ಯತೆಗಳು ಇರಲಿಲ್ಲ. ಆದರೆ ಕೊಹ್ಲಿ ಆಕರ್ಷಣೆಯಿಂದಾಗಿ ಈ ಪಂದ್ಯ ಮಹತ್ವ ಪಡೆದುಕೊಂಡಿದೆ.

'ಜಿಯೊ ಸಿನಿಮಾ ಆ್ಯಪ್ ಈ ಪಂದ್ಯವನ್ನು ನೇರಪ್ರಸಾರ ಮಾಡಲಿದೆ. ದೆಹಲಿಯಿಂದ ಹೊರಗಿರುವ ಕೊಹ್ಲಿ ಅಭಿಮಾನಿಗಳೂ ತಮ್ಮ ನೆಚ್ಚಿನ ತಾರೆಯ ಆಟವನ್ನು ಕಣ್ತುಂಬಿಕೊಳ್ಳಬಹುದು. ಅಭಿಮಾನಿಗಳು ಹೆಚ್ಚು ಚಿಂತಿಸಬೇಕಾಗಿಲ್ಲ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೊಹ್ಲಿ ಅವರು 2012–13ರ ರಣಜಿ ಟೂರ್ನಿಯಲ್ಲಿ ಉತ್ತರಪ್ರದೇಶದ (ಗಾಜಿಯಾಬಾದಿನಲ್ಲಿ) ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಆಡಿದ್ದರು. ಅದರ ನಂತಡರ ಅವರು ಈಗಲೇ ದೇಶಿ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿದ್ದಾರೆ.

ಅರುಣ ಜೇಟ್ಲಿ ಕ್ರೀಡಾಂಗಣದಲ್ಲಿ ಅವರು ದೆಹಲಿ ತಂಡದ ಸಹ ಆಟಗಾರರೊಂದಿಗೆ ಬೆರೆತು ಅಭ್ಯಾಸ ಮಾಡಿದರು. 15 ನಿಮಿಷ ಫುಟ್‌ಬಾಲ್ ಆಡಿ, ವಾರ್ಮ್ ಅಪ್ ವ್ಯಾಯಾಮಗಳನ್ನು ಮಾಡಿದರು.

ಸಿ.ಕೆ.ನಾಯ್ಡು ಟ್ರೋಫಿ: ಕರ್ನಾಟಕಕ್ಕೆ ಜಯ

ಬೆಂಗಳೂರು: ಸ್ಪಿನ್ನರ್ ಪಾರಸ್ ಗುರುಭಕ್ಷ್ ಆರ್ಯ (149ಕ್ಕೆ 5) ಅವರ ಅಮೋಘ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಮಂಗಳವಾರ ಆಲೂರು ಮೈದಾನದಲ್ಲಿ ನಡೆದ ಸಿಕೆ ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತರಾಖಂಡ ವಿರುದ್ಧ 5 ವಿಕೆಟ್‌ಗಳ ಗೆಲುವು ಪಡೆಯಿತು.

ಎರಡನೇ ಇನ್ನಿಂಗ್ಸ್‌ನಲ್ಲಿ 70 ರನ್‌ಗಳ ಹಿನ್ನಡೆಯೊಂದಿಗೆ 5 ವಿಕೆಟ್ ಕಳೆದುಕೊಂಡಿದ್ದ ಉತ್ತರಾಖಂಡ ತಂಡ 479 ರನ್‌ಗಳಿಗೆ ಸರ್ವಪತನ ಕಂಡಿತು. ಉತ್ತರಾಖಂಡ ತಂಡದ ಪಿ.ಡ್ವೆಲಿ ಅಜೇಯ 129 ರನ್ ಹೊಡೆದರು. ಕರ್ನಾಟಕ ತಂಡಕ್ಕೆ ಕೇವಲ 90 ರನ್ ಗುರಿ ನೀಡಿದರು. ಕರ್ನಾಟಕ ಪರ ಪಾರಸ್ ಗುರುಭಕ್ಷ್ ಆರ್ಯ 5 ವಿಕೆಟ್ ಪಡೆದು ಮಿಂಚಿದರು.ಸಾಧಾರಣ ಗುರಿ ಬೆನ್ನತ್ತಿದ ಕರ್ನಾಟಕ 5 ವಿಕೆಟ್ ನಷ್ಟಕ್ಕೆ 94 ರನ್ ಪೇರಿಸಿತು.

ತ್ರಿಶಾ ಚಾರಿತ್ರಿಕ ಶತಕ: ಸೆಮಿಫೈನಲ್‌ಗೆ ಭಾರತ

ಕ್ವಾಲಾಲಂಪುರ (ಪಿಟಿಐ): ಆರಂಭ ಆಟಗಾರ್ತಿ ತ್ರಿಶಾ ಗೊಂಗಡಿ, ಮಹಿಳೆಯರ 19 ವರ್ಷದೊಳಗಿನ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶತಕ ಬಾರಿಸಿದ ಮೊದಲನೆಯವರೆಂಬ ದಾಖಲೆಗೆ ಪಾತ್ರರಾದರು. ಅವರ ಮಿಂಚಿನ ಶತಕದ ನೆರವಿನಿಂದ ಭಾರತ ತಂಡ ಮಂಗಳವಾರ ನಡೆದ ಸೂಪರ್ ಸಿಕ್ಸ್ ಒಂದನೇ ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವನ್ನು 150 ರನ್‌ಗಳಿಂದ ಸುಲಭವಾಗಿ ಸೋಲಿಸಿತು.

ತ್ರಿಶಾ ವೈವಿಧ್ಯಮಯ ಹೊಡೆತಗಳಿದ್ದ 59 ಎಸೆತಗಳ ಇನಿಂಗ್ಸ್‌ನಲ್ಲಿ ಅಜೇಯ 110 ರನ್ ಬಾರಿಸಿದರು. ಇದರಲ್ಲಿ 13 ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳು ಒಳಗೊಂಡಿದ್ದವು. ಅವರು ಮೊದಲ ವಿಕೆಟ್‌ಗೆ ವಿಕೆಟ್ ಕೀಪರ್ ಕಮಲಿನಿ (51, 42 ಎಸೆತ) ಅವರೊಂದಿಗೆ 147 ರನ್ ಸೇರಿಸಿದ್ದರು. ಭಾರತ ತನ್ನ ಪಾಲಿನ 20 ಓವರುಗಳಲ್ಲಿ 1 ವಿಕೆಟ್‌ಗೆ 208 ರನ್ ಬಾರಿಸಿತು.

ಉತ್ತರವಾಗಿ ಸ್ಕಾಟ್ಲೆಂಡ್ 14 ಓವರುಗಳಲ್ಲಿ 58 ರನ್‌ಗಳಿಗೆ ಉರುಳಿತು. ಇನ್ನೊಂದು ಪಂದ್ಯದಲ್ಲಿ ಬಾಂಗ್ಲಾದೇಶ 10 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು.ಸ್ಕೋರುಗಳು: ಭಾರತ: 20 ಓವರುಗಳಲ್ಲಿ 1 ವಿಕೆಟ್‌ಗೆ 208 (ಜಿ.ಕಮಲಿನಿ 51, ಗೊಂಗಡಿ ತ್ರಿಷಾ ಔಟಾಗದೇ 110, ಸಾನಿಕಾ ಚಾಲ್ಕೆ ಔಟಾಗದೇ 29): ಸ್ಕಾಟ್ಲೆಂಡ್: 14 ಓವರುಗಳಲ್ಲಿ 58 (ಆಯುಷಿ ಶುಕ್ಲಾ 8ಕ್ಕೆ4, ವೈಷ್ಣವಿ ಶರ್ಮಾ 5ಕ್ಕೆ3, ತ್ರಿಷಾ 6ಕ್ಕೆ3). **ಪಂದ್ಯದ ಆಟಗಾರ್ತಿ:** ಗೊಂಗಡಿ ತ್ರಿಷಾ.

ಅನುಜ್, ಪ್ರೀತಮ್‌ಗೆ ಚೆಸ್ ಪ್ರಶಸ್ತಿ

ಬೆಂಗಳೂರು: ಅನುಜ್ ಸರವಣನ್ ಮತ್ತು ಪ್ರೀತಮ್ ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿ ಆಶ್ರಯದಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಭಾನುವಾರ ಹಮ್ಮಿಕೊಂಡ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ 16 ವರ್ಷದೊಳಗಿನವರ ಮತ್ತು 10 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಅನುಜ್ 6 ಸುತ್ತುಗಳಲ್ಲಿ ಗರಿಷ್ಠ 6 ಪಾಯಿಂಟ್ಸ್ ಕಲೆಹಾಕಿದರು. ಆಯುಷ್ ರವಿ ಲಕ್ಕುಂಡಿ (4.5), ಅನ್ವಿತ್ ಭಟ್, ಗುಹಾನ್ ಎ (4), ಸಾಯಿ ಸಹರ್ಷ್ ಅವರು ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

10 ವರ್ಷದೊಳಗಿನವರ ವಿಭಾಗದಲ್ಲಿ ಪ್ರೀತಮ್ 6 ಸುತ್ತುಗಳಿಂದ 5 ಪಾಯಿಂಟ್ ಪಡೆದರು. ಆಧವ್ ಮಹಿ ಮತ್ತು ನಿಹಾರ್ ಕೂಡ ಇಷ್ಟೇ ಪಾಯಿಂಟ್ಸ್ ಸಂಗ್ರಹಿಸಿದರೂ ಟೈಬ್ರೇಕರ್‌ನಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ರಿತ್ವಿಕ್ ಮತ್ತು ಅವ್ಯಕ್ತ್ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು. ಹರ್ಷಿಕಾ ಬಾಲಕಿಯರ ವಿಭಾಗದ ಉತ್ತಮ ಆಟಗಾರ್ತಿ ಎನಿಸಿದರು.

ದೀರ್ಘ ಕಾಲದ ನಂತರ ದೇಶಿ ಟೂರ್ನಿಯಲ್ಲಿ ಕಣಕ್ಕೆ

ತವರಿನಂಗಳದಲ್ಲಿ ರಾಹುಲ್ ರಣಜಿ ಅಭ್ಯಾಸ

ಪ್ರಜಾವಾಣಿ ವಾರ್ತೆ

ಕರ್ನಾಟಕ ತಂಡದ ಕೆ.ಎಲ್‌. ರಾಹುಲ್, ಅಭಿಲಾಷ್ ಶೆಟ್ಟಿ, ಪ್ರಸಿದ್ಧ ಕೃಷ್ಣ ಮತ್ತು ವಿದ್ವತ್ ಕಾವೇರಪ್ಪ ಅವರು ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ-ದಲ್ಲಿ ಮಂಗಳವಾರ ಕರ್ನಾಟಕ ಕ್ರಿಕೆಟ್ ತಂಡದ ನೆಟ್ಸ್ ತಾಲೀಮು ಎಂದಿನಂತೆ ಇರಲಿಲ್ಲ. ತಂಡದ ಯುವ ಪ್ರತಿಭಾನ್ವಿತ ಆಟಗಾರರ ಕಂಗಳಲ್ಲಿ ಕುತೂಹಲ ಇಣುಕುತಿತ್ತು. ಅನುಭವಿಗಳಿಗೆ ತಮ್ಮ ಹಳೆಯ ಸ್ನೇಹಿತನೊಂದಿಗೆ ಅಭ್ಯಾಸದಲ್ಲಿ ಪೈಪೋಟಿ ನಡೆಸುವ ಹುಮ್ಮಸ್ಸು ಗರಿಗೆದರಿತ್ತು.

ಭಾರತ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ತಂಡಕ್ಕೆ ಮರಳಿ ಬಂದಿದ್ದು ಕರ್ನಾಟಕ ಬಳಗದಲ್ಲಿ ಲವಲವಿಕೆ ಕಂಡಿತು. ಗುರುವಾರ ಇಲ್ಲಿ ಆರಂಭವಾಗಲಿರುವ ಹರಿಯಾಣ ವಿರುದ್ಧದ ರಣಜಿ ಪಂದ್ಯದಲ್ಲಿ ರಾಹುಲ್ ಆಡಲಿದ್ದಾರೆ. ಅವರು ದೀರ್ಘ ಸಮಯದ ನಂತರ ರಣಜಿ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

ಭಾರತ ತಂಡದ ಆಟಗಾರರು ತಮ್ಮ ಬಿಡುವಿನಲ್ಲಿ ದೇಶಿ ಕ್ರಿಕೆಟ್‌ನಲ್ಲಿ ಆಡಬೇಕು ಎಂದು ಬಿಸಿಸಿಐ ಈಚೆಗೆ ಸೂಚನೆ ನೀಡಿರುವುದರಿಂದ ರಾಹುಲ್ ಇಲ್ಲಿ ಆಡಲಿದ್ದಾರೆ. ಅವರು ಹೋದ ವಾರ ನಡೆದ ಪಂಜಾಬ್ ಎದುರಿನ ಪಂದ್ಯದಲ್ಲಿಯೇ ಆಡಬೇಕಿತ್ತು. ಆದರೆ ತಮ್ಮ ಕೈಗೆ ಗಾಯವಾಗಿದೆ ಎಂದು ಕಾರಣ ನೀಡಿ, ಪಂದ್ಯದಲ್ಲಿ ಆಡಿರಲಿಲ್ಲ. ಇದೀಗ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಅವರು ಕಣಕ್ಕಿಳಿಯುತ್ತಿದ್ದಾರೆ. ಕರ್ನಾಟಕ ತಂಡಕ್ಕೆ ಈ ಪಂದ್ಯದಲ್ಲಿ ಜಯಿಸುವುದು ಮಹತ್ವದ್ದಾಗಿದೆ.

ತಂಡದ ನವಪ್ರತಿಭೆಗಳಾದ ಕೆ.ವಿ. ಅನೀಶ್, ಆರ್. ಸ್ಮರಣ್, ಕೆ.ಎಲ್. ಶ್ರೀಜಿತ್, ಹಾರ್ದಿಕ್ ರಾಜ್, ಯಶೋವರ್ಧನ್ ಪರಂತಾಪ್, ಅಭಿಲಾಷ್ ಶೆಟ್ಟಿ ಮತ್ತು ಮೊಹಸೀನ್ ಖಾನ್ ಅವರಿಗೆ ರಾಹುಲ್ ಅವರೊಂದಿಗೆ ಮೊದಲ ಬಾರಿಗೆ ರಣಜಿ ಟೂರ್ನಿಯಲ್ಲಿ ಡ್ರೆಸಿಂಗ್ ರೂಮ್ ಹಂಚಿಕೊಳ್ಳುವ ಪುಳಕ. ನಾಯಕ ಮಯಂಕ್ ಅಗರವಾಲ್, ಪ್ರಸಿದ್ಧಕೃಷ್ಣ ಹಾಗೂ ದೇವದತ್ತ ಪಡಿಕ್ಕಲ್ ಅವರಿಗೆ ರಾಹುಲ್ ಜೊತೆಗೆ ಭಾರತ ಮತ್ತು ಈ ಹಿಂದೆ ಕರ್ನಾಟಕದಲ್ಲಿ ಆಡಿದ ಅನುಭವ ಇದೆ. ರಾಹುಲ್ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಎಲ್ಲ ಆಟಗಾರರೊಂದಿಗೆ ಫುಟ್‌ಬಾಲ್, ಡ್ರಿಲ್ಸ್ ಮತ್ತು ಕ್ಯಾಚಿಂಗ್ ಅಭ್ಯಾಸದಲ್ಲಿ ತೊಡಗಿಕೊಂಡರು.